ನುಂಕೆಮಲೆ ಸಿದ್ಧೇಶ್ವರ ಪುರಾಣ: ಒಂದು ಅಧ್ಯಯನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ನೊಂದಣಿ ಸಂಖ್ಯೆ:೧೮೦೧೦೫೦೩೦೦೦೬

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿದ್ಯಾರಣ್ಯ-೫೮೩ ೨೭೬

೨೦೧೮-೧೯

1420

ನುಂಕೆಮಲೆ ಸಿದ್ಧೇಶ್ವರ ಪುರಾಣ: ಒಂದು ಅಧ್ಯಯನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ)

ಸಂಶೋಧಕರು

ನೊಂದಣಿ ಸಂಖ್ಯೆ:೧೮೦೧೦೫೦೩೦೦೦೬

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ.

ವಿದ್ಯಾರಣ್ಯ-೫೮೩೨೭೬

೨೦೧೮-೧೯

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ,

೧.೧ ಪ್ರಸ್ತಾವನೆ

೧.೨ ಉದ್ದೇಶ

೧.೩ ವ್ಯಾಪ್ತಿ

೧.೪ ಸ್ವರೂಪ

ಅಧ್ಯಾಯ-೧

ಅಧ್ಯಾಯನದ ಉದ್ದೇಶ, ಸ್ವರೂಪ, ವ್ಯಾಪ್ತಿ

ಪ್ರಸ್ತಾವನೆ

ಪ್ರಾಚೀನ ಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವನು ಒಂದೆಡೆ ನೆಲೆ ನಿಲ್ಲಲು ಸಹಸ್ರಾರು ವರ್ಷಗಳೇ ಬೇಕಾದವು ಇಂತಹ ಮಾನವನು ಗವಿ, ಪೊಟರೆ, ಕಲ್ಲುಸೆರೆ, ಬಂಡೆಗಳಲ್ಲಿ ಜೀವನ ಸಾಗಿಸುತ್ತಿದ್ದನು. ಹಾಗೂ ಇವನಿಗೆ ಆಹಾರವಾಗಿ ಗೆಡ್ಡೆ, ಗೆಣಸು, ಹಣ್ಣು ಹಂಪಲು ತಿನ್ನುತ್ತಾ ಜೀವನ ಸಾಗಿಸುತ್ತಿದ್ದನು. ಇಂತಹ ದಿನಮಾನಗಳಲ್ಲಿ ಬರುಬರುತ್ತಾ ಈತ ಬೇಟೆ ಆಡುವುದನ್ನು ಕಲಿತುಕೊಂಡನು. ಹಲವಾರು ಪ್ರಾಣಿಗಳನ್ನು ಪಕ್ಷಿಗಳನ್ನು ಬೇಟೆಯಾಡಿ ಸುಟ್ಟು ತಿಂದು ಬದುಕು ಕಟ್ಟಿಕೊಂಡಿದ್ದ ನಂತರ ದಿನಮಾನಗಳಲ್ಲಿ ಪಶುಸಂಗೋಪನೆ ಕೃಷಿಯನ್ನು ರೂಢಿಸಿಕೊಂಡು ಬಂದು ಕುಟುಂಬ, ಸಮಾಜ, ಸಮುದಾಯವನ್ನು ಕಟ್ಟಿಕೊಂಡನು. ಆದರೆ ಯಾವುದೊ ರೂಪದಲ್ಲಿ ರಾಕ್ಷಸರು ಇಂತಹ ನರಮಾನವರನ್ನು ಹಿಂಸೆ ಮಾಡುತ್ತಾ ಅವರನ್ನು ಕೊಲ್ಲುವುದು ಹೆಚ್ಚಾಗಿತ್ತು ಈ ಸಂದರ್ಭದಲ್ಲಿ ಭೂಲೋಕವನ್ನೆ ಕಾಯುವ ಶಿವ ಪಾರ್ವತಿಯರು ತನ್ನ ಮೈಮೇಲಿನ ಬೆವರಿನ ಮಣ್ಣಿನಿಂದ ಒಬ್ಬ ದೈವಿ ಪುರುಷನನ್ನು ಸೃಷ್ಟಿಸಿ ಭೂಮಿಗೆ ಕಳುಹಿಸಿದರು ಎಂಬ ನಂಬಿಕೆಯಿದೆ. ಭಾರತೀಯ ಪರಂಪರೆಯಲ್ಲಿ ಪುಣ್ಯ ಕ್ಷೇತ್ರಗಳಿಗೆ ಹಾಗೂ ಪವಿತ್ರ ತೀರ್ಥ ಸ್ಥಳಗಳಿಗೆ ಕೊರತೆಯಿಲ್ಲ. ಆಧ್ಯಾತ್ಮೀಕತೆಯ ತವರೂರಾಗಿ ಅನೇಕ ಪುಣ್ಯ ಪುರುಷರ ಜೀವನ ಚರಿತ್ರೆಗೆ ಆಧಾರವಾಗಿ ಪ್ರಖ್ಯಾತ ಪಡೆದಿದೆ. ಮತ್ತೆ ಕೆಲವು ಕ್ಷೇತ್ರಗಳು ಪುರಾಣ ಸಂಗತಿಗಳಿಂದ, ಪವಾಡ ಕತೆಯಿಂದ ಪ್ರಸಿದ್ಧಿ ಪಡೆದಿವೆ.

ಉದಾಹರಣೆಗಾಗಿ ನೋಡುವುದಾದರೆ ನಾಯಕನಹಟ್ಟಿ ಪುಣ್ಯ ಕ್ಷೇತ್ರದ ಶ್ರೀ ಗುರು ತಿಪ್ಪೇರುದ್ರಸ್ವಾಮಿಯ ಪವಾಡವನ್ನು ಗಮನಿಸಬಹುದು. ಅವರು ಸತ್ತ ಎಮ್ಮೆಯನ್ನು ಬದುಕಿಸಿದ್ದು, ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯವನ್ನು ಕೊಟ್ಟಿದ್ದು ಹಾಗೂ ಕೊಂಡ್ಲಹಳ್ಳಿ ಎಂಬ ಗ್ರಾಮದಲ್ಲಿ ಹೋಗುವಾಗ ಆ ಸ್ಥಳದಲ್ಲಿ ಶಿವನ ಪೂಜೆಗೆ ಮತ್ತು ಊಟಕ್ಕೆಂದು ಕುಳಿತಾಗ ಸುತ್ತಮುತ್ತಲು ಎಲ್ಲಿಯೂ ನೀರಿನ ಸುಳಿವೇ ಕಾಣದ ಸಂದರ್ಭದಲ್ಲಿ ಎರಡು ಮೂರು ಅಡಿ ನೆಲ ಅಗೆದಾಗ ಅಲ್ಲಿ ಗಂಗಾ ಮಾತೆಯು ಉಕ್ಕಿ ಹರಿಯುತ್ತಿದ್ದಳು. ಇದನ್ನು ಕಂಡು ಆ ಸ್ಥಳಕ್ಕೆ 'ಬಿಳಿ ನೀರು ಚಿಲುಮೆ' ಎಂಬ ಹೆಸರನ್ನಿಟ್ಟು ಪುಣ್ಯಕ್ಷೇತ್ರ ಮಾಡಿದರು. ನಂತರದಲ್ಲಿ ಮಣ್ಣಿನ ಕುಪ್ಪೆಯನ್ನು ಮಾಡಿ ತನ್ನ ಬೆತ್ತದಿಂದ ಮುಟ್ಟಿಕೊಂಡು ಬಂದಾಗ ಅದರಲ್ಲಿ ಅವರ ಅವರ

ಶ್ರಮಕ್ಕೆ ತಕ್ಕಂತೆ ಪ್ರತಿಫಲ ದೊರೆತಿದ್ದು ಅದಕ್ಕಾಗಿ 'ಮಾಡಿದಷ್ಟು ನೀಡು ಭಿಕ್ಷೆ' ಎಂಬ ತತ್ವದಂತೆ ಕೆಲಸ ಮಾಡಿದಷ್ಟು ಪ್ರತಿಫಲ ಸಿಗುವುದೆಂಬುದು ಈ ಪವಾಡದಿಂದ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ದೈವತ್ವದ ಪರಿಕಲ್ಪನೆಯಿಂದ ಭೂಮಿಯಲ್ಲಿ ಮಾನವರಿಗೆ ಹಿಂಸೆಯನ್ನು ಮಾಡುವ ರಾಕ್ಷಸರನ್ನು ಸಂಹಾರ ಮಾಡಲೆಂದೆ ಭೈರವ ದೈವ ಪುರುಷನಾಗಿ ಹುಟ್ಟುತ್ತಾನೆ. ಈ ದೃಷ್ಟಿಯಿಂದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಶ್ರೀ ನುಂಕೆಮಲೆ ಬೆಟ್ಟದಲ್ಲಿ ನೆಲೆಸುತ್ತಾನೆ. ಈ ಮಹಾನ್ ಭಾವನನ್ನು ಕುರಿತು ಮೌಖಿಕ ರೂಪದಲ್ಲಿ ಹಲವಾರು ಚರಿತ್ರೆಗಳನ್ನು ಕಟ್ಟಿಕೊಡುತ್ತದೆ. ಶ್ರೀ ನುಂಕೆಮಲೆ ಸಿದ್ದೇಶ್ವರ ಪುರಾಣವು ವರ್ತಮಾನದೊಂದಿಗೆ ಮುಖಾಮುಖಿಯಾಗಿರುವ ಭೂತದ ಪರಿಕಲ್ಪನೆಯನ್ನು ಕಟ್ಟಿಕೊಡುವ ಉದ್ದೇಶದಿಂದ ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಅಧ್ಯಯನ ಮಾಡಲು ಇಚ್ಚಿಸಿದ್ದೇನೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ವಾಯುವ್ಯ ಭಾಗದಲ್ಲಿ ಕಂಡುಬರುವ ಕೂಗು ಬಂಡೆಯ ಪಕ್ಕದಲ್ಲಿರುವ ದೇವರ ಗುಡ್ಡ, ಲುಂಕೆಮಲೆಗುಡ್ಡ, ನುಂಕೆಮಲೆ ಸಿದ್ದೇಶ್ವರ ಬೆಟ್ಟ ಎಂತಲೂ ಪ್ರಸಿದ್ಧಿ ಪಡೆದಿದೆ. ಇಂತಹ ಪರಿಸರವು ಬೆಟ್ಟ, ಗುಡ್ಡ, ಮರ, ಗಿಡ ಹೂ ಬಣ್ಣಗಳಿಂದ ಕೂಡಿದ ರಮಣೀಯವಾದಂತಹ ಕಣಿವೆಯಾಗಿದೆ. ಇದನ್ನು 'ತ್ರಿಕೂಟ' ಪರ್ವವೆಂತಲೂ, 'ತ್ರಿಕೂದ್ರಿ'ಯಂತಲೂ ಕರೆಯುತ್ತಾರೆ ಎಂದು ಟಿ. ಗಿರಿಜಾ ಅವರು ಗುರುತಿಸಿದ್ದಾರೆ. ಹಾಗೆಯೇ ಅಕ್ಕ ಪಕ್ಕದಲ್ಲಿರುವ ಹಲವು ಐತಿಹಾಸಿಕ ಬೆಟ್ಟಗಳ ಬಗ್ಗೆ ಪರಿಚಯ ಮಾಡಿಕೊಟ್ಟಿದ್ದಾರೆ.

೧.ನುಂಕೆಮಲೆ ಬೆಟ್ಟ ೩೦೨೨ ಅಡಿ

೨.ಜಟಿಂಗ ರಾಮೇಶ್ವರ ಬೆಟ್ಟ ೩೪೬೯ ಅಡಿ

೩.ಬ್ರಹ್ಮಗಿರಿ ಬೆಟ್ಟ ೨೫೪೦ ಅಡಿ

೪.ಶಾಂತಿಗುಡ್ಡ ೨೫೪೦ ಅಡಿ

ಈ ರೀತಿಯಾಗಿ ಇದೆಯೆಂಬುದಾಗಿ ಗುರುತಿಸಿದ್ದಾರೆ. ಇಂತಹ ಭವ್ಯವಾದ ಹಾಗೂ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಬೆಟ್ಟವಾದ ಶ್ರೀ ನುಂಕೆಮಲೆ ಬೆಟ್ಟದಲ್ಲಿ ನೆಲೆಸಿದ್ದು ಜನರ ಬಾಯಲ್ಲಿ ದಿನನಿತ್ಯ ಜಪವಾಗಿರುವ ಆರಾಧ್ಯ ದೈವರಾಗಿರುವ ಶ್ರೀನುಂಕೆಮಲೆ ಸಿದ್ದೇಶ್ವರ ಒಬ್ಬ ಶಕ್ತಿಶಾಲಿ ಸಾಂಸ್ಕೃತಿಕ ನಾಯಕನೆಂದು ಪ್ರಸ್ತುಪಡಿಸುತ್ತೇನೆ. ಸ್ಥಳಿಯ ಮಾಹಿತಿಯನ್ನು ಕ್ಷೇತ್ರಕಾರ್ಯದ

ಮೂಲಕ ಬಿಟ್ಟರೆ ಲಿಖಿತವಾಗಿ ದಾಖಲೆ ರೂಪದಲ್ಲಿ ದೊರೆಯುವುದು ತುಂಬಾನೆ ವಿರಳವಾಗಿದೆ ಮತ್ತು ಜನಮನದಲ್ಲಿ ಒಬ್ಬ ಪುರಾಣ ಪುರುಷನಾಗಿ ಹಾಗೂ ಪವಾಡ ಪುರುಷನಾಗಿ ಹೇಗೆ ತಮ್ಮ ಚಾರಿತ್ರ್ಯವನ್ನು ಪುರಾಣದ ಮೂಲಕ ಬಿಂಬಿಸುತ್ತದೆ ಎನ್ನುವುದೆ ನನ್ನ ಅಧ್ಯಯನದ ಉದ್ದೇಶವಾಗಿದೆ. ಭೈರವಾರಾಧನೆ ಕರ್ನಾಟಕದಲ್ಲಿ ಮಾತ್ರ ಅಲ್ಲದೇ ಮಹಾರಾಷ್ಟ್ರ, ಆಂಧ್ರಪ್ರದೇಶ, ರಾಜಸ್ಥಾನದಲ್ಲೂ ಸಹ ಆರಾಧಕರು ಇದ್ದಾರೆ ಎಂಬುದು ಮಾಹಿತಿ ಇದೆ. ಜೊತೆಗೆ ರಾಜಸ್ಥಾನದಿಂದ ಕರ್ನಾಟಕಕ್ಕೆ ಧನ ಸಹಾಯ ಮಾಡುತ್ತಿದ್ದಾರೆ.

ಸ್ಥಳಿಯ ಮಾಹಿತಿ ಪ್ರಕಾರ ನುಂಕೆಮಲೆ ಭೈರವನು ಒಬ್ಬ ದೈವಿ ಪುರುಷ ಹಾಗೂ ಸಾಂಸ್ಕೃತಿಕ ನಾಯಕನಾಗಿ ಕಂಡುಬರುತ್ತಾನೆ. ಉದಾಹರಣೆಗಾಗಿ ಮಂಟೇಸ್ವಾಮಿ, ಮಲೇಮಹಾದೇಶ್ವರ, ಮೈಲಾರಲಿಂಗೇಶ್ವರ, ಜುಂಜಪ್ಪ ಮುಂತಾದ ಪುಣ್ಯಪುರುಷರ ಸಾಲಿಗೆ ಭೈರವ ದೈವನು ಸೇರುತ್ತಾನೆ. ಈ ಹಿನ್ನೆಲೆಯಲ್ಲಿ ರಾಕ್ಷಸ ದಾಳಿಯಿಂದ ಜನರನ್ನು ರಕ್ಷಣೆ ಮಾಡುವುದಕ್ಕಾಗಿ ದೇವಲೋಕದಿಂದ ಭೂಲೋಕಕ್ಕೆ ಬಂದನು. ಕೊಟ್ಟೂರಿನ ಮೊಪ್ಪರಿಗೆ ಎಂಬ ಗ್ರಾಮದಲ್ಲಿ ಅಕ್ಕ ಕರ್ಪೂರದಮ್ಮ ಹಾಗೂ ಭೈರವದೇವ ಆ ಊರಿನ ಯಜಮಾನನ ಮಗ ಸತ್ತಾಗ ಅವನನ್ನು ಬದುಕಿಸಿ ಹಾಗೂ ಗೋವುಗಳನ್ನು ರಕ್ಷಣೆ ಮಾಡಿದ್ದರಿಂದ 'ಗೋರಕ್ಷನಾಥ' ಎಂಬ ಹೆಸರನ್ನು ಪಡೆದು ಮುಂದೆ ರಸಸಿದ್ಧ ರಾಕ್ಷಸನನ್ನು ಕೊಲ್ಲಲು ಹೋಗುತ್ತಾನೆ. ಈ ಸಂದರ್ಭದಲ್ಲಿ ಸೂಕ್ಷ್ಮವಾದ ಅಧ್ಯಯನ ಹಾಗೂ ವಿಶಾಲವಾದ ದೃಷ್ಟಿಕೋನದಿಂದ ವಿವೇಚಿಸಿದ ಸಮಯದಲ್ಲಿ ಹಲವಾರು ಮೂರ್ತಿಗಳು ಕಂಡುಬರುವುದಿಲ್ಲ. ಬದಲಾಗಿ ಹೊಡೆದು ಹಾಕಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅದಕ್ಕಾಗಿಯೇ ಹನ್ನೆರಡನೆ ಶತಮಾನದ ವಚನಕಾರರು ಭೈರವದೇವನನ್ನು ಟೀಕೆ ಟಿಪ್ಪಣಿಗಳಿಂದ ಅವರನ್ನು ಬೈದಿರುವುದು ಮಾಹಿತಿ ಲಭ್ಯವಿದೆ.

ಉದಾಹರಣೆಗಾಗಿ ಮಡಿವಾಳ ಮಾಚಿದೇವ ವಚನ ಸಾಹಿತ್ಯ ಸಂಪುಟ- ಹಳಕಟ್ಟಿ ಪುಟ-೩೫೧ ಹಾಗೂ ವಚನ ೧೬೨೨ ರಲ್ಲಿ ಈ ರೀತಿ ಇದೆ.

"ಮಿಂಡ ಮೈಲಾರ ಬೀರ ಭೈರವ ಎಕ್ಕನಾದಿ

ಕುಕ್ಕನೂರು ಬಸದಿಕೇತ ದೂಳನೆಂಬಕಾಳು

ದೈವಕ್ಕೆರಗಿ ನಾನು ಶಿವ ಭಕ್ತ ನೆನಸಿಕೊಂಬ ಚಂಡಿ

ನಾಯಿಗಳು ಕಂಡು ಎನ್ನುಮನ ಹೆಸಿತ್ತು, ಕಾಣಕಲಿದೇವರದೇವ"

ಎಂಬುದಾಗಿ ಬೈದಿದ್ದಾರೆ ಅದಕ್ಕೆ ಹಲವಾರು ರೀತಿಯ ಕಾರಣಗಳು ಇರಬಹುದು. ನಾನು ಕೈಗೊಂಡ ಕ್ಷೇತ್ರಕಾರ್ಯದ ಅಧ್ಯಯನದ ಮೂಲಕ ತಿಳಿದುಕೊಂಡಿರುವ ಸಂಗತಿ ಎಂದರೆ ಕಾಲಭೈರವನಾಗಿ ರಾಕ್ಷಸರನ್ನು ಸಂಹಾರ ಮಾಡಿದ್ದಕ್ಕಾಗಿಯೇ ಹೀಗೆ ಬೈದಿದ್ದಾರೆ ಎಂಬುದು ಒಂದು ನಿಲವು. ಇನ್ನೊಂದು ವಿಧದಲ್ಲಿ ಚಿಂತಿಸುವುದಾದರೆ ಜಾತಿ ಎಂಬ ಬೂತದಿಂದ ಹಿಡಿದು ಕೆಲವು ವಚನಕಾರರು ಹಲವು ದೇವರ ಬಗ್ಗೆ ಬೈದಿದ್ದಾರೆ ಹಾಗೂ ತೆಗಳಿದ್ದಾರೆ. ವಚನಕಾರರು ತಮ್ಮದೇಯಾದ ಇಷ್ಟ ದೇವರನ್ನು ಆರಾಧಿಸುವುದಕ್ಕಾಗಿಯೇ ವಿರುದ್ಧವಾದ ದೇವರ ಬಗ್ಗೆ ಈ ರೀತಿಯಾದ ಬೈಗಳು ಇವೆಯೆಂಬುದು ಸ್ಪಷ್ಟಪಡಿಸುತ್ತೇನೆ.

ವ್ಯಾಪ್ತಿ

ಯಾವುದೇ ಒಂದು ಅಧ್ಯಯನಕ್ಕೆ ಸೀಮಿತವಾದ ವ್ಯಾಪ್ತಿ ಅಥವಾ ಚೌಕಟ್ಟು ಇರುವ ಹಾಗೇ ನನ್ನ ಅಧ್ಯಯನಕ್ಕೆ ವ್ಯಾಪ್ತಿಯಿದೆ. ನುಂಕೆಮಲೆ ಸಿದ್ದೇಶ್ವರ ಪುರಾಣ ಅಧ್ಯಯನದಲ್ಲಿ ಸುಮಾರು ಹತ್ತನೇ ಶತಮಾನದ ಕದಂಬರ ರಾಜನಾದ 'ಅಜವರ್ಮ' ಎಂಬುವನಿಂದ ಸ್ಥಾಪಿಸಲಾಗಿದೆ. ಈ ಬೆಟ್ಟದಲ್ಲಿ ದೊರೆತಿರುವ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಪುರಾಣ, ಸಂಗತಿ, ಪವಾಡ ಕತೆಗಳಿಂದಲೂ ಕೆಲವು ಕ್ಷೇತ್ರಗಳು ಸಾಹಿತ್ಯಿಕವಾಗಿ ಕೆಲವು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮಹತ್ವವನ್ನು ಪಡೆದಿವೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗದಿಂದ ಸುಮಾರು ೯೧ಕಿ.ಮೀ ದೂರದಲ್ಲಿರುವ ಮೊಳಕಾಲ್ಮೂರಿನ ನುಂಕೆಮಲೆ ಬೆಟ್ಟವು ತನ್ನದೇಯಾದ ವೈಶಿಷ್ಟ್ಯ ಪೂರ್ಣತೆ ಹೊಂದಿರುವ ಐತಿಹಾಸಿಕ ಸ್ಥಳವಾಗಿದೆ. ಇಂತಹ ವರ್ಣಮಯ ಪ್ರಕೃತಿ ಮಡಿಲಲ್ಲಿ ಹುಟ್ಟಿದ ಬೆಟ್ಟ ನುಂಕೆಮಲೆ ಬೆಟ್ಟ. ಈ ಬೆಟ್ಟದಲ್ಲಿ ಭೈರವದೇವ ಹೇಗೆ ಬಂದನು ಎಂಬ ಉದ್ದೇಶದಿಂದ ನನ್ನ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ.

ಸ್ವರೂಪ

ಶ್ರೀ ನುಂಕೆಮಲೆ ಸಿದ್ದೇಶ್ವರ ಪುರಾಣ ಒಂದು ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಯಗಳಾಗಿ ವಿಂಗಡಿಸಿಕೊಂಡಿದ್ದು ಈ ಅಧ್ಯಯಗಳ ಮೂಲಕ ಪುರಾಣವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ. ಅಧ್ಯಾಯ ಒಂದರಲ್ಲಿ ಉದ್ದೇಶ, ವ್ಯಾಪ್ತಿ, ಸ್ವರೂಪವನ್ನು ಹಲವಾರು ಪುಸ್ತಕಗಳ ಸಹಾಯದಿಂದ ಹಾಗೂ ನನಗೆ ದೊರೆತಿರುವ ಸಾಮಾಗ್ರಿಯಿಂದ ವ್ಯಾಪ್ತಿ ಮತ್ತು ಸ್ವರೂಪವನ್ನು ಗುರುತಿಸಿದ್ದೇನೆ. ಅಧ್ಯಾಯ ಎರಡರಲ್ಲಿ ನುಂಕೆಮಲೆ ಸಿದ್ದೇಶ್ವರ ಪುರಾಣ ಚರಿತ್ರೆಯನ್ನು ಹಲವಾರು ಸ್ಥಳಿಯರ ಮಾಹಿತಿಯಿಂದ ಚರ್ಚಿಸಿ

ಕ್ಷೇತ್ರಕಾರ್ಯದ ಮೂಲಕ ನುಂಕೆಮಲೆ ಸಿದ್ದೇಶ್ವರನು ಶಿವ ಪಾರ್ವತಿಯ ಮಗನಾಗಿ ಈ ಭೂಮಿಗೆ ಹೇಗೆ ಬಂದನು ಹಾಗೂ ಈ ಭೂಲೋಕದ ಜನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಲು ಈ ಧರೆಗೆ ಬಂದು ಸಾವು, ನೋವು, ನಲಿವುಗಳ ನರ ರಾಕ್ಷಸರನ್ನು ಹೇಗೆ ಸದೆಬಡಿದನು? ಎಂಬ ಸಂಗತಿಗಳನ್ನು ಚರ್ಚಿಸಿದ್ದೇನೆ. ಅಧ್ಯಾಯ ಮೂರರಲ್ಲಿ ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಹೇಗೆ ಒಂದು ಕಾವ್ಯವಾಗಿ ನೋಡುವುದು? ಮತ್ತು ಅದರಲ್ಲಿ ಅಡಕವಾಗಿರುವ ಕಾವ್ಯಾಂಶಗಳು ಯಾವವು? ಎಂಬುದರ ಬಗ್ಗೆ ಕೂಲಂಕುಶವಾಗಿ ಚರ್ಚಿಸಿದ್ದೇನೆ. ಅಧ್ಯಾಯ ನಾಲ್ಕರಲ್ಲಿ ನುಂಕೆಮಲೆ ಸಿದ್ದೇಶ್ವರನು ಒಬ್ಬ ಸಾಂಸ್ಕೃತಿಕ ನಾಯಕನಾಗಿ ತನ್ನ ಜೀವಿತಾವಧಿಯಲ್ಲಿ ಮೆರೆದನು ಜಾತ್ರಾ ವಿಧಾನಗಳಾದ ಕಂಕಣ ಕಟ್ಟುವುದು, ಸಿಡಿಯಾಡುವುದು, ರಥೋತ್ಸವ, ಸಿದ್ಧಿಭುಕ್ತಿ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಚರ್ಚಿಸಿದ್ದೇನೆ. ಅಧ್ಯಾಯ ಐದರಲ್ಲಿ ನುಂಕೆಮಲೆ ಸಿದ್ದೇಶ್ವರನನ್ನು ಸಾಹಿತ್ಯಿಕವಾಗಿ ನೋಡುವಂತಹ ಪ್ರಯತ್ನ ಮಾಡಿದ್ದು ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಡಾ.ಕೆ.ರವೀಂದ್ರನಾಥ ಅವರು ಸಂಗ್ರಹಿಸಿರುವ ನುಂಕೆಮಲೆ ಸಿದ್ದೇಶ್ವರ ಪುರಾಣ ಎಂಬ ಕಾವ್ಯವನ್ನು ಪೂರಕವಾಗಿ ಇಟ್ಟುಕೊಂಡು ಅದರಲ್ಲಿ ಬಳಕೆಯಾದ ರಾಗ, ತಾಳ, ಛಂದಸ್ಸು, ಅಲಂಕಾರ, ಕಂದ, ತ್ರಿಪದಿ ಹಾಗೂ ಭಾಷೆಯಾಗಿ ಗಾದೆ ಮಾತುಗಳು ಮತ್ತು ನುಡಿಗಟ್ಟುಗಳನ್ನು ಚರ್ಚಿಸಿದ್ದೇನೆ. ಅಧ್ಯಾಯ ಆರರಲ್ಲಿ ಸಮಾರೋಪ ಫಲಿತಗಳಿಗೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳು ಹಾಗು ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳನ್ನು ನನ್ನ ಅಧ್ಯಯನಕ್ಕೆ ಬಳಸಿಕೊಂಡು ಚರ್ಚಿಸಿದ್ದೇನೆ.

ಅಧ್ಯಾಯ-೨
ನುಂಕೆಮಲೆ ಸಿದ್ಧೇಶ್ವರ: ಚರಿತ್ರೆ

ಅಧ್ಯಾಯ-೨

ನುಂಕೆಮಲೆ ಸಿದ್ಧೇಶ್ವರ: ಚರಿತ್ರೆ

ಯಾವುದೇ ಒಂದು ಚರಿತ್ರೆಯನ್ನು ಕಟ್ಟಿಕೊಡುವಾಗ ಮುಖ್ಯವಾಗಿ ಅಲ್ಲಿ ನಡೆದಿರುವ ಘಟನಾವಳಿಗಳ ಮೇಲೆ ಅವಲಂಬಿತವಾಗಿರುತ್ತದೆ. ವ್ಯಕ್ತಿ, ಸ್ಥಳ ಐತಿಹಾಸಿಕ ಪುರುಷರ ಚರಿತ್ರೆ ಪುರಾಣಗಳು ನಡೆದಿದ್ದರೆ ಬಲವಾದ ವಿಸ್ಮಯ ಆಚರ್ಯಕರವಾದ ಕಾರಣಗಳನ್ನು ಇಟ್ಟುಕೊಂಡು ಹೇಳುವುದು. ಹೀಗೆ ಹಲವು ಹತ್ತು ಪುಣ್ಯಪುರುಷರ ಚರಿತ್ರೆ ಹಾಗೂ ಅವರು ನಡೆಸಿರುವ ಪವಾಡಗಳು ತುಂಬಾನೆ ಇದ್ದಾವೆ.

ಉದಾಹರಣೆಗಾಗಿ ಪಂಚ ಗಣಾಧೀಶರಾದ ಕೊಟ್ಟೂರು ಬಸವೇಶ್ವರ, ನಾಯಕನಹಟ್ಟಿಯ ಶ್ರೀ ಗುರು ತಿಪ್ಪೇರುದ್ರಸ್ವಾಮಿ, ಕೋಲಹಳ್ಳಿ ಮದ್ದಾನೇಶ್ವರ, ಅರಸೀಕೆರೆ ಕೋಲಶಾಂತಯ್ಯ, ಹರಪನಹಳ್ಳಿ ಕೆಂಪಯ್ಯ ಮುಂತಾದವರ ಬಗ್ಗೆ ಪವಾಡಗಳು ಹುಟ್ಟಿಕೊಂಡಿವೆ. ಇಂತಹ ಮಹಾನ್ ಭಾವರಲ್ಲಿ ಒಬ್ಬರಾದ ಶ್ರೀ ನುಂಕೆಮಲೆ ಸಿದ್ದೇಶ್ವರ ಪುರಾಣವು ಕೂಡ ಒಂದು. ಪವಾಡದ ಹಿನ್ನೆಲೆಯಲ್ಲಿ ರಚನೆಯಾಗಿದೆ. ಮಹಾನ್ ಭಾವರ ಬದುಕು ಜನಮನವನ್ನು ತಿದ್ದಲು, ಸರಿಪಡಿಸಲು ಸದ್ಧಾರ್ಮದತ್ತ ನಡೆಸುವ ಮೀಸಲಾಗಿತ್ತು. ಪವಾಡಗಳು ಬಾಯಿಂದ ಬಾಯಿಗೆ ದಾಟಿ ಬರುವಾಗ ರಂಗುರಂಗಾಗಿಯೇ ಇಲ್ಲವೇ ಬಣ್ಣಗಟ್ಟಿ ಹರಡಿವೆ. ಜನಸಾಮಾನ್ಯರ ಭಕ್ತಿ ಶ್ರದ್ಧೆಗಳನ್ನು ಆಕರ್ಷಿಸಲು ಪವಾಡಗಳು ಅತ್ಯಂತ ಸಮರ್ಥ ಸಾಧನೆಗಳಲ್ಲಿ ಒಂದು ಎಂದು ತಿಳಿದು ಮಹೋನ್ನತಿಯನ್ನು ಸಾರುವಾಗ ಅಘಟಿತ ಘಟನಾ ಸಾಮರ್ಥ್ಯವನ್ನು ತಿಳಿಸುವಾಗ ಪವಾಡ ಕತೆಗಳನ್ನು ಬಳಸಿಕೊಂಡರು.

ಉದಾಹರಣೆಗಾಗಿ "ಹರಿಹರನ ರಗಳೆಗಳ ಮೂಲಕ ಪವಾಡಗಳನ್ನು ಹೆಣೆದಿದ್ದಾರೆ"[೧] ಪುರಾಣಗಳಲ್ಲಿ ರಾಮಾಯಣ, ಮಹಾಭಾರತ ಕತೆಗಳಲ್ಲಿ ಪವಾಡ ಕತೆಗಳು ನಿರೂಪಿತವಾಗಿವೆ. ಮಲೆ ಮಹಾದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗೇಶ್ವರ, ಜುಂಜಪ್ಪನ ಪವಾಡ ಕತೆಗಳು ಮುಂತಾದ ಪವಾಡ ಪುರುಷರೊಂದಿಗೆ ಭೈರವ ಪುರಾಣವನ್ನು ನೋಡುತ್ತೇವೆ. ಹಾಗಾದರೆ ಪವಾಡ ಎಂದರೇನು? ಎಂಬ ಪ್ರಶ್ನೆಯನ್ನು ಹಾಕಿಕೊಂಡ ಸಂದರ್ಭದಲ್ಲಿ "ಅಸಾಮಾನ್ಯವಾದ ಆಚರ್ಯವನ್ನುಂಟು ಮಾಡುವ ನಿಸರ್ಗ ನಿಯಮದ ವಿರುದ್ಧ ಫಲಿಸುವ ಘಟನೆ ಅಥವಾ ಸಂಗತಿಯನ್ನು ಮಾನವೀಯ ಶಕ್ತಿಯಿಂದ ಎಸಗುವುದು ಅಸಾಧ್ಯ. ಪವಾಡಗಳು ದೇವರ ಇಲ್ಲವೇ ದೈವಿ ಶಕ್ತಿಯ ಬಲವಿದ್ದ ಮಾನವೀಯ ಅನುಕಂಪವುಳ್ಳ ಮಹಾ ಪುರುಷರಿಂದ

ದುಃಖಿತರ ಆರ್ತರ ರಕ್ಷಣೆಗಾಗಿ ಹಾಗೂ ಸಾಮಾನ್ಯ ಜನತೆ ದೈವಿ ಶಕ್ತಿಯಲ್ಲಿ ಸಂಶಯ ತಾಳಿದಾಗ ಅದರ ಸ್ತ್ರೀಕರಣಕ್ಕಾಗಿ ಯಾವುದೇ ಪೂರ್ವಭಾವಿ ತಯಾರಿಲ್ಲದೆ ಜರುಗುವ ಘಟನೆಗಳು"[೨] ಆದರೆ ಇಂತಹ ಪವಾಡ ಪುರುಷರ ಬಗ್ಗೆ ಲಿಖಿತವಾಗಿ ದೊರೆಯದೇ ಕೇವಲ ಕತೆಯನ್ನು ಕಟ್ಟುವುದರ ಮೂಲಕ ಅವರ ಸಾಹಸಗಾಥೆಯನ್ನು ಹೇಳುತ್ತಾರೆ. ಅಂತಹ ಒಬ್ಬ ಮಹಾನ್ ಪುರುಷನೆಂದರೆ ಶ್ರೀಭೈರವ ದೇವ ಇವರ ಚರಿತ್ರೆಯ ಬಗ್ಗೆ ಎಲ್ಲಿಯೂ ಲಿಖಿತವಾಗಿ ದೊರೆಯುವುದಿಲ್ಲ. ಬದಲಾಗಿ ಸ್ಥಳಿಯರು ತಮ್ಮ ಆರಾಧ್ಯ ದೈವವೆಂದು ಪೂಜೆ ಮಾಡುತ್ತಾರೆ. ಇಂತಹ ಪುಣ್ಯ ಪುರುಷ ಭೂಮಿಗೆ ಬಂದಿದ್ದು ಏಕೆ? ಎಂಬ ಪ್ರಶ್ನೆಯು ಹುಟ್ಟುತ್ತದೆ. ಅದಕ್ಕೆ ಈ ರೀತಿಯಾದ ಉತ್ತರ ಕಂಡುಕೊಳ್ಳುವುದು ಸೂಕ್ತವಾಗಿದೆ. ಈ ಹಿನ್ನೆಲೆಯಲ್ಲಿ ನುಂಕೆಮಲೆ ಸಿದ್ದೇಶ್ವರ ಹಲವು ದೈವಿ ಪುರುಷರಂತೆ ಈತನು ಪ್ರಮುಖನಾಗಿದ್ದಾನೆ. ಶಿವ ಮತ್ತು ಆತನ ಹೆಂಡತಿಯಾದ ಪಾರ್ವತಿ ದೇವಿಯ ಕೃಪೆಯಿಂದ ಈ ಭೂಮಿಗೆ ಬಂದನು. ಅದು ಹೇಗೆ ಎಂಬುದನ್ನು ನೋಡುವುದಾದರೆ ಒಂದನೊಂದು ಕಾಲದಲ್ಲಿ ಕೈಲಾಸವಾಸಿಯಾದ ಪರಮೇಶ್ವರನ ಒಡ್ಡೋಲಗದಲ್ಲಿ ಸಭೆಯ ನಡೆದಿತ್ತು. ಈ ಸಭೆಯಲ್ಲಿ ಆಸಂಖ್ಯಾತ ದೇವಾನು ದೇವತೆಗಳು, ಗಂಧರ್ವ ಕನ್ಯೆಯರು ಭಾಗವಹಿಸಿದ್ದರು. ಇಂತಹ ಭವ್ಯವಾದ ಶಿವನ ಸಾನಿಧ್ಯದ ಸ್ಥಳದಲ್ಲಿ ಕೆಲವು ಗಂಧರ್ವ ಕನ್ಯೆಯರು ಪರಮೇಶ್ವರನ ಎದುರಿನಲ್ಲಿ ಅಪವರ್ತನೆಯಿಂದ ನಡೆದುಕೊಂಡ ಸಂಗತಿಯು ಶಿವನಿಗೆ ಗೊತ್ತಾಯಿತು. ಇದರಿಂದ ಕೋಪಗೊಂಡ ಶಿವನು ಹೀಗೆ ಶಾಪವಿತ್ತನು. ನೀವು ಭೂಲೋಕದಲ್ಲಿ ಹುಟ್ಟಿ ರಾಕ್ಷಸರಾಗಿ ಹುಟ್ಟಿ ಎಂಬ ಶಾಪ ನೀಡುತ್ತಾನೆ. ಇದರಿಂದ ಭಯಭೀತರಾದ ಗಂಧರ್ವಕನ್ಯೆಯರು ಸ್ವಾಮಿ ದಯಮಾಡಿ ಮನ್ನಿಸಬೇಕು ನಾವು ತಪ್ಪು ಮಾಡಿದ್ದೇವೆ ಎಂದು ಅಂಗಲಾಚಿ ಬೇಡಿಕೊಂಡರು ಆದರೆ ಪರಮೇಶ್ವರನು ನೀವು ಭೂಲೋಕದಲ್ಲಿ ಇರುವಾಗ ನನ್ನ ಮಕ್ಕಳಾದ ಶ್ರೀಭೈರವ ಮತ್ತು ಮಗಳಾದ ಕರ್ಪೂರದಮ್ಮ ಭೂಮಿಗೆ ಬಂದು ನಿಮ್ಮನ್ನು ಸಂಹರಿಸಿದಾಗ ನೀವುಗಳು ಮುಕ್ತಿ ಪಡೆಯುತ್ತೀರಾ ಎಂದು ಹೇಳುತ್ತಾನೆ. ಆಗ ಶಿವನ ಆಜ್ಞೆಯಂತೆ ಅವರು ಶಾಪವನ್ನು ಹೊತ್ತುಕೊಂಡು ಭೂಮಿಗೆ ಬಂದು ನೆಲೆಸುವರು. "ನುಂಕೆಮಲೆ ಸಿದ್ದೇಶ್ವರ ಬೆಟ್ಟದಲ್ಲಿ ರಸಸಿದ್ಧಿ, ಅಂಗ್ಸ, ನೀಲವರ್ಣ ಈ ದೈತ್ಯ ರಾಕ್ಷಸರಿಗೆ ದಾಸಿಯರಾಗಿ ನುಂಕವ್ವ, ಮಲಿಯವ್ವ ಮತ್ತು ರಸಸಿದ್ದನ ವಾಹನವಾಗಿ ಕೋಣ ಹಾಗೂ ಇವರ ಸೇವಕರಾಗಿ ಪಲುಮರಾಯರ ಹೆಸರುಗಳಿಂದ ಹುಟ್ಟಿ ವಿಷವನ್ನೇ ಆಹಾರವಾಗಿ ಸೇವಿಸುತ್ತಾ ಕಾಲ ಕಳೆಯುತ್ತಿದ್ದರು".[೩] ಹೀಗೆ ಭೂಲೋಕದಲ್ಲಿ ಸಮಯ ವ್ಯರ್ಥದಲ್ಲಿ ಕೆಲವು ಗಂಧರ್ವ ಕನ್ಯೆಯರು ದ್ರೋಣಾದ್ರಿ ಮಲೆಗೆ ಹೋಗಿ ಆ ಪ್ರದೇಶದಲ್ಲಿ ಅಧಿಪತಿಯಾಗಿ ಚಂಡಿ

ಎಂಬ ಕ್ರೂರ ರಕ್ಕಸಿಯು ಇವರ ಜೊತೆಗೆ ಕೆಲವು ದಾಸಿಯರಾಗಿ ಹುಟ್ಟಿದರು. ಮತ್ತು ಬಲ್ಲಾಳರಾಯನ ಟಗರು ಈ ನರಹಂತಕರು ಇಡೀ ಭೂಲೋಕದಲ್ಲಿ ಸರ್ವಸಾಮ್ರಾಜ್ಯವೆಲ್ಲ ತಮ್ಮದೇ ಎಂಬಂತೆ ತಮಗೆ ಅರಿವಿಲ್ಲದೆ ಪ್ರಾಣಿ, ಪಕ್ಷಿ, ಗಿಡ, ಮರ ಮುಂತಾದವುಗಳ ಮೇಲೆ ವ್ಯಕ್ತಿವೃತ್ತಾವಾದ ದಬ್ಬಾಳಿಕೆಯಿಂದ ಜೀವನ ಮಾಡುತ್ತಿದ್ದರು. ಇದರಿಂದ ಮಾನವ ಸಂಕುಲಕ್ಕೆ ತುಂಬಾನೆ ಹಿಂಸೆಯನ್ನು ನೀಡುತ್ತಿದ್ದರು. ಆಗ ಆ ಪ್ರದೇಶಕ್ಕೆ ಬರಗಾಲ ಬಂದು ಹೋಗಿತ್ತು ಇಂತಹ ಒಂದು ಘೋರವಾದ ಸಮಯದಲ್ಲಿ ಜನರಿಗೆ ದೇವರನ್ನು ಬೇಡಿಕೊಳ್ಳುವುದು, ಪ್ರಾರ್ಥಿಸುವುದನ್ನು ಬಿಟ್ಟರೆ ಬೇರೆ ದಾರಿಯೇ ಇರಲಿಲ್ಲ ಆಗ ಜನಸಮೂಹವು ದೇವಲೋಕದ ಒಡೆಯನಾದ ಪರಮೇಶ್ವರನ ಮೊರೆ ಹೋಗುತ್ತಾರೆ. ಇಂತಹ ಕಠೋರವಾದ ಸಂದಿಗ್ಧ ಸಂದರ್ಭದಲ್ಲಿ ಶಿವನಿಗೆ ಬೇರೆ ದಾರಿಯೇ ಇಲ್ಲದೇ ತನ್ನ ಮೈಮೇಲಿರುವ ಬೆವರಿನಿಂದ ಎರಡು ದೈವ ಪುರುಷರನ್ನು ಸೃಷ್ಠಿ ಮಾಡುತ್ತಾನೆ. ಅವರೇ ಕಾಲಭೈರವ ಮತ್ತು ಕರ್ಪೂರದಮ್ಮ. ಇವರು ಶೃಂಗರಿಸಿದ "ರಥವು ಮೇಲೆ ಹಾರಿಸಿದಾಗ ರಥವು ಆಕಾಶ ಮಂಡಲವಂ ಭೇಧಿಸಿಕೊಂಡು ಅಂತರಿಕ್ಷ ಮಾರ್ಗವಾಗಿ ಭೂಲೋಕಕ್ಕೆ ಬಂದು ಮೋಪ್ಪರಿಯೆಂಬ ಗ್ರಾಮದ ಬಳಿ ನಿಂತನು."[೬] ಹೀಗೆ ಭೂಲೋಕಕ್ಕೆ ಪಾದ ಸ್ಪರ್ಶಮಾಡಿದಾಗ ಆ ಊರಿನಲ್ಲಿ ಘೋರವಾದ ಅನಾಹುತ ಒಂದು ನಡೆದಿರುತ್ತದೆ. ಅದು ಏನೆಂದರೆ ಗೌಡನ ಮಗನಿಗೆ ಎತ್ತು ಇರಿದು ಸಾವನ್ನಪ್ಪಿರುತ್ತಾನೆ. ಆ ಕಂದನನ್ನು ಮಣ್ಣು ಮಾಡಲು ಎರಡು ದಿನಗಳ ಕಾಲ ಅವರ ಗೋಳು ಮುಗಿಲು ಮುಟ್ಟಿತು. ಇರುವ ಒಬ್ಬ ಮಗನನ್ನು ಹೂಣದೆ ಶೋಕಚಾರಣೆಯಲ್ಲಿ ತೊಡಗಿದ್ದ ಸಂದರ್ಭದಲ್ಲಿ ಭೈರವ ಮತ್ತು ಕರ್ಪೂರದಮ್ಮ ಅಲ್ಲಿಗೆ ಬಂದು ವಿಚಾರಿಸುವರು ಇಷ್ಟೊಂದು ಘೋರವಾಗಿ ಅಳುವುದಕ್ಕೆ ಕಾರಣವೇನು? ಎಂದು ಕೇಳಿದರು. ಆಗ ಜನರು ಹೀಗೆ ಉತ್ತರಿಸುತ್ತಾರೆ.

"ಊರು ಕೇರಿಯೋಳಿದ್ದು। ಕ್ರೂರ ಗೂಳಿಯು ವಂದು।

ಊರು ಗೌಡನ ಮಗನ। ಹಾರಿ ಕೊಂದಿರಲು

ಹೆತ್ತ ತಂದೆಯು ತಾಯಿ ಮತ್ತೆ ಬಂಧುಗಳೆಲ್ಲ।

ಸತ್ತ ಹುಡುಗನ ತಂದೆ ಮುತ್ತಿ ಅಳುತಿರಲು

ಮರಳು ಗಾಡಿನ ಒಳಗೆ। ಕುರುಳು ಕಟ್ಟಿಗೆ ಹಾಕಿ।

ಮರಣ ದೇಹವನಿರಿಸಿ। ಉರಿ ಹಚ್ಚುತಿರಲು।"[೭]

ಈ ಸತ್ಯವನ್ನು ಅರಿತ ಭೈರವ ದೇವ ಆ ಮಗುವನ್ನು ತನ್ನ ಸ್ಪರ್ಶದಿಂದ ಬದುಕಿಸುತ್ತಾನೆ. ಅಲ್ಲಿ ನೆರೆದಿರುವ ಎಲ್ಲ ಜನರು ಎದ್ದು ಕೈಮುಗಿದು ನೀವು ನಮಗೆ ಪ್ರತ್ಯಕ್ಷ ದೈವ ಎಂದು ನಮಸ್ಕರಿಸುವರು. ಈ ಸಮಯದಲ್ಲಿ ಭೈರವ ಕಾಲಿಗೆ ಬಿದ್ದು ಆಶೀರ್ವಾದ ಪಡೆಯಲು ಹೋದಾಗ "ಆಗ ಕಾಲಿಗೆ ಬೀಳಲು ಮರಳನ್ನು ಕುಪ್ಪೆ ಮಾಡಿ ಇದನ್ನು ನುಂಕೆಮಲೆ ಸಿದ್ದೇಶ್ವರನೆಂದು ಪೂಜಿಸಿ ಎಂದು ಹೇಳಿದನು."[೬] ಹೀಗೆ ದೈವ ಪುರುಷ ಲೋಕ ಸಂಚಾರ ಮುಂದುವರೆಸುವರು ಮುಂದೆ ಮತ್ತೊಂದು ಸ್ಥಳವಾದ 'ನಂಜೇರಿ' ಎಂಬ ಗ್ರಾಮದಲ್ಲಿ ಮಳೆಯಿಲ್ಲದೆ ಜನರು ಆಕಾಶಕ್ಕೆ ಮುಖ ಮಾಡಿ ದಿನಲೂ ಮಳೆಗಾಗಿ ಪ್ರಾರ್ಥನೆ, ಭಜನೆ ಹಾಗೂ ಇಷ್ಟದೈವಿಗಳಿಗೆ ನೈವೇದ್ಯ ಮುಂತಾದ ಹಲವು ಕಾರ್ಯಕ್ರಮಗಳನ್ನು ಮಾಡುತ್ತ ಮಳೆಗಾಗಿ ಹಂಬಲಿಸುತ್ತಾರೆ. ಆಗ ಭೈರವ ದೇವನು ಏನು? ಯಾಕೆ? ಎಂದು ದೇವರನ್ನು ಅಷ್ಟೊಂದು ಕಠೋರವಾಗಿ ಭೈಯುತ್ತೀರಾ? ಮತ್ತೆ ಕೆಲವರು ಹಾಡಿನ ಮೂಲಕ ಪ್ರಾರ್ಥನೆ ಮಾಡುತ್ತಿರಾ? ಎಂದು ಕೇಳಿದಾಗ ಜನರು ಈ ರೀತಿ ಹೇಳುವರು. ನಾಶವಾದ ಎಲ್ಲ ಜನರು

"ನಾಶವಾದೆವು ಎಲ್ಲ ಜನರು।

ಲೇಸುಮಾತ್ರವು ಮಳೆ ಬೆಳೆಯಿಲ್ಲದೆ।

ಲೇಸು ಮಾಡು ಎಮಗೆ ತಂದೆಯೆ ದೇವರ ದೇವಾ।

ಶರಣು ಮಾಡುವೆವು ದೇವ। ಶರಣು ಜನರ ಸಲಹು ಈಶ।

ಚರಣಕ್ಕೆರಗಿ ಬೇಡಿಕೊಂಡೆವು। ಹರಸು ಎಮ್ಮ

ಭರಿತ ಕಷ್ಟವಾ ದೇವರ ದೇವಾ।"[೭]

ಹೀಗೆ ಜನರು ಕಷ್ಟಕ್ಕೆ ಸ್ಪಂದಿಸಿ ಅವರ ಇಚ್ಛೆಯಂತೆ ತಂದೆಯಾದ ಪರಶಿವನ ಮೊರೆ ಹೋಗಿ ಧಾರಕಾರವಾಗಿ ಮಳೆಯನ್ನು ಸುರಿಸಿದನು. ಇದರಿಂದ ಬಹಳ ಸಂತೋಷದಿಂದ ನಿಟ್ಟುಸಿರು ಬಿಟ್ಟು ಜನಸಮುದಾಯವು ಆನಂದದಿಂದ ಹೀಗೆ ಕೊಂಡಾಡುವರು.

"ಜಯಜಯ ಈಶನೆ। ಜಯತು ಮಹೇಶನೆ।

ಜಯಜಯ ಜಗಧೀಶ। ಜಯತು ಪರಮೇಶ"[೮]

ಎಂದು ಜನಸಮೂಹವು ಕೊಂಡಾಡಿ ಇಲ್ಲೆ ನೆಲಸುವಂತೆ ಪ್ರಾರ್ಥಿಸುತ್ತಾರೆ ಮುಂದಿನ ಕಾರ್ಯಗಳಿಗೆ ಹೋಗುವುದಕ್ಕೆ ಸಿದ್ಧರಾಗುತ್ತಾರೆ. ನಂತರ ಶೃಂಗರಿಸಿದ ರಥದ ಮೇಲೆ ದ್ರೋಣಾದ್ರಿ ಮಲೆಗೆ ಬರುತ್ತಾರೆ. ಅಲ್ಲಿ ಚಂಡಿ ಎಂಬ ರಾಕ್ಷಸಿಯು ಈ ಭೂ ಲೋಕವೇ ನನ್ನದು ಎನ್ನುವ ಅಷ್ಟರಮಟ್ಟಿಗೆ ಅಹಾಂಕಾರದಿಂದ ಮೆರೆಯುತ್ತಾಳೆ. ಇವಳ ವರ್ತನೆ ಕಠೋರವಾದದ್ದು ಇವಳು ಯಾರಿಗು ಕೂಡ ಅಂಜದೆ, ಅಳುಕದೆ ಜೀವನ ಸಾಗಿಸುತ್ತಾಳೆ. ಈ ದುರಾಂಕಾರಳನ್ನು ಸಂಹಾರ ಮಾಡುವುದಕ್ಕಾಗಿ ತಂದೆ ತಾಯಿಯ ಅನುಗ್ರಹದಂತೆ ಭೈರವ ದೇವನು ಬರುತ್ತಾನೆ. ಈ ಮಹಾ ಚಂಡಿಯ ವರ್ಣನೆ ಈ ರೀತಿ ಮಾಡಿದ್ದಾರೆ. "ಇವಳ ಬಾಯಿ ಊರು ಅಗಲ, ಮೂಗು ದೊಡ್ಡ ಗವಿಯಂತೆ, ಇವಳು ತಲೆಯೂ ಬೆಟ್ಟದಂತೆ, ಇವಳ ತಲೆಯಲ್ಲಿ ಜಿಂಕೆ, ಮೊಲ, ತೋಳಗಳು, ವಾಸವಾಗಿದ್ದಂತೆ ಸಾಕಷ್ಟು ಪ್ರಾಣಿ ಪಕ್ಷಿಗಳನ್ನು ತಿಂದು ತೇಗಿದ್ದಳು, ಇವಳಿಗೆ ನೀರಡಿಕೆ ಆದಾಗ ಇವಳ ಬಾಯಿಗೆ ಮುನ್ನೂರ ಆರವತ್ತು ದಾಸಿಯರು ಮುನ್ನೂರು ಆರವತ್ತು ಕೊಡ ನೀರು ಹಾಕಬೇಕೆಂತೆ"[೯] ಇಂತಹ ದೈತ್ಯ ಚಂಡಿಗೆ ನೀರು ತರುವಾಗ ಅಲ್ಲಿಗೆ ಭೈರವ ದೇವ ಹಾಗೂ ಅಕ್ಕ ಕರ್ಪೂರದಮ್ಮ ಹೋಗುವರು. ಅಲ್ಲಿ ಕೆಲವು ರಕ್ಕಸಿಯರು ನೀವು ಇಲ್ಲಿಗೆ ಯಾಕೆ ಬಂದಿದ್ದೀರಾ? ನೋಡಲು ಬಹಳ ಸುಂದರವಾಗಿ, ಮಧುರವಾಗಿ, ಒಳ್ಳೆಯವರತರ ಕಾಣುತ್ತೀರಾ ನೀವು ಇಲ್ಲಿಂದ ಹೋಗುವುದು ಒಳಿತು ಕಾರಣ ಈ ನರರಾಕ್ಷಸಿ ನಿಮ್ಮನು ತಿನ್ನದೆ ಬಿಡಲಾರಳು ದಯಮಾಡಿ ಇಲ್ಲಿಂದ ಹೊರಟು ಹೋಗಿ ಎಂದು ಸೂಚನೆ ನೀಡಿದಳು. ಆದರೆ ಭೈರವ ದೇವ ಇದಕ್ಕೆ ಅಂಜದೆ ನಾವು ಓಡಿಹೋಗಲು ಬಂದಿಲ್ಲ ಅವಳನ್ನು ಸಂಹರಿಸಲು ಬಂದಿದ್ದೇವೆ ಎಂದು ಪ್ರತಿ ಉತ್ತರ ನೀಡಿದನು. ಇದನ್ನು ಗಮನಿಸಿದ ರಕ್ಕಸಿಯರು ಅವನ ಮುಖದಲ್ಲಿ ಕಾಣುವ ಧೈರ್ಯ, ಸಹಾಸ, ತೇಜಸ್ಸು, ದೃಡವಾದ ನಂಬಿಕೆ, ಹಾಗೂ ಆತ್ಮವಿಶ್ವಾಸವನ್ನು ಗಮನಿಸಿ ಗಟ್ಟಿ ನಿರ್ಧಾರವನ್ನು ನೋಡಿ ನಿಜವಾಗಿಯು ನೀನು ದೇವತಾ ಮನುಷ್ಯನೆ ಇರಬೇಕೆಂದು ಗೊಣಗುತ್ತ ಇಂದಕ್ಕೆ ಹೋಗಿ ತಮ್ಮ ರಾಣಿಯಾದ ಚಂಡಿಗೆ ನಡೆದ ವಿಷಯವನ್ನು ಸವಿಸ್ತಾರವಾಗಿ ವಿವರಿಸುವರು ಚಂಡಿಯು ರೌದ್ರ ಅವತಾರತಾಳಿ ಹೀಗೆ ನುಡಿಯುವಳು "ಎಲೇ ದಾಸಿಯರೇ ಆ ನರಹುಳವನ್ನು ಎಳೆದು ತರವುದನ್ನು ಬಿಟ್ಟು ಎಂತಹ ಅಪಮಾನದ ಮಾತುಗಳನ್ನು ಹೇಳುತ್ತೀರಾ"[೧೦] ಎಂದು ಭೈಯುತ್ತಿರುವಾಗ ಭೈರವ ದೇವನು ರಾಕ್ಷಸಿಯನ್ನು ಸಂಹಾರ ಮಾಡಲು ಅಕ್ಕ ಕರ್ಪೂರದಮ್ಮನ ಹತ್ತಿರ ಹೋಗಿ ಸಲಹೆಯನ್ನು ಪಡೆಯುತ್ತಾನೆ. ಆಗ ಅಕ್ಕ ಕರ್ಪೂರದಮ್ಮ ಹೀಗೆ ಹೇಳುವಳು ಆ ರಾಕ್ಷಸಿಯರು ವಿಷತುಂಬಿದ ಬೀಜದಂತೆ ಅವರಿಂದ ನೀನು ಗೆಲ್ಲುವುದು ತುಂಬಾನೇ ಕಷ್ಟದ ಕೆಲಸ ಅವರಿಂದ ಗೆಲ್ಲುವುದು

"ಕೊಲ್ಲಬೇಡ ಜೋಗಪ್ಪ। ಸಲಹು ಎನ್ನನೀಗ ಈಗ।

ಛಲದಿ ಈ ಪರಿ ನುಡಿದೆ। ಒಲಿದು ನೀ ಸಲಹೋ"[೧೨]

ಹೀಗೆ ನುಡಿದ ಚಂಡಿಯ ಮಾತಿನಿಂದ ಅವರು ವಿಸ್ಮಯರಾಗಿ ಇವರು ಮುಂದೆ ಪಯಣ ಬೆಳಸುವರು. 'ಯರಮಲೆ' ಅಥವಾ 'ನಲಮಲೆ' ಎಂಬ ಸ್ಥಳಗಳಿಗೆ ಬರುವರು ಆ ಊರಿನಲ್ಲಿ "ಬೇಡರಾದ ಕಾಟಣ್ಣನವರು ಹಾಗೂ ಅವರ ಏಳು ಜನ ಅಣ್ಣತಮ್ಮಂದಿರು. ಇದರಲ್ಲಿ ಕಾಟಣ್ಣನನ್ನು ಬಿಟ್ಟರೆ ಉಳಿದವರೆಲ್ಲ ಒರಟರು"[೧೩]

ಭೈರವ ದೇವನು ಶಿವನ ಧ್ಯಾನಕ್ಕೆಂದು ಬನ್ನಿಯ ಮರದ ಕೆಳಗೆ ಹುಲಿಯ ಚರ್ಮವನ್ನು ಹಾಸಿಕೊಂಡು ದಿನನಿತ್ಯದ ಕಾರ್ಯದಂತೆ ಪರಮಾತ್ಮನ ತಪಸ್ಸಿಗೆ ಕುಳಿತು ದೇವರ ಧ್ಯಾನದಲ್ಲಿ ಮಗ್ನನಾಗಿದ್ದಾನೆ ಅವನನ್ನು ಮನೆಯ ಊಟಕ್ಕೆಂದು ಕರೆತರಲು ಕಾಟಣ್ಣನ ತಮ್ಮ ಬೋಸಯ್ಯನಿಗೆ ಹೇಳಿದಾಗ ಬೋಸಯ್ಯ ಹೀಗೆ ಪ್ರತಿಕ್ರಿಯೆ ನೀಡುವನು. "ಎಲೆ ತಿರುದು ತಿನ್ನುವ ಜೋಗಿ"[೧೪] ಎಂಬ ಅನಿಷ್ಟವಾದ ಹಾಗೂ ಅಪಸ್ವರದ ಧ್ವನಿಯಲ್ಲಿ ಅವರನ್ನು ನಿಂದನೆ ಮಾಡುತ್ತಾನೆ. ಇವರು ದೇವರೆಂದು ತಿಳಿದ ಕಾಟಣ್ಣನು ದೇವ ಇವರು ಏನು ಅರಿಯದವರು ದಯಮಾಡಿ ಮನ್ನಿಸಿ ನಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಆಹ್ವಾನಿಸುತ್ತಾನೆ. ಆಗ ಬೋಸಯ್ಯನಿಗೆ ಅರಿವುಂಟಾಗಿ ಕ್ಷಮೆಯಾಚನೆ ಮಾಡುವನು. ಮನೆಗೆ ಬಂದ ಭೈರವದೇವರನ್ನು ಭಾರತೀಯ ಸಂಪ್ರದಾಯದಂತೆ ನೀರನ್ನು ಕೊಟ್ಟು ಕರಿಕಂಬಳಿಯನ್ನು ಹಾಸಿ ಆಸ್ಥಾನದ ಮೇಲೆ ಕೂರಿಸುವರು. ಇವರಿಗೆ ಎಡೆಯಾಗಿ ಬಿದಿರಕ್ಕಿ ಅನ್ನ, ಗುಬ್ಬಿ ಕರಿಸಾರು ನೀಡಿದನು. ಆಗ ಸ್ವಾಮಿಯು ಒಂದು ತ್ರಿಶೂಲವನ್ನು ನೆಟ್ಟು ಕಾಟಣ್ಣನ ನನಗೂ ನಿನಗೂ ಗುರು ಈ 'ಗೋರಕ್ಷನಾಥ' ಈತನಿಗೆ ಎಡೆ ಹಾಕಿರಿ ಎಂದಾಗ ಗೋರಕ್ಷನಾಥನು ಜನಿಸಿದನು. ಅಂದಿನಿಂದ ಹಿಂದಿನವರೆಗೂ ಕಾಟಣ್ಣನ ವಂಶಸ್ಥರು ಗೋರಕ್ಷನಾಥ ದೇವರಿಗೆ 'ಸಿದ್ಧಿಭುಕ್ತಿ' ಎಂಬ ಸಂಪ್ರದಾಯದ ಆಚರಣೆ ಮಾಡುತ್ತಾರೆ. ಈ ಸಿದ್ಧಿಭುಕ್ತಿಯನ್ನು ಜಾತ್ರೆಯೂ ನಡೆದ ಮೂರನೇ ದಿನದಂದು ಮಾಡುವರು. ಅದರ ಜೊತೆಗೆ ಭಂಗಿಯ ಸೇವನೆ ಕೂಡ ಒಂದು ಸಂಪ್ರದಾಯದಂತೆ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಹೀಗೆ ಕಾಟಣ್ಣನೂ ತಂದಿದ್ದ ಊಟವನ್ನು ಪಾಯಸವಾಗಿ ಪರಿವರ್ತಿಸಿ ಎಲ್ಲರಿಗೂ ಊಟ ಮಾಡುವಂತೆ ಆಜ್ಞಾಪಿಸಿದನು. ಈ ಮಧ್ಯೆ ಕಾಟಣ್ಣನಿಗೂ ಹಾಗೂ ಬಲ್ಲಾಳರಾಯನಿಗೂ ವೈಮನಸ್ಸು ಉಂಟಾಗಿ ಇವರಿಬ್ಬರ ಮಧ್ಯೆ ಯುದ್ಧವು ಪ್ರಾರಂಭವಾಗುತ್ತದೆ. ಕಾಟಣ್ಣನಿಗೆ ಬೆಂಬಲವಾಗಿ ನಿಂತ ಕರ್ಪೂರದಮ್ಮ ಬಲ್ಲಾಳನಲ್ಲಿ

ಅಡಕವಾಗಿರುವ ಹಲವಾರು ವಿಷಪೂರಿತ ಗುಂಡು ಮದ್ದುಗಳು ಇರುತ್ತವೆ. ಪರಶಿವನ ಆಜ್ಞೆಯಂತೆ ಜನಿಸಿದ ಕರ್ಪೂರದಮ್ಮ ದೇವಿ ಬಾರಿ ಮಳೆಯನ್ನು ತರಿಸುವುದರ ಮುಖಾಂತರ ಬಲ್ಲಾಳನಲ್ಲಿದ್ದ ತುಪಾಕಿಗಳನ್ನು ನಾಶಪಡಿಸಿ ಅವರಿಬ್ಬರನ್ನು ಒಂದು ಮಾಡಿ ಮುಂದಕ್ಕೆ ಹೋಗುವಾಗ ಸೋತ ಬಲ್ಲಾಳ ದೇವ ದೈವ ಸ್ವರೂಪವಾದ ನಿಮಗೆ ನನ್ನ ಪ್ರೀತಿಯಿಂದ ಹೃದಯವಂತಿಕೆಯಿಂದ ಏನಾದರೂ ಕೊಡುಗೆ ನೀಡುತ್ತೇನೆ ಎಂದು ಅಂಗಲಾಚುತ್ತಾ ಹೇಳುತ್ತಾನೆ.

೧.ಕಂಚಿನ ಬಾಗಿಲು

೨.ಕಬ್ಬಿಣದ ರಣಭೇರಿ

೩.ಟಗರು

ಈ ಮೂರು ನೀಡುವುದಾಗಿ ಬೇಡಿಕೊಳ್ಳುತ್ತಾನೆ. ಆದರೆ ಭೈರವ ದೇವ ಈ ಟಗರನ್ನು ಮಾತ್ರ ನೀಡು ಎಂದು ಕೇಳಿ ಟಗರಿನೊಂದಿಗೆ ಮುಂದೆ ಪ್ರಯಾಣ ಬಳಸುವನು. ಕುಮತಿ ದೇವಿಗೆ ಬರುವನು. ಇಲ್ಲಿ ಮಲೆಯವ್ವ ಹಾಗೂ ನುಂಕವ್ವ ರಕ್ಕಸಿಯರು ಸಾಕಿದ ಕೋಣ ಹಾಗೂ ಭೈರವದೇವರ ಟಗರು ಉತ್ತಮವಾದ ಸ್ನೇಹಸಂಬಂಧವನ್ನು ಬೆಳೆಸಿಕೊಂಡು ಬಹಳ ಅನೂನ್ಯವಾಗಿ ಇದ್ದವು. ಅದರ ಜೊತೆಗೆ ಮಾತಿಗೆ ತಪ್ಪದಂತೆ 'ಭೂಮಿಯ ಮೇಲೆ' ಭಾಷೆಯನ್ನು ಮಾಡಿಕೊಂಡಿದ್ದವು. ಇವು ಬೇಟೆಯಾಗುವಂತಹ ಸ್ಥಳ 'ವಲಸೆ' ಒಂದು ದಿನ ಕೋಣವು ಬರುವುದು ತಡವಾಯಿತು. ಆಗ ಟಗರು ನಂಬಿಕೆ ದ್ರೋಹಿಯೆಂದು ಬೈಯಲು ಶುರುಮಾಡಿತು. ಮತ್ತೊಂದು ಕಡೆ ಕೋಣ ಮಿತ್ರ ದ್ರೋಹಿಯೆಂದು ಬೈಯುತ್ತಿದ್ದವು ಹೀಗೆ ಎರಡು ಪ್ರಾಣಿಗಳು ಭೇಟಿಯಾದಾಗ ಎರಡು ಪ್ರಾಣಿಗಳ ಮಧ್ಯೆ ಈ ರೀತಿಯಾದ ವಾಗ್ವಾದ ನಡೆಯುವುದು.

"ನಂಬಿ ನಾನು ಮೋಸ ಹೋದನು ।

ಹಂಬಲವ ಬಿಡುತಿಹೆನು । ಟಗರಿನ ನಂಬುವುದು ಸಾಕು" ಈ ರೀತಿ ನುಡಿದರೆ

ಮೋಸ ಮಾಡಿತು ಎನಗೆ ಕೋಣ

ಭಾಷೆಯನ್ನು ತಪ್ಪಿ ಇರುವುದು ।

ಮೋಸದಿಂದಲೆ ತಾನೆ ಹೋಗದೆ । ಹೇಸದೆಲೆ ಕೆರೆಗೆ।"[೧೫]

ಈ ಎರಡು ಪ್ರಾಣಿಗಳ ಮಧ್ಯೆ ಯುದ್ಧವು ಪ್ರಾರಂಭವಾಗಿ ಕೊನೆಗೂ ಚಾಣಕ್ಷ್ಯ ಬುದ್ಧಿಯ ಟಗರು ಕೋಣವನ್ನು ಕೊಲ್ಲುತ್ತದೆ. ಎರಡು ದಿನಗಳಾದರು ಕೋಣ ಬರಲಿಲ್ಲವೆಂದು ಮಲ್ಲಿಯವ್ವ ಹಾಗೂ ನುಂಕವ್ವ ಹುಡುಕಲು ಹೊರಟಾಗ ಇತ್ತ ಭೈರವ ದೇವರು ಟಗರು ಹುಡುಕಲು ಬಂದಾಗ ಇಬ್ಬರು ಸೇರಿ ಪ್ರಾಣಿಗಳನ್ನು ಹುಡುಕಲು ಹೊರಟಾಗ ಸತ್ತು ಬಿದ್ದಿರುವ ಪ್ರಸಂಗವನ್ನು ಕಾಣುವರು. ಟಗರು ತನ್ನ ಸ್ನೇಹಿತ ಸತ್ತನ್ನಲ್ಲ ಎಂದು ದುಃಖಿತನಾಗಿ ಅದು ಕೂಡ ಮೇಲಿನಿಂದ ಬಿದ್ದು ಪ್ರಾಣ ಬಿಟ್ಟಿತು. ಈ ಸತ್ಯವನ್ನು ಅರಿತ ಭೈರವ ದೇವ ತನ್ನ ಕೈಗಳಿಂದ ಸ್ಪರ್ಶಮಾಡಿದಾಗ ಅವುಗಳು ಗಂಧರ್ವಕನ್ಯೆಯರಾಗಿ ಮರುಜನ್ಮ ಪಡೆದರು. ಈ ಭೂ ಲೋಕದಿಂದ ಮುಕ್ತಿಯನ್ನು ಪಡೆದ ಜ್ಞಾಪಕಾರ್ಥಕವಾಗಿ ಆ ಸ್ಥಳಕ್ಕೆ 'ಕೋಣನ ಹಳ್ಳಿ' ಹಾಗೂ 'ಕುರುಬರ ಹಳ್ಳಿ' ಎಂದು ನಾಮಕರಣ ಮಾಡಿದನು. ಮುಂದೆ ಭೈರವ ದೇವ ಮಾಯ ಕುದುರೆಯನ್ನೇರಿ ರಾಕ್ಷಸರನ್ನು ಸಂಹಾರ ಮಾಡಲು ನುಂಕಮಲೆಯ 'ಕುಮತಿಯ' ಬೆಟ್ಟಕೆ ಬಂದನು.

ಆ ಬೆಟ್ಟದಲ್ಲಿ ರಸಸಿದ್ಧನೆಂಬ ಪರಿವಾರದ ರಾಕ್ಷಸರು ತುಂಬಾ ದುರಾಂಕಾರದಿಂದ ಇದ್ದನು. ಅವರೊಂದಿಗೆ ಹೋರಾಡಲು ಮುಂದಾದ ಭೈರವ ದೇವನ ಕುದುರೆಯ ಲಗಾಮು ಹರಿದು ಹೋಗುತ್ತದೆ. ಅತಂಹ ದೊಡ್ಡದಾದ ಕರಿಬಂಡೆಯ ಮೇಲೆ ನಡೆಯುವ ಯುದ್ಧ ಕ್ರಿ.ಪೂ.೨೬೧ ರಲ್ಲಿ ನಡೆದ ಕಳಿಂಗ ಯುದ್ಧ ನೆ ನಪಾಗುತ್ತದೆ. ಇಂತಹ ಘೋರವಾದ ಯುದ್ಧ ಮಾಡುತ್ತಿರುವ ಭೈರವ ದೇವನ ಕುದುರೆಯ ಲಗಾಮು ಹರಿದು ಹೋಗುತ್ತದೆ. ಈ ಸಮಯದಲ್ಲಿ ಬಹಳ ಚಿಂತೆಯಲ್ಲಿ ಮಗ್ನನಾಗುತ್ತಾನೆ. ಆಗ ಕಟ್ಟಿಗೆಯ ಸಂಗ್ರಹಣೆಯಲ್ಲಿ ನಿರತನಾದ ಹರಳಯ್ಯನ ಸಹಾಯ ಬೇಡುತ್ತಾನೆ. ಆಗ ತನ್ನ ಕಾಲಿನ ಹೆಬ್ಬರಳಿನ ನರವನ್ನೆ ಕಿತ್ತಿ ಕೊಡುವನು ಇದನ್ನು ಲಗಾಮಾಗಿ ಮಾಡಿಕೊಂಡು ಯುದ್ಧ ಮುಂದುವರೆಸುವನು. ಈ ಯುದ್ಧವು ಒಂದು ಭಯಾನಕ ಯುದ್ಧವಾಗಿದೆ ಏಕೆಂದರೆ ರಸಸಿದ್ಧ ರಾಕ್ಷಸರ ರಕ್ತದ ಒಂದು ಹನಿ ಭೂಮಿಗೆ ಬಿದ್ದರೆ ಒಬ್ಬ ದೈತ್ಯ ರಾಕ್ಷಸ ಜನಿಸುತ್ತಾನೆ. ಬಹಳ ವಿಚಿತ್ರವಾದದ್ದು ಯುದ್ಧ ವಿಷಯವನ್ನು ತಿಳಿದ ಕರ್ಪೂರದಮ್ಮ ಮತ್ತು ಕಾಟಣ್ಣರು ರಕ್ತವನ್ನು ಕುಡಿಯಲು ನಾಯಿಗಳಿಂದ ಆಗಮಿಸುವರು. ಯುದ್ಧ ಮಾಡುವಾಗ ರಕ್ತ ನೆಲೆಕೆ ಬಿದ್ದ ತಕ್ಷಣ ನಾಯಿಗಳು ನೆಕ್ಕುತ್ತಿದ್ದವು.

ಇದರಿಂದ ಭೈರವ ದೇವನಿಗೆ ರಸಸಿದ್ಧ ರಾಕ್ಷಸರನ್ನು ಸುಲಭವಾಗಿ ಸಂಹಾರ ಮಾಡಲಾಯಿತು. ನರವನ್ನೆ ಕಿತ್ತುಕೊಟ್ಟ ಹರಳಯ್ಯನಿಗೆ ಏನು ವರಬೇಕು ಕೇಳಿಕೊ ಎಂದನು ಆಗ ಹರಳಯ್ಯ

೧.ಸಾಮಾಜಿಕ ಹಿತವನ್ನು ಗಮನದಲ್ಲಿರಿಸಿ ಹೀಗೆ ಬೇಡುವನು ಜಾತಿ, ಬೇಧ, ಭಾವಗಳಿಲ್ಲದೆ ನಿನ್ನ ಹೊಂಡದಲ್ಲಿ ಎಲ್ಲ ಜನಾಂಗದವರು ನೀರನ್ನು ಬಳಸಬೇಕು

೨. ನೀನು ಎಲ್ಲಿ ನೆಲಸುತ್ತೀಯೋ ಅಲ್ಲಿ ನನಗೆ ಮೊದಲ ಪೂಜೆ ಆಗಬೇಕು. ಎಂದು ಎರಡು ವರ ಬೇಡಿಕೊಂಡನು ಇದರಂತೆ ಹಿಂದಿಗೂ ಕೂಡ ನುಂಕಮಲೆ ಬೆಟ್ಟದಲ್ಲಿ ಎರಡು ಕಡೆ ಪ್ರವೇಶ ದ್ವಾರದಲ್ಲಿ ಮೊದಲು ಪೂಜೆ ಮಾಡುತ್ತಾರೆ. ಹೀಗೆ ಯುದ್ಧ ಗೆದ್ದಿದ್ದರಿಂದ ಭೈರವ ಹಾಗೂ ಅಕ್ಕ ತುಪ್ಪದಮ್ಮ ಎಲ್ಲರು ಸೇರಿ ಓಕಳಿ ಆಡಿದ್ದರಿಂದ ಕರ್ಪೂರದಮ್ಮನಿಗೆ ಬದಲಾಗಿ ತುಪ್ಪದಮ್ಮ ಎಂದು ನಾಮಕರಣ ಮಾಡಿದ್ದಾರೆ. ಯುದ್ಧದಲ್ಲಿ ಸೋತ ರಾಕ್ಷಸರೆಲ್ಲರೂ ಸೇರಿ ಭೈರವನ ಕಾಲಿಗೆ ಬಿದ್ದು ಒಂದು ಬೇಡಿಕೆಯನ್ನು ಇಡುವರು ಈ ಸ್ಥಳಕ್ಕೆ ನಮ್ಮ ಹೆಸರು ಇಡಬೇಕು ಎಂದು ಕೇಳಿದಾಗ ನುಂಕವ್ವನಿಂದ ನುಂಕೆ ತೆಗೆದುಕೊಂಡು ಮಲಿಯವ್ವ ಹೆಸರಿನಿಂದ ಮಲೆ ತೆಗೆದುಕೊಂಡು ರಸಸಿದ್ಧ ರಾಕ್ಷಸನ ಹೆಸರಿನಿಂದ ಸಿದ್ಧ ತೆಗೆದುಕೊಂಡು ತಮ್ಮ ತಂದೆಯ ಹೆಸರಿನ ಈಶ್ವರ ತೆಗೆದುಕೊಂಡು ನುಂಕೆಮಲೆ ಸಿದ್ದೇಶ್ವರ ಎಂದು ನಾಮಕರಣ ಮಾಡಿ ತನ್ನ ಮಕ್ಕಳಾದ ಭೈರವ ಹಾಗೂ ಕರ್ಪೂರದಮ್ಮರ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥಸೇವೆಯನ್ನು ಮನಗಂಡ ಶಿವನು ತನ್ನದೊಂದು ಮೂರ್ತಿಯನ್ನು ಸ್ಥಾಪಿಸಿದನು.

ಕೊನೆ ಟಿಪ್ಪಣಿಗಳು

೧.ಜನಕಥ : ಡಾ. ಮಂಜುನಾಥ ಬೇವಿನಕಟ್ಟಿ, ಪುಟ – ೫೯

೨. ವರವು ಕುರುವು ಕೊಲಹಳ್ಳಿ : ಡಾ. ಮಂಜುನಾಥ ಬೇವಿನಕಟ್ಟಿ, ಪುಟ – ೯೯

೩. ನುಂಕೆಮಲೆ ಭೈರವಾರಾಧನೆ ಹೊಳಹು, ಎ ಸಿದ್ದಣ್ಣ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಪುಟ – ೮೫

೪. ನುಂಕೆಮಲೆಸಿದ್ದೇಶ್ವರ ಪುರಾಣ : ಡಾ. ಕೆ ರವೀಂದ್ರನಾಥ, ಪುಟ – ೧೨

೫. ಅದೇ, ಪುಟ– ೧೨

೬. ನುಂಕೆಮಲೆ ಭೈರವಾರಾಧನೆ ಹೊಳಹು : ಎ. ಸಿದ್ದಣ್ಣ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಪುಟ – ೬೨

೭. ನುಂಕೆಮಲೆಸಿದ್ದೇಶ್ವರ ಪುರಾಣ : ಡಾ. ಕೆ ರವೀಂದ್ರನಾಥ, ಪುಟ – ೧೬, ೧೭

೮. ಅದೇ, ಪುಟ– ೧೭

೯. ನುಂಕೆಮಲೆ ಭೈರವಾರಾಧನೆ : ಹೊಳಹು, ಎ. ಸಿದ್ದಣ್ಣ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಪುಟ – ೬೩

೧೦. ಅದೇ, ಪುಟ– ೬೭

೧೧. ನುಂಕೆಮಲೆಸಿದ್ದೇಶ್ವರ ಪುರಾಣ : ಡಾ ಕೆ ರವೀಂದ್ರನಾಥ ಪುಟ – ೩೪

೧೨. ಅದೇ, ಪುಟ– ೩೪

೧೩. ಅದೇ, ಪುಟ– ೬೩

೧೪. ಅದೇ, ಪುಟ– ೬೩

೧೫. ಅದೇ, ಪುಟ– ೬೩

ಅಧ್ಯಾಯ-೩
ಚಾರಿತ್ರಿಕ ಕಾವ್ಯವಾಗಿ ನುಂಕೆಮಲೆ ಸಿದ್ಧೇಶ್ವರ ಪುರಾಣ

ಅಧ್ಯಾಯ-೩

ಚಾರಿತ್ರಿಕ ಕಾವ್ಯವಾಗಿ ನುಂಕೆಮಲೆ ಸಿದ್ಧೇಶ್ವರ ಪುರಾಣ

ಮೊಳಕಾಲ್ಮೂರು ತಾಲೂಕಿನ ನುಂಕೆಮಲೆ ಬೆಟ್ಟವು ಹಲವು ವರ್ಷಗಳ ಇತಿಹಾಸವನ್ನು ಹೊಂದಿದೆ. ಅಲ್ಲದೇ ಶಿವ ಪಾರ್ವತಿಯರ ಒಡ್ಡೋಲಗದಲ್ಲಿ ನಡೆದ ತಪ್ಪಿನಿಂದ ರಾಕ್ಷಸರಾಗಿ ಭೂಮಿಗೆ ಬಂದು ಅವರನ್ನು ಸಂಹಾರ ಮಾಡಲು ಭೈರವನನ್ನು ಸೃಷ್ಟಿಮಾಡಿ ಈ ಭೂಮಿಗೆ ಕಳುಹಿಸಿದನು. ಇವನ ಬಗ್ಗೆ ಹಲವು ಶಾಸನಗಳು, ಕತೆಗಳು, ಗಾದೆಮಾತುಗಳು, ಒಗಟುಗಳು ಮುಂತಾದ ಮೌಖಿಕ ಪರಂಪರೆಯಾದ ಹಲವು ಚಾರಿತ್ರ್ಯಗಳನ್ನು ಕಟ್ಟಿಕೊಟ್ಟಿದ್ದಾರೆ.

ಇಲ್ಲಿ ಚಾರಿತ್ರಿಕ ಕಾವ್ಯವಾಗಿ ಹೇಗೆ ನೋಡುವುದು ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಪೂರಕವಾಗಿ ಮಾಹಿತಿಗಳನ್ನು ಬಳಸಿಕೊಂಡಿದ್ದೇನೆ. ಯಾವುದೇ ಪುಣ್ಯಪುರುಷರ ಬಗ್ಗೆ ನಿಖರವಾದ ಲಿಖಿತ ರೂಪದ ಸಾಹಿತ್ಯವು ಲಭ್ಯವಿಲ್ಲ ಕಾರಣ ಅವರನ್ನು ವರ್ಣನೆಗಳ ಮೂಲಕ ಕತೆಯಲ್ಲಿ ಹಾಗೂ ಉಪಕತೆಯನ್ನು ಕಟ್ಟಿ ಪೌರಣಿಕವಾಗಿ ಮೌಖಿಕ ಪರಂಪರೆಯಲ್ಲಿ ಭಕ್ತಿಭಾವದಿಂದ ಮೆರೆಯುತ್ತಾರೆ. ಅದರಂತೆ ನುಂಕೆಮಲೆ ಸಿದ್ದೇಶ್ವರನು ಹೇಗೆ ಒಬ್ಬ ಸಾಂಸ್ಕೃತಿಕ ನಾಯಕನಾಗಿ ಕಾಣುತ್ತಾನೆ ಎಂಬ ಪ್ರಶ್ನೆಯು ಬಹಳ ಕುತೂಹಲಕಾರಿಯಾದಾಗ ಸ್ಥಳಿಯ ಮಾಹಿತಿಯಿಂದ ಈತನು ಒಬ್ಬ ದೈವಿ ಪುರುಷ, ಪುರಾಣ ಪುರುಷ ಎಂಬುದು ಗೊತ್ತಾಗುತ್ತದೆ.

"ನುಂಕೆಮಲೆ ಸಿದ್ದೇಶ್ವರ ಪುರಾಣವು ಕಾವ್ಯವು ಹೌದು ಸ್ಥಳನಾಮ ಚರಿತ್ರೆಯು ಹೌದು ಹೀಗಾಗಿ ಇದಕ್ಕೆ ಸಾಹಿತ್ಯಿಕ ಹಾಗೂ ಚಾರಿತ್ರಿಕ ಗೌರವಗಳು ಸಲ್ಲುತ್ತವೆ."[೧] ಸಾಹಿತ್ಯವನ್ನು ಬಹಳ ಮುಖ್ಯವಾಗಿ ಮಾರ್ಗ ಸಾಹಿತ್ಯ, ದೇಶಿ ಸಾಹಿತ್ಯ ಎಂದು ವಿಂಗಡಿಸಿ ನೋಡಿದಾಗ ದೇಶಿಯತೆಯು ಮಾನವಿಯತೆಯ ಮೊಗ್ಗಲುಗಳಲ್ಲಿ ಬೇರೂರಿದ ಗಟ್ಟಿತನ ಆದರೆ ಮಾರ್ಗವು ಅಳವಡಿಸಿಕೊಂಡ ಅನಿವಾರ್ಯತೆ ಕಾವ್ಯವಾಗಿದೆ. ದೇಶಿಯ ಸಾಹಿತ್ಯವೆಂದರೆ ಅದು ಮೌಖಿಕದಲ್ಲಿ ಹುಟ್ಟಿ ಗ್ರಂಥಸ್ಥವಾಗಿ ಉಳಿದು ಬಂದಿರುತ್ತದೆ. ಹೀಗಾಗಿ ಅಲ್ಲಿ ಬರುವ ಹೆಸರುಗಳು ಮೌಖಿಕವಾಗಿ ಹಾಡಿನ ರೂಪದಲ್ಲಿ ಬರುತ್ತವೆ.

ಇಂತಹ ಒಂದು ಪುರಾಣ ಯಕ್ಷಗಾನ ಪ್ರಕಾರದಲ್ಲಿ ರಚನೆಯಾಗಿದ್ದು, ಇದು ದೇಶಿ ಕಾವ್ಯ ಬಂಧಕ್ಕೆ ಸೇರುತ್ತದೆ. "ಇದರ ಹಸ್ತಪ್ರತಿಗಳು ಎರಡು ದೊರೆತಿದ್ದು, ಒಂದರಲ್ಲಿ ಮಾತ್ರ ಸ್ತುತಿ

ಪದ್ಯದಲ್ಲಿ ಬರೆದಿರುವ ಉಲ್ಲೇಖ ಹೀಗಿದೆ. ವಿಜಯವರುಷದಿ ಅರ್ತಿ ಫಾಲ್ಗುಣವು ಮತ್ತು ಶುದ್ಧ ಪಾಡ್ಯ ನಿತ್ಯ ಶನಿಮಾರು ಪಾಲಪ್ಪನಾಯ್ಕ ಬರೆದ ಮಂಗಳ ಚರಿತೆ" ಎಂದು ಕಂಡುಬರುತ್ತದೆ. ಆದ್ದರಿಂದ ಸದ್ಯದ ಮಟ್ಟಿಗೆ ಪಾಲಪ್ಪನಾಯ್ಕ ಈ ಕೃತಿಯ ಕರ್ತೃ ಎಂಬುವುದು ಕಂಡುಬರುವುದು. ಈ ಹಿಂದೆ ಹಲವಾರು ಉಲ್ಲೇಖಗಳು ದೊರೆತಿವೆ. ಆದರೆ ಅವುಗಳಿಗೆ ನಿರ್ದಿಷ್ಟವಾದ ಮಾಹಿತಿಯಿಲ್ಲದೆ ಇರುವುದರಿಂದ ಅವುಗಳನ್ನು ಅಪೂರ್ಣ ಎಂದು ಭಾವಿಸಲಾಗಿದೆ.

ನುಂಕೆಮಲೆ ಸಿದ್ದೇಶ್ವರ ಪುರಾಣಕ್ಕೆ ಹಲವಾರು ವಿಧವಾದ "ಸಾಹಿತ್ಯ ಮೀಮಾಂಸೆಯ ಪ್ರಸ್ತಾನಗಳ ಅಧ್ಯಯನವು ಲಕ್ಷ್ಯವಾಗಿ, ಲಕ್ಷಣವಾಗಿ ಇಂತಹ ಕಾವ್ಯಗಳು ಸನ್ನಿವೇಶಕ್ಕೆ ತಕ್ಕ ಭಾವವನ್ನು, ರಾಗಲಾಪವನ್ನು ಬಳಸಿಕೊಂಡು ರಚನೆ ಮಾಡಿವೆ. ಹೀಗಾಗಿ ಈ ಕೃತಿಗೆ ಶ್ರವ್ಯಗುಣ ಜೊತೆಗೆ ದೃಶ್ಯಗುಣ ಸೇರಿ ಪ್ರಸಂಗ ಪ್ರದರ್ಶನ ಸಾಹಿತ್ಯವೆಂಬ ಮರ್ಯಾದೆ ಸಲ್ಲುತ್ತದೆ. ಈ ಕಾರಣಕ್ಕಾಗಿಯೇ ನುಂಕೆಮಲೆ ಸಿದ್ದೇಶ್ವರ ಪುರಾಣವು ವಿಶಿಷ್ಟ ಕೃತಿಯಾಗಿದೆ"[೩] "ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನ ಕಾವ್ಯಗಳು ಜನಪದ ಸಾಹಿತ್ಯದ ವಿಶಿಷ್ಟ ಪ್ರಕಾರಗಳಾಗಿ ಮೂಡಿಬಂದಿವೆ. ಶಿಷ್ಟ ಸಾಹಿತ್ಯದಿಂದ ಭಿನ್ನ ಎನಿಸಿದರು ಶ್ರೀ ಸಾಮಾನ್ಯರಿಗೆ ಹರಿದು ಬಂದ ಸಾಹಿತ್ಯವಿದು."[೪] ಕನ್ನಡ ಸಾಹಿತ್ಯ ಸಂಸ್ಕೃತಿಯ ಪರಂಪರೆಯನ್ನು ನೋಡಿದಾಗ ತನ್ನದೇಯಾದ ವಿಶಿಷ್ಟ ನಾಟಕ, ಬೈಲಾಟ, ಕೋಲಾಟ, ಭಜನೆ, ತತ್ವಪದ, ಸೋಬಾನೆ ಮುಂತಾದ ಜನಭಾಷೆಯ ಶೈಲಿಯಲ್ಲಿ ಉನ್ನತ ಶಿಖರಕ್ಕೆ ಕೊಂಡೊಯ್ಯುವಲ್ಲಿ ಅಗ್ರಸ್ಥಾನದಲ್ಲಿದೆ. ಬರುಬರುತ್ತಾ "ಯಕ್ಷಗಾನ, ಬೈಲಾಟಗಳನ್ನು ರಾಗಬದ್ಧವಾಗಿ ವಾಚಿಸುವ ಪರಂಪರೆಯಿತ್ತು. ಅಭಿರುಚಿ ಹೆಚ್ಚಾದಂತೆ ಈ ವಾಚನಕ್ಕೆ ಅಭಿನಯ ಸೇರಿ ಕಾವ್ಯಗಳಲ್ಲಿ ದೈವವಿದೆ, ನೀತಿಯಿದೆ, ಚರಿತ್ರೆಯಿದೆ, ಧರ್ಮಯಿದೆ. ಮೇಲಾಗಿ ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸುವ ಗುಣವಿದೆ."[೫] ಇದರಿಂದ ಕಾವ್ಯ ಪರಂಪರೆಯು ಬೆಳೆದು ನಿಂತು ಕರ್ನಾಟಕ ಸಾಹಿತ್ಯ ತವರು ಮನೆಯಾಗಿದೆ. ನುಂಕೆಮಲೆ ಸಿದ್ದೇಶ್ವರ ಪುರಾಣವು ಮುಖ್ಯವಾಗಿ ಹಲವಾರು ರೀತಿಯಾದ ದ್ವಿಪದಿ, ತ್ರಿಪದಿ, ಕಂದ, ಸಾಂಗತ್ಯ, ಜಂಪೆ, ಅಟತಾಳ, ಯಾಲಪದ ಮುಂತಾದ ರಾಗ, ತಾಳ ಸಂಯೋಗದಲ್ಲಿ ರಚನೆಯಾಗಿದೆ.

"ಕನ್ನಡ ಸಾಹಿತ್ಯದಲ್ಲಿ ೧೭ನೇ ಶತಮಾನ ಸ್ಥಳಪುರಾಣಗಳ ದೃಷ್ಟಿಯಿಂದ ಮಹತ್ವದ ಕಾಲ. ಕ್ಷೇತ್ರಮಹಾತ್ಮೆಗಳನ್ನು ಹೇಳುವುದು. ಆ ಕುರಿತು ಕಾವ್ಯ ರಚಿಸಿದ್ದು ಈ ಕಾಲದ ಸಾಮಾನ್ಯ ದೋರಣೆಯಾಗಿತ್ತು."[೬] ಇಂತಹ ದೋರಣೆಯಿಂದ ಕಾವ್ಯವಾಗಿ ಪುರಾಣ ಮಹಾತ್ಮೆಯಾಗಿ ಯಾವ ರೀತಿಯಾಗಿ ಕಟ್ಟಿಕೊಡಬಹುದು ಎಂಬುದನ್ನು ವರ್ಗೀಕರಿಸಲಾಗಿದೆ.

೧.ವ್ಯಕ್ತಿಕೇಂದ್ರಿತ

೨.ತತ್ವಕೇಂದ್ರಿತ

೩.ಸ್ಥಳಕೇಂದ್ರಿತ

ಇವುಗಳನ್ನು ಕಾವ್ಯವಾಗಿ ಅಥವಾ ಪುರಾಣವಾಗಿ ನೋಡುವ ದೃಷ್ಟಿಕೋನ ಹೀಗಿದೆ.

೧.ವ್ಯಕ್ತಿಕೇಂದ್ರಿತ ಪುರಾಣ

ಈ ಭರತ ಪುಣ್ಯ ಭೂಮಿಯಲ್ಲಿ ಎಂತಹ ಮಹಾನ್ ವ್ಯಕ್ತಿಗಳು ಜನ್ಮತಾಳಿ ಹೋಗಿದ್ದಾರೆ. ಹಾಗೂ ಈ ದೇಶದ ಪರಂಪರೆಯನ್ನು ಎತ್ತಿಹಿಡಿದು ದೇಶದ ಹಿರಿಮೆಯನ್ನು ಬೆಳಗಿ ಹೋಗಿದ್ದಾರೆ. ಇಂತಹ ಪುಣ್ಯ ಪುರುಷರ ಬಗ್ಗೆ ಕತೆ, ನಾಟಕ, ಕವನ, ನುಡಿಮುತ್ತುಗಳು, ಒಗಟುಗಳು ಮುಂತಾದ ಅವರ ಹಿರಿಮೆ ಹಾಗೂ ಸಾಧನೆಯ ಬಗ್ಗೆ ಬರೆದಿದ್ದಾರೆ. ಈ ಸಮಾಜದಲ್ಲಿ ವ್ಯಕ್ತಿಯಾಗಿ ಬದುಕಿ ಸಮಾಜದ ಉಳಿವಿಗಾಗಿ ಹೋರಾಟ ಮಾಡಿ ಸಾಮಾನ್ಯ ಜನರ ಮನಸ್ಸಿನಲ್ಲಿ ಅಜರಾಮರಾವಾಗಿ ಉಳಿದ ಹಲವು ವ್ಯಕ್ತಿಗಳನ್ನು ಕಾವ್ಯವಾಗಿ ಕಟ್ಟಿಕೊಟ್ಟಿದ್ದಾರೆ. ಅಂತಹ ಜನರ ನೋವಿನಿಂದ ಹಾಗೂ ರಾಕ್ಷಸರನ್ನು ಸಂಹಾರ ಮಾಡಿದ ಭೈರವರ ಪವಾಡ ಹಾಗೂ ಮಹಿಮೆಯ ಬಗ್ಗೆ ದಂತಕತೆಗಳು ಸೃಷ್ಟಿಯಾಗುತ್ತದೆ. ಇದಕ್ಕೆ ನಾವು ವ್ಯಕ್ತಿಕೇಂದ್ರಿತ ಪುರಾಣ ಎಂದು ಕರೆಯುತ್ತೇವೆ.

ಉದಾಹರಣೆಗಾಗಿ "ಗುರು ಮಹಾತ್ಮ್ಯೆ, ಜಗದ್ಗುರು ಪಂಚಾಶಿವಾಚಾರ್ಯ, ನಾಯಕನಹಟ್ಟಿಯ ಶ್ರೀಗುರು ತಿಪ್ಪೇರುದ್ರಸ್ವಾಮಿ ಮುಂತಾದವರು

೨.ತತ್ವಕೇಂದ್ರಿತ ಪುರಾಣ

ಯಾವುದೇ ಒಂದು ಜಾತಿ, ಜನಾಂಗ, ಧರ್ಮ ಮುಂತಾದ ಅಚಲವಾದ ಧರ್ಮ ಸಿದ್ಧಾಂತವನ್ನು ಮೈಗೂಡಿಸಿಕೊಂಡಿರುವ ಜೀವನ ಸಾಗಿಸುವ ಪರಿಪಾಠವಿದೆ. ಭಾರತೀಯ ಪರಂಪರೆಯಲ್ಲಿ ಸಾಹಿತ್ಯಿಕವಾಗಿ ಕಾವ್ಯ ರಚನೆ ಮಾಡಿದ ತನ್ನದೇಯಾದ ಛಾಪು ಮೂಡಿಸುತ್ತಾವೆ. "ಪ್ರತಿಯೊಂದು ಧರ್ಮದ ಹಿಂದೆ ಇರುವ ಉದ್ದೇಶ ತತ್ವ ಪ್ರಸಾರವಾಗಿದೆ."[೭] ಧಾರ್ಮಿಕ ಮಹಾ ಪುರುಷರು ಸಾರಿದ ತತ್ವಗಳು ಜನರ ಮನಸ್ಸಿನಲ್ಲಿ ಬೇರೂರಿದ್ದರಿಂದ

ಅವರಿಗೆ ತತ್ವವನ್ನು ಪರಿಪಾಲಿಸುತ್ತಾರೆ. "ವೀರಶೈವ ಅಷ್ಟಾವರಣ, ವೈದಿಕ ಉಪಾಸನೆ, ಜೈನರ ಪಂಚಾವೃತ ಮುಂತಾದವುಗಳನ್ನು ಕೀರ್ತಿಸುವ ಉದ್ದೇಶದಿಂದ ಮಹಾತ್ಮೈಗಳು ಸೃಷ್ಟಿಯಾಗಿವೆ.

ಉದಾಹರಣೆ ಪಾದೋದಕ ಮಹಾತ್ಮೈ, ಆಧ್ಯಾತ್ಮೈ, ರಾಮಾಯಣದ ಮಹಾತ್ಮೈ, ದೇವಿ ಮಹಾತ್ಮೈಗಳನ್ನು ನೋಡಬಹುದು."[೮]

೩.ಸ್ಥಳಕೇಂದ್ರಿತ ಪುರಾಣಗಳು

ಒಂದು ಪ್ರಸಿದ್ಧವಾದ ಸ್ಥಳ, ಬೆಟ್ಟ, ಗಿರಿವನ ದುರ್ಗಗಳು ಹಾಗೂ ಕೋಟೆಕೊತ್ತಲುಗಳು ಐತಿಹಾಸಿಕ ಪ್ರಖ್ಯಾತ ಪಡೆದ ಸ್ಥಳವನ್ನು ಜನರ ಮನಸ್ಸಿನಲ್ಲಿ ಭಕ್ತಿಯ ನಂಬಿಕೆಯ ಹಾದಿಯಲ್ಲಿ ಮೈಗೂಡಿಸಿಕೊಂಡ ಹಲವಾರು ಸ್ಥಳಗಳಿವೆ. ಇವು ಕಾವ್ಯ, ಪುರಾಣ, ಕತೆ, ನಾಟಕಕ್ಕೆ ಪ್ರಸಿದ್ಧಿ ಪಡೆದು ಮೌಖಿಕ ಪರಂಪರೆಯಿಂದ ಬೆಳೆದು ಬಂದತಹ ಸ್ಥಳಗಳಿಗೆ ಸ್ಥಳಕೇಂದ್ರಿತ ಪುರಾಣಗಳು ಎಂದು ಕರೆಯುತ್ತೇವೆ. ಇದರಂತೆ ಕನ್ನಡದಲ್ಲಿ ಸಾವಿರ ಸಾವಿರ ಸ್ಥಳಗಳ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

ಉದಾಹರಣೆಗೆ ಮೊಳಕಾಲ್ಮೂರಿನ ತಾಲೂಕಿನಲ್ಲಿರುವ 'ಜಟಿಂಗ ರಾಮೇಶ್ವರ ಬೆಟ್ಟದಲ್ಲಿರುವ ಶಾಸನಗಳು ಅಶೋಕ ಮಹಾಶಯನಿಗೆ ಸಂಬಂಧಿಸಿದಂತೆ ಮೊಟ್ಟಮೊದಲ ಕನ್ನಡ ಪದವಾದ 'ಇಸಿಲ' ಎಂಬ ಪದವು ದೊರೆತಿದೆ. ಇದರ ಅರ್ಥ ಕೋಟೆಯಿಂದ ಆವೃತವಾದ ಪ್ರದೇಶ ಹಾಗೂ ಹಲವಾರು ಮಹಾತ್ಮೈ ಪುರಾಣ ಸ್ಥಳಗಳು ಕಂಡುಬಂದಿದ್ದು ನುಂಕೆಮಲೆ ಸಿದ್ದೇಶ್ವರ ಪುರಾಣ, ಆದಿಚುಂಚನಗಿರಿ ಮಹಾತ್ಮೈ ಮುಂತಾದವುಗಳು ಕಂಡುಬರುತ್ತವೆ.

ಮೊಳಕಾಲ್ಮೂರ ತಾಲೂಕಿಗೆ ಸಂಬಂಧಿಸಿದಂತೆ ನುಂಕೆಮಲೆ ಸಿದ್ದೇಶ್ವರ ಪುರಾಣ ಕಾವ್ಯಗಳ ಬಗ್ಗೆ ಹಲವಾರು ಸ್ಥಳಿಯ ಸಾಹಿತಿಗಳು ಕಾವ್ಯ ರಚಿಸಿದ್ದಾರೆ. " ಸಾಹಿತ್ಯ ಕ್ಷೇತ್ರದಲ್ಲಿ ದುಡಿದು ಖ್ಯಾತನಾಮರಾದ ತ.ರಾ.ಸು, ದಾಶರಥಿ ದೀಕ್ಷಿತ್, ಟಿ.ಕೆ. ರಾಮರಾವ್ ಇವರು ತಮ್ಮ ಬಾಲ್ಯದ ಜೀವನವನ್ನು ಮೊಳಕಾಲ್ಮೂರಿನಲ್ಲಿ ಕಳೆದಿರುವುದು ಈ ತಾಲೂಕಿನ ವಿಶಿಷ್ಟವಾಗಿದೆ."[೯] ಈ ತಾಲೂಕಿನಲ್ಲಿ ಜನಪದ ಸಾಹಿತ್ಯದ ಸಂಗ್ರಹದಲ್ಲಿ ಅಭಿರುಚಿಯುಳ್ಳ ಕತೆಗಾರರಾದ ಕೊ.ಶ.ವಿಶ್ವನಾಥ ಪ್ರಮುಖರು ೧೯೩೪-೩೬ ರಲ್ಲಿ ಮೊಳಕಾಲ್ಮೂರಿನ ಪವಿತ್ರ ಕ್ಷೇತ್ರ ನುಂಕೆಮಲೆಯ ಮಹತ್ವದ ಬಗ್ಗೆ ಕೃತಿ ರಚನೆ ಮಾಡಿದ ಎಂ.ರಂಗಪ್ಪನವರು

ಮೊಳಕಾಲ್ಮೂರಿನವರು ಹಾಗೂ ಕವಿತೆ, ನಾಟಕ, ಕಾದಂಬರಿ ಆಧ್ಯಾತ್ಮಿಕ ಕೃತಿಗಳನ್ನು ಬರೆದ ಹಲವಾರು ಸಾಹಿತಿಗಳು ಇದ್ದಾರೆ. ಮುಖ್ಯವಾಗಿ ವಸಂತ ಮಾಸ್ತರ್, ಬಿ.ಜಿ.ಕೆರೆಯ ಪೆನ್ನಯ್ಯ, ಕೆ.ನರಸಿಂಹಮೂರ್ತಿ ಈ ತಾಲೂಕಿನ ಪ್ರತಿಭಾನ್ವಿತ ಲೇಖಕರು. ಕನ್ನಡದಲ್ಲಿ 'ಅನುಭವಾಮೃತ' ಎಂಬ ಶ್ರೇಷ್ಠ ಕೃತಿ ರಚನೆ ಮಾಡಿದ ಹಿರಿಯ ಕವಿ ಮಹಾಲಿಂಗರಂಗರು ಈ ತಾಲೂಕಿನ ಹುಚ್ಚಂಗಿದುರ್ಗದವರು. ಲಾವಣಿಗಳು, ತತ್ವಪದಗಳು, ಜನಪದ ಸಾಹಿತ್ಯ, ಕಂಬಾರರ 'ಸಂಗ್ಯಾಬಾಳ್ಯ' ನಾಟಕವನ್ನು ಓದುವ ಮಾಸ್ತರ್ ಕತೆ ಎಂಬ ಬಯಲಾಟ ಪ್ರಸಿದ್ಧಿ ಪಡೆದಿದೆ.

ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಒಂದು ಕಾವ್ಯವಾಗಿ ಹೇಗೆ ನೋಡುವುದು? ಎನ್ನುವಂತ ಪ್ರಶ್ನೆ ಬರುತ್ತದೆ. ಕಾರಣ ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಒಂದು ನಿರ್ದಿಷ್ಟ ಕಾವ್ಯವಾಗಿ ನೋಡಲು ಸಾಧ್ಯವಿಲ್ಲ ಏಕೆಂದರೆ ದೈವತ್ವದ ಪುರುಷ ಹಾಗೂ ಪುರಾಣ ಪುರುಷರ ಬಗ್ಗೆ ಕೆಲವು ಕಾಲ್ಪನಿಕ ಕಥೆಯನ್ನು ಕಟ್ಟಿಕೊಡುತ್ತಾರೆ. ಜೊತೆಗೆ ಒಬ್ಬರ ಬಾಯಿಂದ ಮತ್ತೊಬ್ಬರಿಗೆ ಕೇವಲ ಮೌಖಿಕವಾಗಿ ಜನಭಾಷೆಯಲ್ಲಿ ಹರಡಿದೆ. ಆದರೆ ನಿರ್ದಿಷ್ಟವಾದ ನುಂಕೆಮಲೆ ಸಿದ್ದೇಶ್ವರ ಬಗ್ಗೆ ಬರೆದಿಲ್ಲ.

ಈ ಅಧ್ಯಯನಕ್ಕೆ ಪೂರಕವಾಗಿ ಡಾ.ಕೆ ರವೀಂದ್ರನಾಥ ಅವರು ಸಂಪಾದಿಸಿದ ನುಂಕೆಮಲೆ ಸಿದ್ದೇಶ್ವರ ಪುರಾಣ ಎಂಬ ಕಾವ್ಯದಲ್ಲಿ ಕೇವಲ ಅವರು ದೈವ ಪುರುಷ ಎಂದೇ ಹಲವಾರು ವ್ಯಾಕರಣಾಂಶ, ಛಂದಸ್ಸು, ನುಡಿಗಟ್ಟು, ಆಡುಭಾಷೆಯಿಂದ ಗ್ರಾಂಥಿಕ ಭಾಷೆಗೆ ಹೊಂದುಕೊಂಡು ಚರ್ಚೆ ಮಾಡಿದ್ದಾರೆ. ಇಂತಹ ಒಂದು ಕಾವ್ಯದ ಒಳಗೆ ಬರುವಂತಹ ಹಲವಾರು ಸಾಹಿತ್ಯಿಕ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹೇಗೆ ಒಂದು ಕಾವ್ಯವು ನಿರ್ಮಾಣವಾಗಿದೆ? ಅದರ ಮಾನದಂಡಗಳೇನು ? ಆ ಕಾವ್ಯದ ನಿಲುವೇನು ? ನಿರ್ದಿಷ್ಟ ಚೌಕಟ್ಟು ಯಾವುದು ? ಎಂಬಂಥ ಪ್ರಶ್ನೆಗಳನ್ನು ಹಾಕಿಕೊಂಡಾಗ ನುಂಕೆಮಲೆ ಸಿದ್ದೇಶ್ವರ ಪುರಾಣ ಕಾವ್ಯ ರಚನೆ ಮಾಡುವಾಗ ಯಾವ ಸಾಹಿತ್ಯ ಅಂಶದಿಂದ ಕಾವ್ಯವನ್ನು ಕಟ್ಟಿದ್ದಾರೆ ಎಂಬುವುದು ಮುಖ್ಯವಾಗುತ್ತದೆ.

ಈ ಹಿನ್ನಲೆಯಲ್ಲಿ ಕಾವ್ಯದಲ್ಲಿ ಬಳಸಿದ ಕೆಲವು ಸಾಲಿನ ಸಾಹಿತ್ಯದ ತಾತ್ವಿಕತೆಯನ್ನು ನೋಡಿದಾಗ ಹೇಗೆ ಕಾವ್ಯವಾಗಿ ರೂಪುಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

"ದೇವ ಲಾಲಿಸು ಎನ್ನ ಬಿನ್ನಪ । ಭಾವನೆಯು ಬೇರಿಲ್ಲ ಮನದಳು ।

ಸೇವಕನು ನಾನಿಂತು ಬೇಡುವೆ ಭಾವ ಜಾರಿ

ದುಷ್ಟರಾದರೆ ಶಿಕ್ಷಿಸೆನ್ನುತ । ಶಿಷ್ಟರಾದರೆ ರಕ್ಷಿಸೆನ್ನುತ

ಇಷ್ಟು ಅಪ್ಪಣೆಯಂತೆ ನಡೆಯುವ । ಸೃಷ್ಟಿಗೊಡೆಯೆ"

ಈ ಪದ್ಯದ ಸಾಲುಗಳು ಕಾವ್ಯದ ಪ್ರತಿಬಿಂಬವಾಗಿದೆ. ಏಕೆಂದರೆ ಸಾಹಿತ್ಯದ ಒಳ ಅರ್ಥದಲ್ಲಿ ಕಾವ್ಯವು ಪ್ರಯೋಗದ ದೃಷ್ಟಿ ಎದ್ದು ಕಾಣುವುದು ಕಾವ್ಯಕ್ಕೆ ಬೇಕಾದ ಗಟ್ಟಿತನ ತೋರಿಸುತ್ತದೆ. ನಯ, ವಿನಯ, ಭಕ್ತಿ, ಭಾವದ ಪ್ರಾಧ್ಯಾನತೆ ಇಲ್ಲಿ ದೇವರನ್ನು ಕರೆಯುವ ಪ್ರಸಂಗ ಸೇವಕನಾಗಿ ಬಾ, ದೇವರಾಗಿಯೂ ಬಾ, ಆದರೆ ಸಲಹು ಎನ್ನನು ಎಂದು ಬೇಡಿಕೊಳ್ಳುವ ಪರಿಪಾಠ ಇದೆ. ಕೆಟ್ಟವನಾದರೆ ಉಗ್ರವಾದ ಶಿಕ್ಷೆಯ ನೀಡಿ ಪಾಠವನ್ನು ಕಲಿಸೆನ್ನ ಒಳ್ಳೆಯವನು ಆದರೆ ಸೇವಕನಾಗಿ ಮಾಡಿಕೊಂಡು ಕರುಣಿಸೆನ್ನ ನಾನು ನಿನ್ನ ಪಾದ ಕಮಲವನ್ನು ಹಂಬಲಿಸುವ ಭಕ್ತ ನಾನು ಎಂಬ ದೇವರನ್ನು ಸಂತೈಸುತ್ತಾನೆ. ಕಾವ್ಯವಾಗಿ ಕಟ್ಟಿಕೊಡಲು ಈ ಸಾಲುಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ವಿಶ್ಲೇಷಿಸಿದ್ದೇನೆ. ಮತ್ತೆ ಕೆಲವು ಕವಿಗಳು ತಮ್ಮ ಕಾವ್ಯದೊಳಗೆ ವರ್ಣನೆಯ ಮೂಲಕ ಹೇಗೆ ಕಟ್ಟಿಕೊಡುತ್ತಾರೆ. ಎಂಬುದು ಸಹ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನುಂಕೆಮಲೆ ಸಿದ್ದೇಶ್ವರನು ಏನೆಲ್ಲ ರೂಪವ ತಾಳಿದ ಪ್ರಸಂಗವನ್ನು ವರ್ಣನೆಯ ಮೂಲಕ ಗಟ್ಟಿಶಬ್ಧ ಮಾಲೆಯೊಂದಿಗೆ ತಿಳಿಸುವುದು ಮುಖ್ಯವಾಗಿದೆ. ಇಲ್ಲಿ ವರ್ಣಿತವಾದ ಕೆಲವು ಕಾವ್ಯದ ಮುಖಾಂತರ ನೋಡುವುದಾದರೆ.

"ಹುಲ್ಲೆಗಳು ಸಾರಂಗ ಚಲ್ವ ಎಣ್ಣದ ಪಕ್ಷಿ

ಎಲ್ಲಸದಿ ಇರುತಿಹುವು । ಅಲ್ಲಿ ಆಡುವುದೂ

ಬಗೆ ಬಗೆಯ ವೃಕ್ಷಗಳು ನಗುವ ತೋಪುಗಳಿಹವೂ ।

ಸೊಗಸು ತೋರುವ ಲತೆಯು । ಮಿಗಿಲಾಗಿ ಇಹವೂ

ಸುಧೆಯಂತೆ ಜಲವಿರುವ । ನದಿಯು ಹರಿಯುವುದಲ್ಲಿ ।

ಮದನ ಹರಸುತನದಲ್ಲಿ । ಪದುಳದಿಂದಿಹನು" ೧೧

ಕವಿಯ ಕಲ್ಪನೆಯ ಲೋಕದಲ್ಲಿ ಕಾಡಿನಲ್ಲಿರುವ ಹಲವಾರು ಪರಿಸರ ಪ್ರಾಣಿಗಳು, ಗಿಡ, ಮರ, ಬೆಟ್ಟ, ಹೂ, ಹಣ್ಣು, ಕಾಯಿ, ಮುಂತಾದವುಗಳನ್ನು ವರ್ಣನೆ ಮಾಡುವುದೇ ಒಂದು ಚೆಂದ. ಇಂತಹ ಕಾವ್ಯಮಯ ಲೋಕದಲ್ಲಿ ಶ್ರೀ ನುಂಕೆಮಲೆ ಸಿದ್ದೇಶ್ವರದ ವರ್ಣನೆ

ರಮಣೀಯವಾದುದು. ಈ ಪದ್ಯದ ತಿರುಳು ಕಾಡಿನಲ್ಲಿರುವ ಜಿಂಕೆಗಳನ್ನು ಕೊಂದು ತಿನ್ನುತ್ತಿದ್ದ ಪಲಮರಾಜನೆಂಬ ರಾಕ್ಷಸನು ಅರಿವಿಲ್ಲದೆ ಪ್ರಾಣಿಗಳನ್ನು ಕೊಲ್ಲುವುದು ಅವನಿಗೆ ಸರ್ವೆ ಸಾಮಾನ್ಯವಾಗಿತ್ತು. ಆದರೆ ಒಬ್ಬ ಕವಿಯಾದವನು ಹೇಗೆಲ್ಲಾ ವರ್ಣನೆ ಹಾಗೂ ಒಂದು ಕಾವ್ಯವಾಗಿ ಚಿತ್ರ – ವಿಚಿತ್ರವಾಗಿ ವರ್ಣಿತವಾಗಿ ಕಾವ್ಯ ಕಟ್ಟಿದ್ದಾರೆ.

ಉದಾಹರಣೆಗೆ ಕುವೆಂಪು ಅವರ "ದೇವರು ರುಜು ಮಾಡಿದನು" ಎಂಬ ಕಾವ್ಯದಲ್ಲಿ ಹಕ್ಕಿಗಳ ಹಾರಾಟದಿಂದ ಸುಂದರವಾಗಿ ವರ್ಣಿಸಿದ್ದಾರೆ. ಮತ್ತೊಂದು ಸನ್ನಿವೇಶ ಭೈರವ ಹಾಗೂ ರಾಕ್ಷಸರ ಯುದ್ಧ ಮಾಡುವ ಪ್ರಸಂಗವು ತುಂಬಾ ಭಯನಕರವಾದ ಸಂಗತಿ. ಏಕೆಂದರೆ ಯುದ್ಧ ಮಾಡುವ ರಾಕ್ಷಸರು ಒಂದು ರಕ್ತ ಭೂಮಿಗೆ ಬಿದ್ದರೆ ಮತ್ತೆ ಒಬ್ಬ ಮಹಾ ದೈತ್ಯರು ಹುಟ್ಟುತ್ತಾರೆ ಅದನ್ನು ಕಾವ್ಯದಲ್ಲಿ ಹೀಗೆ ನೋಡುವುದು.

"ರಕ್ಕಸರ ಮೈಯಿಂದ ರಕ್ತವು

ದಿಕ್ಕು ದಿಕ್ಕಿಗೆ ಚಲ್ಲುತಿರ್ದುದ

ಶಕ್ಯವಿಲ್ಲದೆ ಕದನಗೈದರು ಮಿಕ್ಕಿ ರಣದಲ್ಲಿ

ತೊಟ್ಟು ರಕ್ತವು ನೆಲಕೆ ಬಿದ್ದರೆ

ಹುಟ್ಟುವುರು ಮಹಾಶೂರ ದೈತ್ಯರು

ಲೆಕ್ಕ ಮಾಡಲು ಶಕ್ಯವಿಲ್ಲವು ರಕ್ಕಸರ ಸೈನ್ಯ"[೧೨]

ಈ ಒಂದು ಕಾವ್ಯದಲ್ಲಿ ಕಂಡು ಬರುವ ಅಂಶವೆಂದರೆ ಒಂದು ಕಡೆ ದೈವಶಕ್ತಿ ಪುರುಷನಾದ 'ಭೈರವ' ಮತ್ತೊಂದು ಕಡೆ ದುಷ್ಟಶಕ್ತಿಗಳ ತೊಳ್ಬಲ ಈ ಎರಡರ ಮಧ್ಯೆ ಯುದ್ಧ ನಡೆಯುವ ಸಂದರ್ಭದ ವರ್ಣನೆ ತುಂಬಾನೆ ಕುತೂಹಲಕರವಾದ ದೃಶ್ಯವಾಗಿ ಕಟ್ಟಿಕೊಟ್ಟಿದ್ದಾರೆ. ಈ ಯುದ್ಧದ ಸಂದರ್ಭ ನೋಡಿದರೆ 'ರನ್ನನ ಗಧಾಯುದ್ಧ'ದ ಭೀಮ ದುರ್ಯೋಧನರ ಯುದ್ಧ ನೆನೆಪಾಗುವುದು ಅಲ್ಲಿ ರನ್ನ ಕವಿ ಯುದ್ಧವನ್ನು ವರ್ಣಿಸುವಾಗ' 'ಸಿಂಹಾವಲೋಕನ' ಕ್ರಮದಿಂದ ವಿವರಿಸಿದ್ದಾರೆ. ಅಲ್ಲಿ ದುರ್ಯೋಧನನಿಗೆ ತೊಡೆಯಲ್ಲಿ ಜೀವವಿರುವ ಸಂಗತಿ ಶ್ರೀ ಕೃಷ್ಣನಿಗೆ ಗೊತ್ತಿದ್ದು ಅವನ ಅನುಗ್ರಹದಂತೆ ಭೀಮ ದುರ್ಯೋಧನನನ್ನು ಕೊಂದನು. ಅದೇ ಸಂದರ್ಭವು ಈ ಕಾವ್ಯದಲ್ಲಿ ಮೂಡಿದೆ. ರಕ್ತನೆಲಕ್ಕೆ ಬೀಳದಂತೆ ಕರ್ಪೂರದಮ್ಮ

ನಾಯಿಗಳೊಂದಿಗೆ ಬಂದು ನೆಲಕ್ಕೆ ಬೀಳುವ ರಕ್ತವನ್ನು ನಾಯಿಗಳು ನೆಕ್ಕುತ್ತಿದ್ದವು ಆಗ ಮತ್ತೊಬ್ಬರ ರಾಕ್ಷಸರು ಜನಿಸದೆ ಇದ್ದರಿಂದ ಸುಲಭವಾಗಿ ಭೈರವ ರಾಕ್ಷಸರನ್ನು ಕೊಂದನು. ಮತ್ತೊಂದು ಸನ್ನಿವೇಶದ ಕಾವ್ಯ ಸೃಷ್ಟಿಯನ್ನು ನೋಡುವುದಾದರೆ ಕಾವ್ಯವು ಕಲ್ಪನೆಯಿಂದ ಕಟ್ಟಿಕೊಡುವ ಪ್ರಸಂಗವೇ ಬೇರೆ ಅದನ್ನು ಅನುಭವಿಸಿ ಕಟ್ಟಿಕೊಡುವ ಪ್ರಸಂಗವೇ ಬೇರೆ ಈ ಹಿನ್ನಲೆಯಲ್ಲಿ ಹೋರಾಟದ ಕಾಲದಲ್ಲಿ ಹಲವಾರು ಕಾವ್ಯಮಯವಾದ ಪದ್ಯಗಳು, ಗದ್ಯಗಳು ಸೃಷ್ಠಿಯಾಗಿವೆ. ಇಲ್ಲಿ ಶ್ರೀ ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಹೋರಾಟದ ಹಿನ್ನಲೆಯಾಗಿ ಕಾವುವನ್ನು ಕಟ್ಟುವುದು ಹೇಗೆ ಎಂಬುದನ್ನು ನೋಡುವುದಾದರೆ

"ಹೊಡೆಯಿರೈ ರಣಭೇರಿ ವಾದ್ಯವ

ನುಡಿಸಿರೈ ರಣಕಹಳೆ ಕೊಂಬನು

ಗಡನದಿಂ ಪೋಗಿಂತು ವೈರಿಯ ಕಡಿದುಬರುವೆ"[೧೩]

ಇಲ್ಲಿ ಯುದ್ಧದ ಸಂದರ್ಭವನ್ನು ಇಟ್ಟುಕೊಂಡು ಹೇಗೆ ಯುದ್ಧ ಮಾಡಲು ಹೊರಡುತ್ತಾರೆ ಎಂಬುದು ವರ್ಣಿಸಿದ್ದಾರೆ. ಕಾಟಣ್ಣ ಹಾಗೂ ಬಲ್ಲಾಳರ ಮಧ್ಯೆ ನಡೆಯುವ ಸಂದರ್ಭ ಇವರಿಬ್ಬರ ಯುದ್ಧ ನಿಲ್ಲಿಸಲು ಮುಂದಾದ ಭೈರವನ ಪ್ರಯತ್ನ ವಿಫಲವಾದಾಗ ಯುದ್ಧಕ್ಕೆ ಸಿದ್ಧರಾಗಿ ಹೊರಡುವ ಸೈನ್ಯಕ್ಕೆ ಬೆಂಬಲವಾಗಿ ರಣಕಹಳೆಯನ್ನು ಊದಿಸಿ ವಾದ್ಯಗಳೊಂದಿಗೆ ಧಾವಿಸುವರು. ಆದರೆ ಕರ್ಪೂರದಮ್ಮ ತಮ್ಮ ದೈವ ಬಲದಿಂದ ಭಾರಿ ಸಾಮಾಗ್ರಿಗಳು ನಾಶವಾದವು ಇದರಿಂದ ಬಲ್ಲಾಳನು ಸೋಲನ್ನು ಒಪ್ಪಿಕೊಂಡ ಮತ್ತೊಂದು ಅಂಶವೆಂದರೆ ಜಯ ಸಿಕ್ಕಾಗ ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಕಾವ್ಯವಾಗಿ ಕಟ್ಟುವ ಬಗೆ ಹೇಗೆ ಎಂಬುದನ್ನು ನೋಡುವುದಾದರೆ

"ಜಯಜಯ ಈಶನೇ। ಜಯತು ಮಹೇಶನೇ।

ಜಯಜಯ ಜಗಧೀಶ। ಜಯತು ಪರಮೇಶ

ತ್ರಾಹಿ ಭಕ್ತರ ಬಂಧು। ತ್ರಾಹಿ ತಾರುಣ್ಯ ಸಿಂಧು

ತ್ರಾಹಿ ಕರುಣಿಸುಯೆಂದು। ತ್ರಾಹಿದಯ ಬಂಧು"[೧೪]

ಏಕತಾಳದಲ್ಲಿ ರಚನೆಯಿಂದ ಈ ಪದ್ಯವು ಕಾವ್ಯದ ಹಿನ್ನೆಲೆಯಲ್ಲಿ ನೋಡುವ ದೃಷ್ಟಿಕೋನದಿಂದ ದೀನ ದಲಿತರ ಹಾಗೂ ಕಷ್ಟದಲ್ಲಿರುವ ಜನರ ನೋವಿಗೆ ಸ್ಪಂದಿಸುವ ಸಂದರ್ಭವಾಗಿ ಕಾವ್ಯವನ್ನು ರಚನೆ ಮಾಡಿದ್ದಾರೆ. ಈ ಪದ್ಯದಲ್ಲಿ ಜನರು ಶಿವನನ್ನು ಯಾವ ಯಾವ ಹೆಸರುಗಳಿಂದ ಕರೆದು ಬೇಡುತ್ತಾರೆ. ಎಂದರೆ 'ಮಹೇಶ', 'ಪರಮೇಶ', 'ಜಗಧೀಶ', ಈಶನೆ ಮುಂತಾದ ಹೆಸರುಗಳಿಂದ ಸೃಷ್ಟಿಸಿ ಕಾವ್ಯ ರಚನೆ ಮಾಡಿ ವರ್ಣಿಸಿದ್ದಾರೆ. ನಮ್ಮಯ ಪುರದೊಳ್ ನೆಮ್ಮದಿಯಿಂದ ಇರಲು ದಯೆ ಪಾಲಿಸು ಪರಮಾತ್ಮ ಎಂದು ದೇವರಿಗೆ ಅಂಗಲಾಚಿ ಬೇಡಿಕೊಳ್ಳುವರು. ಒಂದು ಕಾವ್ಯವನ್ನು ಯಾವ ರೀತಿಯಾಗಿ ಬೇಕಾದರು ವರ್ಣಿತವಾಗಿ ಯುದ್ಧ, ಪ್ರೀತಿ, ಹರಕೆ, ಧ್ಯಾನ ಮುಂತಾದ ರೀತಿಯಾಗಿ ಕಾವ್ಯರಚನೆ ಮಾಡಿದ್ದಾರೆ.

"ನಂಬಿ ನಿಮ್ಮನ್ನು। ಶಂಭು ಶಂಕರದೇವಾ।

ಕಂದು ಕಂದು ಕಂಧರ ಈಶ ಕೈಲಾಸವಾಸ"[೧೫]

ಎಂದು ವರ್ಣಿಸಿದ್ದಾರೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಶ್ರೀನುಂಕೆಮಲೆ ಭೈರವ ಪುರಾಣವನ್ನು ಕಾವ್ಯವಾಗಿ ನೋಡುವಂತಹ ಪರಿ ಹೇಗೆ? ಎಂಬ ಕುತೂಹಲಕರವಾದ ಸಂಗತಿಯಾಗಿದ್ದು ಒಂದು ಕಾವ್ಯವನ್ನು ವರ್ಣಿಸುವಾಗ ಹಲವು ಸಾಹಿತ್ಯಿಕವಾದ ಅಂಶಗಳು ನೆರವಾಗುತ್ತವೆ. ಹಾಗೂ ಕಾವ್ಯ ಕಟ್ಟುವ ದಿನಮಾನಗಳಲ್ಲಿ ನಡೆದ ಘಟನೆಗಳನ್ನು ನೋಡಿ ರಚಿಸುವ ಕಾವ್ಯವೇ ಬೇರೆ. ಅದನ್ನು ಅನುಭವಿಸಿ ಕಾವ್ಯ ರಚನೆಯ ದಾಟಿಯೇ ಬೇರೆ ಈ ಹಿನ್ನೆಲೆಯಲ್ಲಿ ನುಂಕೆಮಲೆ ಪುರಾಣವನ್ನು ಕಾವ್ಯವಾಗಿ ಕಟ್ಟಿಕೊಡುವ ಸಂದರ್ಭದಲ್ಲಿ ದೇವರ ಆಗಮನದ ಸಂದರ್ಭ, ಪ್ರಕೃತಿಯ ಸೃಷ್ಟಿ, ಮಾನವನ ಆರಾಧನೆ, ದೇವರ ಕಲ್ಪನೆ ಮುಂತಾದ ಸಂದರ್ಭಗಳನ್ನು ಬಳಸಿಕೊಂಡು ಕಾವ್ಯವಾಗಿ ನೋಡಿದ್ದೇನೆ.

ಕೊನೆ ಟಿಪ್ಪಣಿಗಳು

೧.ನುಂಕೆಮಲೆ ಸಿದ್ದೇಶ್ವರ ಪುರಾಣ, ಡಾ.ಕೆ.ರವೀಂದ್ರನಾಥ, ಪುಟ-೧೫

೨.ಅದೇ, ಪುಟ-೧೪

೩.ಅದೇ, ಪುಟ-೧೬

೪.ಅದೇ, ಪುಟ-೧೬

೫.ಅದೇ, ಪುಟ-೧೬

೬.ಅದೇ, ಪುಟ-೧೮

೭.ಅದೇ, ಪುಟ-೧೯

೮.ಅದೇ, ಪುಟ-೧೯

೯.ಮೊಳಕಾಲ್ಮೂರು ತಾಲೂಕು ದರ್ಶನ, ಕೆ.ಎನ್.ಭೀಮಾರೆಡ್ಡಿ, ಪುಟ-೩೩

೧೦.ನುಂಕೆಮಲೆ ಸಿದ್ದೇಶ್ವರ ಪುರಾಣ, ಡಾ.ಕೆ.ರವೀಂದ್ರನಾಥ, ಪುಟ-೧೦

೧೧.ಅದೇ, ಪುಟ-೧೦೦

೧೨.ಅದೇ, ಪುಟ-೧೧೫

೧೩.ಅದೇ, ಪುಟ-೭೯

೧೪.ಅದೇ, ಪುಟ-೧೭

೧೫.ಅದೇ, ಪುಟ-೧೭

ಅಧ್ಯಾಯ-೪

ನುಂಕೆಮಲೆ ಸಿದ್ದೇಶ್ವರ ಪುರಾಣ: ಸಾಂಸ್ಕೃತಿಕ ಅನನ್ಯತೆಗಳು

೪.೧ ಆಚರಣೆಗಳು

೧. ಕಂಕಣ ಕಟ್ಟುವುದು
೨. ರಥೋತ್ಸವ
೩. ಸಿಡಿಯಾಡುವುದು
೪. ಸಿದ್ಧಿಭುಕ್ತಿ

೪.೨ ಚಾರಿತ್ರಿ ಅಂಶಗಳು

೧. ಹೊಂಡ
೨. ರಸದೋಣಿ
೩. ಮೂಗುಬಸಪ್ಪ
೪. ಕುದುರೆ ಹೆಜ್ಜೆ
೫. ಕರ್ಪೂರದಮ್ಮ

೪.೩ ಧಾರ್ಮಿಕ ಅಂಶಗಳು

೧. ಸಿದ್ಧೇಶ್ವರ ಆರಾಧನೆ
೨. ಭೈರವಾರಾಧನೆ
೩. ಸಮುದಾಯ ಆರಾಧನೆ

ಅಧ್ಯಾಯ – ೪

ನುಂಕೆಮಲೆ ಸಿದ್ಧೇಶ್ವರ ಪುರಾಣ : ಸಾಂಸ್ಕೃತಿಕ ಅನನ್ಯತೆಗಳು

ನುಂಕೆಮಲೆಯ ಸಂಸ್ಕೃತಿಯು ಹಲವಾರು ವರ್ಷಗಳ ಹಿಂದಿನಿಂದಲೂ ಬೆಳೆದು ಬಂದ ಸಂಸ್ಕೃತಿಯಾಗಿದೆ. ನಮಗೆ ಸಿಕ್ಕಿರುವ ಆಕರಗಳು ಮತ್ತು ಸ್ಥಳಿಯ ಮಾಹಿತಿಯ ಪ್ರಕಾರ ನುಂಕೆಮಲೆಯ ಸಿರಿಯ ಸಂಸ್ಕೃತಿಯು ಕದಂಬರ ಕಾಲದಲ್ಲಿ ಆಳ್ವಿಕೆ ಮಾಡಿದ ಅಜವರ್ಮನಿಂದ ಹಿಡಿದು ಬೆಂಚರಸದೇವ ಕಾಲದವರೆಗೂ ಬೆಳೆದು ಬಂದಿದೆ ಆ ಕಾಲದಲ್ಲಿ ಆಳ್ವಿಕೆ ಮಾಡಿದ ರಾಜರುಗಳಿಂದ ದಾನದತ್ತಿಯನ್ನು ಕೊಟ್ಟು ದೇವಾಲಯಗಳ ಅಭಿವೃದ್ಧಿ ಮತ್ತು ಸಂಸ್ಕೃತಿಯನ್ನು ಆಚರಣೆ ತಂದು ಕದಂಬರ ಭಕ್ತಿ ತೋರಿಸಿದ್ದಾರೆ. ನುಂಕೆಮಲೆಯಲ್ಲಿ ಸಂಸ್ಕೃತಿ ಇತಿಹಾಸ ಸುಮಾರು ವರ್ಷಗಳ ಹಿಂದೆ ಆಚರಣೆಯಲ್ಲಿತ್ತು. ಎಂಬುದು ಅಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯುತ್ತದೆ. ನುಂಕೆಮಲೆಯ ಸುತ್ತ – ಮುತ್ತಲಿನ ಸುಮಾರು ೩೩ ಹಳ್ಳಿಯವರು ಈ ಜಾತ್ರೆಯಲ್ಲಿ ಪಾಲ್ಗೊಂಡು ಜಾತ್ರೆಯನ್ನು ಮಾಡುತ್ತಾರೆ. ಇಲ್ಲಿರುವ ದೇವಾಲಯಗಳಿಗೆ ಲಿಂಗಾಯತ ಸಮುದಾಯದ ಜನಾಂಗದವರನ್ನು ಪೂಜಾರಿಕೆ ಮಾಡಲು ನೇಮಿಸುತ್ತಾರೆ. ಹಾಗೂ (ಪರದೇಶಿಗಳು) ಬಾವಾಜಿಗಳು ಈ ದೇವಾಲಯದ ಉಸ್ತುವಾರಿ ನೋಡಿಕೊಳ್ಳುತ್ತಾರೆ. ಇಂತಹ ಆಚರಣೆಗಳು ಯಾವುವು ? ಎಂಬುವುದನ್ನು ನೋಡುವುದಾದರೆ

ಆಚರಣೆಗಳು

- ಕಂಕಣ ಕಟ್ಟುವುದು
- ರಥೋತ್ಸವ
- ಸಿಡಿಯಾಡುವುದು
- ಸಿದ್ಧಿ ಭುಕ್ತಿ

೧.ಕಂಕಣ ಕಟ್ಟುವುದು

ನುಂಕೆಮಲೆ ಜಾತ್ರೆಯನ್ನು ಸಾಮಾನ್ಯವಾಗಿ ಪ್ರತಿ ವರ್ಷವು ಮೇ ತಿಂಗಳ ಏಕಾದಶಿ ದಿನದಂದು ನಡೆಯುತ್ತದೆ. ಈ ಜಾತ್ರೆಯು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಇನ್ನು

೧೫ ದಿನಗಳ ಬಾಕಿ ಇರುವಂತೆಯೇ ಕಾಲಭೈರವ ಸ್ವಾಮಿಗೆ, ಹರಳಯ್ಯಸ್ವಾಮಿಗೆ, ಕರ್ಪೂರದಮ್ಮನಿಗೆ, ಮಲ್ಲಿಕಾರ್ಜುನ ದೇವರಿಗೆ, ಸುತ್ತಮುತ್ತಲಿನ ಮೂವತ್ತು ಮೂರು ಹಳ್ಳಿಯವರು ಸೇರಿ ಒಟ್ಟು ೨೧ ಕಂಕಣಗಳನ್ನು ತಯಾರಿಸಿ ಎಲ್ಲ ದೇವರಿಗೆ ಕಟ್ಟುತ್ತಾರೆ. ನಂತರದಲ್ಲಿ ಹಂಪಿಯ ವಿರೂಪಾಕ್ಷ ಹುಣ್ಣಿಮೆಯ ನಂತರ ಬರುವ ಅಮವಾಸ್ಯೆ ದಿನ ಮೂವತ್ತು ಮೂರು ಹಳ್ಳಿಗೆ ಒಳಪಟ್ಟ ಎಲ್ಲರೂ ಭಾಗವಹಿಸಿ ದೇವರಿಗೆ ಕಟ್ಟುವರು. ಮೊದಲಿಗೆ ಕೊಮ್ಮನಪಟ್ಟಿ, ಹಾನಗಲ್, ಕೆಳಗಳಹಟ್ಟಿ, ನಾಗಸಮುದ್ರ, ಪೂಜರಿಹಟ್ಟಿ ಹಲವು ಊರಿನವರು ಸೇರಿ ದೇವಾಲಯಗಳ ಮೊದಲು ಹೊಂಡಕ್ಕೆ ಹೋಗಿಬಂದಾಗ ಎಲ್ಲರೂ ಒಂದು ಕಡೆ ಸೇರಿ ಲಿಂಗಾಯಿತ ಅರ್ಚಕರು ಪೂಜೆಯನ್ನು ಮಾಡುತ್ತಾರೆ. ರಾತ್ರಿ ಎಂಟು ಗಂಟೆಗೆ ಸರಿಯಾಗಿ ಊರಿನ ಎಲ್ಲ ಗ್ರಾಮಸ್ಥರು ಸೇರಿ ೨೧ ಕಂಕಣಗಳನ್ನು ರಥಕ್ಕೆ, ಸಿಡಿಮರಕ್ಕೆ, ಬಾವಾಜಿ ಹಾಗೂ ಸಿಡಿ ಆಡುವ ಮಧುಮಗನಿಗೂ ಕಂಕಣವನ್ನು ಕಟ್ಟುತ್ತಾರೆ. ನಂತರದಲ್ಲಿ ಅಲ್ಲಿ ನೆರೆದಿರುವ ಎಲ್ಲಾ ಹಿರಿಯ, ಕಿರಿಯ, ಎಂಬ ಭೇದ ಭಾವ ಮಾಡದೇ ಕಟ್ಟುತ್ತಾರೆ. ಈ ಕಂಕಣಗಳನ್ನು ಕಟ್ಟಿದ ೯ನೇ ದಿನಗಳಲ್ಲಿ ಜಾತ್ರೆಯು ಆರಂಭವಾಗುತ್ತದೆ. ಇಂತಹ ಐತಿಹಾಸಿಕತೆ ಹೊಂದಿರುವ ಜಾತ್ರೆಗೆ ನಾನ ಜೋಡಿಗಳು ಬಂದು ಸಂತೋಷದಿಂದ ಜಾತ್ರೆ ಮಾಡುವರು.

೨. ರಥೋತ್ಸವ

ಭಾರತ ದೇಶದಲ್ಲಿ ಅದರಲ್ಲೂ ಕರ್ನಾಟಕದಂತಹ ಸಂಪ್ರದಾಯದ ತವರಿನಲ್ಲಿ ಇಂತ ಕಾರ್ಯಕ್ರಮಗಳು, ಆಚರಣೆಗಳು ನಡೆಯುವುದು ತುಂಬಾ ಶ್ಲಾಘನೀಯ ಇಂತ ಐತಿಹಾಸಿಕತೆ ಹೊಂದಿರುವ ಹಾಗೂ ಪವಾಡ ಪುರುಷನಾದ ಶ್ರೀ ಭೈರವ ರಥೋತ್ಸವವೂ ಒಂದು ಉತ್ತಮವಾದ ಬೆಳವಣಿಗೆಯಾಗಿದೆ. ಇಂತಹ ಒಂದು ಮೌಲ್ಯಯುತವಾದ ರಾಷ್ಟ್ರೀಯ ಭಾವೈಕ್ಯತೆಯನ್ನು ಬಿಂಬಿಸುವಂತಹ ಜಾತ್ರೆ ಎಂದರೆ ನುಂಕೆಮಲೆ ಭೈರವ ರಥೋತ್ಸವವಾಗಿದೆ. ಈ ಜಾತ್ರೆಯನ್ನು ಪ್ರಾರಂಭ ಮಾಡಿದ ಮೊದಲ ದಿನದೊಂದು ಆಚರಿಸುತ್ತಾರೆ. ಇಂತಹ ಆಚರಣೆಯ ರಥವನ್ನು ' ನುಂಕಪ್ಪನ ರಥ' ಅಥವಾ 'ಲುಂಕೇಶ್ವರ ರಥವೆಂದು' ಕರೆಯುತ್ತಾರೆ. ಏಕಾದಶಿ ದಿನದೊಂದು ಸಂಜೆಯ ಹೊತ್ತಿಗೆ ರಥವನ್ನು ಅಲಂಕಾರ ಮಾಡಿ ಸಿಂಗರಿಸಿ ನಿಲ್ಲಿಸುತ್ತಾರೆ.

"ಮೊದಲು ವಾಲ್ಮೀಕಿ ಜನಾಂಗದವರು ತೇರಿಗೆ ನೀರು ಹಾಕಿ ತೊಳೆಯುತ್ತಾರೆ. ನಂತರದಲ್ಲಿ ನುಂಕಪ್ಪ ದೇವರಿಗೆ ಪೂಜೆ ಮಾಡಿಕೊಂಡು ಒಂದಾದ ಮೇಲೆ ಗಾಣೆ

ಪೂಜೆಯನ್ನು ಹೊಂಡದಲ್ಲಿ ಮಾಡಿಕೊಂಡು ಬಂದು ಅಗ್ರದೋಕವನ್ನು ತರಲು ಹೋಗುತ್ತಾರೆ. ನಂತರದಲ್ಲಿ ರಥಕ್ಕೆ ಔಡಲೆ ಎಣ್ಣೆಯನ್ನು ಹಾಕುವುದು ಸಂಪ್ರದಾಯ ಮುಡಿಪು ಕಟ್ಟಿಕೊಂಡವರೆಲ್ಲಾ ಈ ಸಂದರ್ಭದಲ್ಲಿ ಹರಿಜನರ ಕೈಗೆ ಹರಿಕೆ ಹೊತ್ತುಕೊಂಡ ತಂದ ಎಣ್ಣೆಯನ್ನು ಕೊಟ್ಟು ತಮ್ಮ ಹರಿಕೆ ತೀರಿಸಿಕೊಳ್ಳುತ್ತಾರೆ. ಆಗ ಬಡಿಗೆಯವರು ಪೂಜೆ ಮಾಡಿ ನಂತರ ಜನರೆಲ್ಲರೂ ರಥಕ್ಕೆ ತೆಂಗಿನಕಾಯಿ ಹಾಗೂ ಬಾಳೆಹಣ್ಣು ಜೊತೆಗೆ ಹೂಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಇದಕ್ಕೆ ಇಟ್ಟ ದಕ್ಷಿಣೆಯನ್ನು ಬಡಿಗೆಯವರು ತೆಗೆದುಕೊಳ್ಳುತ್ತಾರೆ. ಈ ರಥಕ್ಕೆ ಎರಡು ಹಗ್ಗದ ಮಣಿಗಳನ್ನು ಕಟ್ಟುತ್ತಾರೆ. ತರುವಾಯ ಶ್ರೀ ನುಂಕೇಶ್ವರ ದೇವಾಲಯದಿಂದ ಬಣ್ಣದ ಕುದುರೆಯನ್ನು ಹೊರಡಿಸುವರು. ಈ ಕುದುರೆ ನುಂಕಪ್ಪನು ಮಾಯಲೋಕದಿಂದ ಬಂದಿದ್ದಾರೆ ಎಂಬ ನಂಬಿಕೆಯಿದೆ. ಹೊತ್ತು ಕುದುರೆಯೊಂದಿಗೆ ವಕ್ರ ವಕ್ರವಾಗಿ ಕುಣಿಸುತ್ತಾ ದೊಡ್ಡ ಹೊಂಡಾದವರೆಗೆ ಹೋಗಿ ಮತ್ತೆ ರಥವನ್ನು ನಡೆಸುವರು. ಶ್ರೀ ಗುರುದೇವನ ಪ್ರತಿನಿಧಿಗಳಾದ ಬಾವಾಜಿ (ಪರದೇಶಿ)ಯವರು ಆಲಯದಿಂದ ತ್ರಿಶೂಲವನ್ನು ಹಿಡಿದುಕೊಂಡು ಮುನ್ನಡೆಯುತ್ತಾರೆ. ಆಗ ಶಿಷ್ಯರು ಮತ್ತು ಭಕ್ತ ಸಮೂಹವು ಶ್ರೀ ಪರಮೇಶ್ವರನ ವಾಕ್ಯ ಘೋಷಣೆಗಳನ್ನು ಕೂಗುತ್ತಾ ಬಿರುದಾವಳಿಗಳೊಡನೆ ಹೊರಟು ಹರಳಯ್ಯ ಜನಾಂಗದವರು ಕಿರುಮದ್ದಾಳೆಯನ್ನು ಬಾರಿಸುತ್ತಾ ಮುಂದೆ ನಡೆಯುತ್ತಿರಲು ಭೋರ್ಗರವ ತಾಳ ಮೇಳಗಳೊಂದಿಗೆ ಪಥಕ (ಜೀವಾತ್ಮ)ನಾದ ನುಂಕಪ್ಪನ ದೇವಾಲಯಕ್ಕೆ ಹೋಗಿ ಅಲ್ಲಿಂದ ಆವ ದೇವರ ಉತ್ಸವ ಮೂರ್ತಿಯನ್ನು ಹೊರಡಿಸಿಕೊಂಡು ಬರುವವರು ನುಂಕಪ್ಪನ ಆಸ್ಥಾನದಲ್ಲಿರುವ ಉತ್ಸವ ವಿಗ್ರಹವನ್ನು ತಂದು ರಥದಲ್ಲಿ ಕೂರಿಸುವರು. ಶಿಷ್ಯರು, ಭಕ್ತಾಧಿಗಳು ಹಾಗೂ ಜನಸಮುದಾಯವೂ ಅದರ ಜೊತೆಗೆ ಮನೆ ಮಠಗಳಿಂದ ಯಾವ ಅಪಾಯವು ಉಂಟಾಗದಿರಲಿ ಎಂದು ಬೇಡಿಕೊಳ್ಳುತ್ತಿರುವುದನ್ನು ಕಾಣಬಹುದು. ರಥವು ಮುಂದೆ ನಡೆಯುತ್ತಿರುವ ಸಂದರ್ಭದಲ್ಲಿ ಹಿಂದೆ ಭೈರವನಾಥನಿಗೆ "ಜಯ ಶ್ರೀಪಾರ್ವತೀಪತಿಹರಹರ ಮಹಾದೇವು ಶಂಭೋ ಶಂಕರ" ಎಂಬ ಮಹಾರಾಜರ ಘೋಷಣೆಯನ್ನು ಕೂಗುತ್ತಾ ಭಕ್ತರು ರಥವನ್ನು ಎಳೆಯುತ್ತಾರೆ. ಬಾವಾಜಿಯವರಿಗೆ ಹಾರವನ್ನು ಹಾಕಿ ಮೆರೆಯುತ್ತಾರೆ. ತಪ್ಪಡೆ, ಉರುಮೆ, ಕಂಸಾಳೆ, ತಾಳ, ಇತ್ಯಾದಿ ವಾದ್ಯಗಳ ಮೂಲಕ ಕುದುರೆಯನ್ನು ಕುಣಿಸುತ್ತಾ ಮತ್ತು ಎರಡು ನಂದಿಕೋಲು ಹೆಜ್ಜೆಯನ್ನು ಹಾಕುತ್ತಾ ರಥವನ್ನು ಮಲ್ಲಿಕಾರ್ಜುನ ದೇವಾಲಯದ ಕಡೆಗೆ ಎಳೆಯುತ್ತಾರೆ. ಈ ರಥಕ್ಕೆ ಬಾವುಟಗಳಿಂದ ಬಣ್ಣ ಬಣ್ಣದ ಚಕ್ರಗಳಿಂದ ರಥದ ಮೇಲೆ 'ಕಳಸವನ್ನು' ಇಟ್ಟು ರಥವನ್ನು ಎಳೆಯುತ್ತಾರೆ.

೩. ಸಿಡಿಯಾಡುವುದು

"ಸಿಡಿಯು ಮೊದಲು ಧಾರ್ಮಿಕ ಹಿನ್ನಲೆಯಲ್ಲಿ ವ್ಯಕ್ತಿ ತನ್ನ ಮೇಲೆ ಕೋಪಿಸಿಕೊಂಡು ದೇವರನ್ನು ಸಂತೃಪ್ತಿಪಡಿಸುವುದಕ್ಕೆ ನೆರವೇರಿಸುತ್ತಿದ್ದ ಒಂದು ಆಚರಣೆ". 'ಸಿಡಿ ಎಂದರೆ ದೇವರಿಗೆ ಅಥವಾ ದೇವತೆಗೆ ಮಾಡುವ ಒಂದು ಸೇವೆಯೆಂದು ತಿಳಿದು ಬರುತ್ತದೆ ಸಿಡಿ ಎಂದರೆ ಏಣಿ" ಸಿಡಿ ಎಂದರೆ ಒಂದು ನಿದಿರ್ಷ್ಟವಾದುದ್ದು ಅಥವಾ ನಿಖರವಾದುದ್ದು ಎಂದು ಹೇಳುವುದು ತುಂಬಾ ಕಷ್ಟ ಒಬ್ಬಬ್ಬರೇ ಒಂದೊಂದು ಅರ್ಥವನ್ನು ನೀಡುವರು. ಹಾಗೂ ನಿಘಂಟುಗಳು ನೀಡಿರುವ ಅರ್ಥ ಈ ರೀತಿಯಾಗಿವೆ.

೧.ಗ್ರಾಮದೇವತೆಗೆ ಸಲ್ಲಿಸುವ ಒಂದು ಬಗೆಯ ಉಗ್ರಸೇವೆ

೨.ಹಳ್ಳಿಗರು ದೇವರ ಉಪಾಸನೆ ಮಾಡುವಾಗ ಸಲ್ಲಿಸುವ ಒಂದು ಹಿಂಸಾಮಯ ವ್ರತ

೩.ಬಿಮ್ಮ, ನಗೆ, ಚೆಲ್ಲಾಪಿಲ್ಲಿಯಾಗು, ಒಡೆ, ಸ್ಫೋಟಗೊಳ್ಳು, ಕೆರಳು, ಸಿಟ್ಟುಗೇಳು, ಕಬ್ಬಿಣದ ಕೊಕ್ಕೆ ಮುತಾಂದವು.

ಈ ರೀತಿಯಾಗಿ ಹಲವು ಅರ್ಥವನ್ನು ನೀಡುವ ಸಿಡಿಯನ್ನು ನುಂಕೆಮಲೆ ಸಿದ್ದೇಶ್ವರ ಬೆಟ್ಟದಲ್ಲಿ ತುಪ್ಪದಮ್ಮನ ಸಿಡಿ ಅಥವಾ ಕರ್ಪೂರದಮ್ಮನ ಸಿಡಿ ಎಂತಲೂ ಕರೆಯುತ್ತಾರೆ. ಈ ಸಿಡಿಯನ್ನು ಆಡುವವನು ಕಂಕಣ ಕಟ್ಟಿದ ವೈಶಾಖ ಶುದ್ಧ ಪಂಚಮಿಯ ಮೂರನೆಯ ದಿನದಂದು ೫ ದಿನಗಳ ಕಾಲ ಊಟವಿಲ್ಲದೆ, ಕೇವಲ ಹಾಲು, ಫಲಹಾರ, ನೀರನ್ನು ಸೇವಿಸುತ್ತಾ ಕೊನೆಗೆ ಆರನೆಯ ಏಕಾದಶಿ ದಿನದಂದು ಸಿಡಿಯಾಡುವನು. ಸಿಡಿಯಾಡುವ ಮಧುಮಗನಿಗೆ ಸಿಡಿಗೆ ಯಾವ ರೀತಿಯಾಗಿ ಕಟ್ಟುತ್ತಾರೆ ಎಂದರೆ ಅವನ ಮೈಯ ಮೇಲೆ ಅಂದರೆ ಬೆನ್ನಿನ ಮೇಲೆ ಕೊಂಡಿಯನ್ನು ಹಾಕುತ್ತಾರೆ.

ಸಿಡಿಯನ್ನು ತೂಗುವಾಗ ಹಲವಾರು ಬಗೆಗಳಿವೆ.

೧.ತೊಟ್ಟಿಲಸಿಡಿ

೨.ಬೆನ್ನುಸಿಡಿ

೩.ಗೊಂಬೆಸಿಡಿ

ಈ ನುಂಕೆಮಲೆ ಸಿದ್ದೇಶ್ವರನಿಗೆ ಬೆನ್ನು ಸಿಡಿಯನ್ನು ಆಚರಿಸುತ್ತಾರೆ. ಏಕೆಂದರೆ ಸಿಡಿಯಾಡುವ ಸಮಯದಲ್ಲಿ ಮಧುಮಗನಿಗೆ ಅರಿಸಿನವನ್ನು ಹಚ್ಚಿ ಒಂದು ಬಿಳಿ ಪೇಟ ಸುತ್ತಿ ಹಾಗೂ ಬಿಳಿಯ ಪಂಚೆಯನ್ನು ಹುಡಿಸಿ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡಿರುತ್ತಾನೆ. ಇವರಿಗೆ ಮೊದಲಿಂಗ ಅಥವಾ 'ಮಧುಲಿಂಗ' ಎಂದು ಕರೆಯುತ್ತಾರೆ. ಇಂತಹ ಒಂದು ಸಂಸ್ಕೃತವಾದ ಆಚರಣೆಯನ್ನು ಮೊದಲು ನಾಗಸಮುದ್ರ ಎಂಬ ಗ್ರಾಮದವರು ಸಿಡಿಯನ್ನು ಆಡುತ್ತಿದ್ದರು. ನಂತರದಲ್ಲಿ ಇಂದು ಕೊಮ್ಮನಹಟ್ಟಿಯ ಮಾರಣ್ಣ ಎಂಬುವರು ಆಡುತ್ತಿದ್ದಾರೆ. ಹೀಗೆ ಅಲಂಕಾರ ಮಾಡಿಕೊಂಡು ಶ್ರೀಭೈರವ ದ್ವಾರದ ಬಳಿ ಗುರುವಿನ ಅನುಗ್ರಹಕ್ಕಾಗಿ ದೇವಾಲಯದ ಮುಂದೆ ಎರಡು ಧ್ವಜಗಳು ಇರುತ್ತವೆ. ನಂತರದಲ್ಲಿ ಶಿಷ್ಯರು ಆ ಮಧುಮಗನನ್ನು ತುಪ್ಪದಮ್ಮನ ಗುಡಿಯ ಬಳಿ ಬಿಡದೆ ಅವರನ್ನು ಕರೆತರುತ್ತಾರೆ. ಏಕೆಂದರೆ ಅವರ ಮಧ್ಯೆ ಒಂದು ದೊಡ್ಡ ಕಥೆಯೇ ಇದೆ.

ನುಂಕಮಲೆಯಲ್ಲಿ 'ಅಂಗದೈತ್ಯ', 'ನೀವವರುಣ' ಎಂಬ ರಾಕ್ಷಸರನ್ನು ಸಂಹಾರ ಮಾಡಿ ಮುಂದೆ ಹೋಗಲು ಆರಂಭಿಸಿದಾಗ ಭೈರವ ಮುಂದೆ ಹೋದರೆ ಏನಾದರೂ ಅನಾಹುತ ಆಗಬಹುದು ಎಂದು ಭಯದಿಂದ ಒಂದು ಬಂಡೆಯ ಮೇಲೆ ಸ್ನಾನ ಮಾಡುತ್ತಾಳಂತೆ. ಅಕ್ಕ ಸ್ನಾನ ಮಾಡುವುದನ್ನು ನೋಡಲಾರದೆ ಭೈರವ ಹಿಂದಕ್ಕೆ ಹೋಗುತ್ತಾನೆ. ಆಗ ತುಪ್ಪದಮ್ಮ ಹೀಗೆ ಹೇಳುವಳು.

"ಮಾನ್ಯ ತಮ್ಮನೆ ನಿಲ್ಲು। ಜ್ಞಾನ ಸಂಪನ್ನ

ಸ್ನಾನವ ಮಾಡುವೆ। ನೀನು ಹಿಂತಿರುಗು

ಮುಂದಕ್ಕೆ ಬರಬೇಡ। ಹಿಂದಕ್ಕೆ ಹೋಗು

ಸಂದೇಹಗೊಳ್ಳದೆ ಮುಂದಲ್ಲಿ ನಿಲ್ಲು

ಇತ್ತ ಕಡೆ ಬರಬೇಡ ಅತ್ತಕಡೆ ಹೋಗು

ಇತ್ತೇನು ಅಣತಿಯ ಚಿತ್ತದೋಳ್ ನಿಲಿಸು"

ಆದ್ದರಿಂದ ಸಿಡಿಯಾಡುವವನು ಇಂದಿಗೂ ತುಪ್ಪದಮ್ಮನ ಕಡೆ ಹೋಗುವುದಿಲ್ಲ ಅಲ್ಲಿಂದ ಹಿಂತಿರುಗಿ ಬೃಹತ್ ಆಲದ ಮರದ ಕೆಳಗೆ ಕುಳಿತುಕೊಳ್ಳುವನು. ಸಿಡಿಯಾಡುವ

ದಿವಸ ಸಮಯ ೪:೩೦ ಅಥವಾ ೫ ಗಂಟೆಗೆ ಸರಿಯಾಗಿ ಅವನ ಬೆನ್ನಗೆ ಬಾಳೆಹಣ್ಣಿನಿಂದ ಹದಮಾಡಿ ಹದಮಾಡಿ ಕೊಂಡಿಯನ್ನು ಹಾಕುವರು ಹಾಗೂ ಅವನ ಕಿವಿಯಲ್ಲಿ ಹರಳಯ್ಯನ ವಂಶಸ್ಥರು ಕೊಂಡಿಯನ್ನು ಹಾಕುವಾಗ ಮಂತ್ರ ಜಪಿಸಿ ಕೊಂಡಿ ಹಾಕುವರು. ಹೀಗೆ ಮೊದಲ ಬಾರಿಗೆ ಕುಂಕುಮ ಮತ್ತು ಆಲದ ಮರದ ಕೊಂಬೆ ಕಡಿಯುತ್ತ ಜನರ ಮೇಲೆ ಎರಚುವುದು ನಂತರದಲ್ಲಿ ಎರಡನೇ ಬಾರಿ ಆಲದ ಮರದ ಕೊಂಬೆ ಕತ್ತರಿಸುವುದು ಮೂರನೆಯ ಬಾರಿ ಕುಂಕುಮ ಬಿಲ್ವೆ ಪತ್ರೆಯನ್ನು ಬಂದಿರುವ ಜನರ ಮೇಲೆ ಎರಚುವುದು ಹೀಗೆ ಮೂರು ಮೂರರಂತೆ ೯ ಸಾರಿ ತಿರುಗುವುದು ನಂತರ ನೆರೆದಿರುವ ಜನರು ಸಿಡಿ ಕಂಬದ ಮೇಲೆ ಇರುವ ಹೂ ಹಾರವನ್ನು ಮನೆಗೆ ಕೊಂಡೊಯ್ಯುವರು ಮನೆಯ ಹೊಸಿಲಿಗೆ ಕಟ್ಟಿಕೊಳ್ಳುವರು. ವಿಶೇಷವೆಂದರೆ ಹೆಂಡತಿ ಸತ್ತವರು ಸಿಡಿಮರ ಆಡುವಂತಿಲ್ಲ.

೪.ಸಿದ್ಧಿಭುಕ್ತಿ

ನುಂಕೆಮಲೆ ಜಾತ್ರೆಯ ಉತ್ಸವ ಮತ್ತು ಆಚರಣೆಗಳು ನಡೆದ ನಂತರ ಮೂರನೇ ದಿನಕ್ಕೆ ಸಿದ್ಧಿಭುಕ್ತಿಯನ್ನು ಆಚರಿಸುತ್ತಾರೆ. "ನಾಥರು ದೈವಕ್ಕೂ ಗುರುವಿಗೂ ಸಮರ್ಪಿಸುವ ಎಡೆಗಳನ್ನು ಪೂಜೆ ಹಾಗೂ ಸಿದ್ಧಿಭುಕ್ತಿಗಳು ಮುಖ್ಯವಾದವುಗಳು. ಇವು ಆಹಾರ ರೂಪಿ ಆಚರಣೆಗಳು ನಾಥಪಂಥದ ಮಠಗಳು ಇರುವ ಭಂಡಾರಗಳಲ್ಲಿ ಅದಕ್ಕಾಗಿ ನೇಮಕಗೊಂಡ ಭಂಡಾರವೇ ಸಿದ್ಧಪಡಿಸುತ್ತಾರೆ." ಹಾಗಾದರೆ ಅದನ್ನು ತಯಾರಿಸುವ ವಿಧಾನವೆಂದರೆ "ಗೋಧಿಹಿಟ್ಟು, ತುಪ್ಪ, ಗೋಡಂಬಿ, ಒಣದ್ರಾಕ್ಷಿ, ಬೆಲ್ಲ, ಯಾಲಕ್ಕಿ, ಹಾಲು ಸೊಪ್ಪಿನ ಕಾಳುಗಳನ್ನು ಬಳಸಿ ಇತ್ಯಾದಿಗಳನ್ನು ಹಾಕಿ ತಯಾರಿಸುತ್ತಾರೆ." ಹೀಗೆ ತಯಾರಿಸಿದ ರೊಟ್ಟಿಯನ್ನು ದುನಿಯ ಕೆಂಡದ ಅಡಿಯಲ್ಲಿಟ್ಟು ಬೇಯಿಸುತ್ತಾರೆ. ನಾಥ ಪಂಥದವರು ತಮ್ಮ ಚಾರಣ ಕಾಲದಲ್ಲಿ ಜೋಳಿಗೆಯಲ್ಲಿ ಇರಿಸಿಕೊಂಡು ಹಸಿನಾದ ತಿಂದು ನೀರನ್ನು ಕುಡಿಯುತ್ತಾರೆ. ಹಾಗೂ ಅದರ ಒಂದು ದೊಡ್ಡ ಸಂಪ್ರದಾಯವೆಂದರೆ ಭೈರವನಿಗೆ ಪ್ರಸಾದವಾಗಿ ಇಟ್ಟು ಪ್ರದರ್ಶನಕ್ಕೆ ಬಂದ ಭಕ್ತಾದಿಗಳಿಗೆ ಈ ರೊಟ್ಟಿಯನ್ನು ಪುಡಿ ಮಾಡಿ ಹಂಚುತ್ತಾರೆ. ಇದು ಸೂಪಿದರ್ಗ ಆಚರಣೆ ಇರುವ ಮೂಲದಿಯ ರೋಟು ರೂಪ ಎಲ್ಲ ಗುರು ಪಂಥಗಳ ಗದ್ದುಗೆ ಪೂಜೆಗೆಂದು ಇಟ್ಟು ಅವರು ಸಂಬಾಳಿಸುತ್ತಾರೆ. ಪೂಜೆಯ ಆಚರಣೆಯಲ್ಲಿದೆ."[೮] ವಿಶೇಷವೆಂದರೆ ರೋಟು ಸಾಧನವಾಗುವುದು ಅದನ್ನು ಖಡ್ಗದಿಂದ ಕತ್ತರಿಸಿದಾಗ ಇದಕ್ಕೆ 'ರೋಟ್‌ಮುಕ್ತ' ಎಂಬ ಹೆಸರು ತ್ರೈಂಬಕೇಶ್ವರದಲ್ಲಿ ಅನುಪಾನ ಶೀಲಾ ಎಂಬ ದೊಡ್ಡ ಬಂಡೆಯ ಮೇಲೆ ನಡೆದ ಆಚರಣೆ. ಪೂಜೆಯಲ್ಲಿ ಖಡ್ಗವನ್ನು ಮತ್ತು ಕೋವಿಗಳ ಬಳಕೆ ಗಮನಾರ್ಹ ಇದು ಬಲಿ ಆಚರಣೆಯಲ್ಲಿ

ಅವಶೇಷ ಕಾಣಬಹುದು. ಸಿದ್ಧಿಭುಕ್ತಿಯ ಮಾತ್ರ ಮಾಂಸ ಭಂಗಿಯ ಮಂದಿರೆಗಳ ಸಮರ್ಪಣೆ ಸಿದ್ಧಿಭುಕ್ತಿಯ ಆಚರಣೆಯನ್ನು ಯಾರು ಆಚರಿಸುತ್ತಾರೆ. ಮತ್ತು ವಿಧಗಳಿವೆ ಎಂಬುದನ್ನು ನೋಡುವುದಾದರೆ

"ಕಪಾಲಿಕರು, ಕಿನ್ನರಿ ಜೋಗಿಗಳು ಹಾಗೂ ಮ್ಯಾಸಬೇಡರು ಸಿದ್ಧಿಭುಕ್ತಿ ಆಚರಣೆಯನ್ನು ನಡೆಸಿಕೊಡುತ್ತಾರೆ. ವಿಶೇಷವೆಂದರೆ ಇಲ್ಲಿ ಲಿಂಗಾಯತ ಭಕ್ತರೂ ಗುಪ್ತವಾಗಿ ಅಥವಾ ಸಾಂಕೇತಿಕವಾಗಿ ಸಿದ್ಧಿಭುಕ್ತಿ ಆಚರಣೆ ನೆರವೇರಿಸುವುದು."[೯]

***ಸಿದ್ಧಿಭುಕ್ತಿ ಎಂದರೇನು?**

"ಒಂದೇ ಬಣ್ಣದ ಪಟ್ಟದ ಕುರಿಯನ್ನು ಪೂಜೆಮಾಡಿ ಕಂಬಳ ತೆರೆದಿಟ್ಟು ಜೋಗಪ್ಪ ಚೂರಿ ಹಾಕುತ್ತಾನೆ. ಜಾತ್ರೆಯ ಕೊನೆಯ ದಿನದಂದು ಮಾಂಸದೂಟ ಇರುತ್ತದೆ. ಮೊದಲು ಭಂಗಿ ಇರುತ್ತದೆ. ಇದನ್ನೇ ಸಿದ್ಧಿಭುಕ್ತಿ ಎಂದು ಕರೆಯುವರು."[೧೦] ಇದರಲ್ಲಿ ಭಾಗವಹಿಸಿದಂತಹ ಯಾವೊಬ್ಬ ಲಿಂಗಾಯತ ಧರ್ಮದವರು ಮಾಂಸವನ್ನು ಸ್ವೀಕರಿಸುವುದಿಲ್ಲ ಅಥವಾ ತಿನ್ನುವುದಿಲ್ಲ ಆದರೆ ಅದಕ್ಕೆ ಬೇಕಾಗುವಂತಹ ಸಾಮಾಗ್ರಿಯನ್ನು ಒದಗಿಸಿಕೊಡುತ್ತಾರೆ.

- **ನುಂಕಮಲೆಯಲ್ಲಿ ಸಿದ್ಧಿಭುಕ್ತಿಯನ್ನು ಮಾಡುವ ಕ್ರಮ**

ನುಂಕೆಮಲೆಯ ಮೂರನೆ ದಿನ ಸುತ್ತಮುತ್ತಲಿನ ಹಳ್ಳಿಯ ಜನರು ಜಾತ್ರೆಗೆ ಬಂದ ಸಿದ್ಧಿಭುಕ್ತಿಯನ್ನು ಆಚರಿಸುತ್ತಾರೆ. ಸಿದ್ಧಿಭುಕ್ತಿಯ ದಿನ ಬೆಳಗಿನ ಜಾವ ನುಂಕಪ್ಪ ಮತ್ತು ತುಪ್ಪದಮ್ಮ ಹಾಗೂ ಸಿದ್ದೇಶ್ವರ ದೇವರುಗಳಿಗೆ ಪೂಜೆ ಮಾಡಿ ಇನ್ನು ಇರುವಂತಹ ದೇವಾಲಯಗಳಿಗೆ ಪೂಜೆ ಮಾಡಿ ನಂತರ ಬೆಳಗಿನಿಂದಲೆ ಪಲ್ಲಕ್ಕಿ ಮೇಲೆ ಕೂರಿಸಿ ಮೆರವಣಿಗೆ ಮಾಡುವರು. ಮನೆಯಲ್ಲಿ ನೆಲ, ಹಾಗೂ ಭಾತರೀಯೆಂಬ ಸಂಪ್ರದಾಯದಂತೆ ಅಂದಿನ ದಿನ ಸಗಣಿಯನ್ನು ಸಾರಿಸಿ ಗದ್ದಿಗೆಯ ಸಂಕೇತವಾದ ಕರಿ ಕಂಬಳಿಯ ಮೇಲೆ ಹೊಸದಾದಂತಹ ಉಡುಪುಗಳನ್ನು ಹಾಸಿ ಅದರ ಮೇಲೆ ಅಕ್ಕಿ ಹರಡಿ ಅದರ ಮೇಲೆ ಒಂದು ಸೂರೆ ಅಥವಾ ಸಂಪ್ರದಾಯದಂತೆ ಪಂಚಲೋಹದ ಪಾತ್ರೆಯನ್ನು ಹಾಗೂ ತ್ರಿಶೂಲ, ವಿಭೂತಿ, ಗಂಧ ಹಾಗೂ ಗಂಟೆಯಲ್ಲಿ ಇಟ್ಟು ಪೂಜೆ ಮಾಡುತ್ತಾರೆ. ನಂತರ ನುಂಕೆಭೈರವನ ಹೆಸರಿನಲ್ಲಿ ಬಿಟ್ಟಂತಹ ಕುರಿಯನ್ನು ಬಲಿಕೊಡುತ್ತಾರೆ. ನಂತರದಲ್ಲಿ ಬಲಿಕೊಟ್ಟಂತಹ ಪ್ರಾಣಿಯ ಲೀವರ್‌ನ್ನು ಭೈರವ ದೇವರಿಗೆ ಎಡೆಯಾಗಿ ಅಥವಾ ಪ್ರಸಾದವಾಗಿ ಇಡುವಂತದ್ದು ಒಂದು ಅಶ್ಚರ್ಯಕರವಾದ ಪದ್ಧತಿಯಾಗಿದೆ.

- **ನುಂಕೆಮಲೆಯಲ್ಲಿ ಭಂಗಿಸೇವನೆ:**

ಯಾವುದೆ ಗುರು ಬೋಧ ಪದ್ಧತಿಯುಳ್ಳ ಸಿದ್ಧ ಮತ್ತು ಆರೂಢ ಸಂಪ್ರದಾಯಗಳನ್ನು ಭಂಗಿಯಿಲ್ಲದೇ ಕಲ್ಪಿಸಿಕೊಳ್ಳುವುದು ಕಷ್ಟ ಮದ್ಯ ಹಾಗೂ ಭಂಗಿಗಳು ಸಾಧಕರಿಗೆ ಮಾನಸಿಕವಾದಂತಹ ಉನ್ನತ ಅವಸ್ಥೆಯನ್ನು ತಡೆಯಲು ಕೆಲಸ ಮಾಡುತ್ತದೆ.

ನಾಥಪಂಥದವರು ದೀಕ್ಷೆ ನೀಡುವ ಬಗ್ಗೆ

ದೀಕ್ಷೆ ಗುರುಪಂಥಗಳ ಮಹತ್ವದ ಮತ್ತು ಮೊದಲನೆಯ ಆಚರಣೆ ನಾಥ ದೀಕ್ಷೆಯನ್ನು ಕಾಪಾಲಿಕೆ ದೀಕ್ಷೆ, ಜೋಗಿ ದೀಕ್ಷೆ ಎಂದು ಕರೆಯುಲಾಗುತ್ತದೆ. ಇದೊಂದು ಹುಟ್ಟು ಶಿಕ್ಷರಾಗುವವರಿಗೆ ಕೂದಲು ಕತ್ತರಿಸಿ ಮೈತೊಳದು ಹೊಸಬಟ್ಟೆ ಹಾಕಿ ದೈಹಿಕ ಹಿಂಸತನ ಕೊಡಲಾಗುತ್ತದೆ.

ಗುರುಶಿಷ್ಯರ ಹಳೆಯ ಹೆಸರು ತೆಗೆದು ಅವನಿಗೆ ಹೊಸ ಹೆಸರನ್ನು ಕೊಡುವುದರ ಮೂಲಕ ಜೀವನ ಕ್ರಮ ಶುರುಮಾಡುತ್ತಾರೆ.

- ನಾಥ ದೀಕ್ಷೆ ೨ ಹಂತದಲ್ಲಿ ನಡೆಯುತ್ತದೆ.
  ೧. ಗೃಹಸ್ಥರಾಗಿದ್ದೇ ನಾಥಾಚರಣೆ ಮಾಡುವವರು ಔಘಡ್ ಎನ್ನುತ್ತಾರೆ ಹುಡುಗರಿಗೆವ ೧೨ ವರ್ಷದಲ್ಲಿ ಮದುವೆಗೆ ಮುಂಚೆ ದೀಕ್ಷೆ ನೀಡುತ್ತಾರೆ. ಆದರೆ ಮಹಿಳೆಯರಿಗೆ ನಾಥ ದೀಕ್ಷೆಯಿಲ್ಲ
  ೨. ಸನ್ಯಾಸಿಯಾಗಿ ನಾಥಚರಣೆ ಮಾಡುವರು:

ಇವರನ್ನು ಮುಖ್ಯವಾಗಿ ಯೋಗಿಗಳು ಎನ್ನುತ್ತಾರೆ. ಔಘಡರಿಗೂ ಮತ್ತು ಯೋಗಿಗಳಿಗೂ ತಾರತಮ್ಯಗಳಿವೆ. ಗುರುಸ್ಥಾನ ಪಡೆಯುವ ಯೋಗಿಗಳು ಚಿಕ್ಕವಯಸ್ಸಿನವರಾದರೂ ಗೃಹಸ್ಥರನ್ನು ಅಧಿಕಾರದಿಂದ ಮಾತಾನಾಡಿಸಬಲ್ಲರು, ಒಬ್ಬರಿಗೆ ಕೇಶಮುಂಡನ ಮಂತ್ರೋಪದೇಶ, ಭಸ್ಮಾಧಾರಣೆ, ಶೈಲಿಧಾರಣೆ, ತನಿಕದ ೪ ಹಂತಗಳು ಸಾಮಾನ್ಯವಾಗಿ ೫ ಹಂತವಾಗಿ ಕಿವಿಭೇದ ಮಾಡಿ ಕುಂಡಲ ಹಾಕಿದರೆ ಆತ ಯೋಗಿ ಆಗುತ್ತಾನೆ. ಔಘಡ್ ದೀಕ್ಷೆ ಕೊಟ್ಟ ನಂತರ ೧೨ ವರ್ಷಕ್ಕೆ ನಂತರ ಯೋಗಿ ದೀಕ್ಷೆ ಕೊಡಬೇಕು ಎಂಬ ನಿಯಮವಿದೆ.

೧.ಚಾರಿತ್ರಿಕ ಅಂಶಗಳು

೨.ಧಾರ್ಮಿಕ ಅಂಶಗಳು

೧.ಚಾರಿತ್ರಿಕ ಅಂಶಗಳು

ಶ್ರೀನುಂಕೆಮಲೆ ಬೆಟ್ಟವು ಐತಿಹಾಸಿಕ ರಮಣಿಯ ತಾಣಗಳಲ್ಲಿ ಒಂದಾಗಿದ್ದು ಅಲ್ಲಿ ಅನೇಕ ಶಾಸನಗಳು, ದೇವಾಲಯಗಳು, ಹಾಗೂ ಹಲವು ಕೆರೆ, ಬಾವಿ, ಮುಂತಾದವು ಚಾರಿತ್ರಿಕವಾಗಿ ಇತಿಹಾಸವನ್ನು ಕಟ್ಟಿಕೊಡುತ್ತವೆ. ಅಂತಹ ಹತ್ತು ಹಲವು ಚಾರಿತ್ರಿಕ ಅಂಶಗಳೆಂದರೆ

೧.ಹೊಂಡಾ

ನುಂಕೆಮಲೆಯಲ್ಲಿ ಕಂಡುಬರುವ ಸ್ಥಳವೆಂದರೆ ಇದು ಕೇಂದ್ರ ಬಿಂದು ಸ್ಥಳವಾಗಿದೆ. ಇದರ ಉದ್ದ ೧೦೧ ಅಡಿ ಆಳವಾಗಿದ್ದು, ೯೪ ಅಡಿ ಅಗಲವಾಗಿದೆ. ಪೂರ್ವದ ಮೆಟ್ಟಿಲಲ್ಲಿ ಹರಿಜನರು, ಗೊರವಯ್ಯರು, ಹರಳಯ್ಯನವರು ಅತೀ ಪ್ರಾಚೀನ ಕಾಲದಿಂದಲೂ ಬರುವರೆಂಬ ವಾಡಿಕೆಯಾಗಿದೆ. ಆದರೆ ಇತ್ತಿಚಿನ ದಿನಮಾನಗಳಲ್ಲಿ ಯಾವುದೇ ಜಾತಿ, ಭೇದ ಭಾವ ಮಾಡದೇ ಸಾಮೂಹಿಕವಾಗಿ ಹೋಗಿ ಕುಡಿಯುವುದಕ್ಕೂ ಹಾಗೂ ಸ್ನಾನಮಾಡುವುದಕ್ಕೂ ಬಳಕೆ ಮಾಡುತ್ತಾರೆ. ಹಾಗೂ ಸಿಡಿಯ ದಿನ ಸಿಡಿಯಾಡುವ ಮಧುಮಗನು ಈ ಹೊಂಡದಲ್ಲಿ ಪೂಜೆಯನ್ನು ಮಾಡುವುದು ಇಂದಿಗೂ ಸಹ ನಡೆದುಕೊಂಡು ಬರುವ ಉತ್ತಮವಾದ ಸಂಪ್ರದಾಯವಾಗಿದೆ. ದುರದೃಷ್ಟಕರ ಸಂಗತಿಯೆಂದರೆ ಮಳೆಯ ಆಭಾವದಿಂದ ಈ ಹೊಂಡದಲ್ಲಿ ಅಲ್ಪ ಸ್ವಲ್ಪ ನೀರು ತುಂಬಿವೆ ಎಂಬುವುದು ಇಂದಿನ ಸಂಗತಿಯಾಗಿದೆ.

೨.ರಸದೋಣಿ

ನುಂಕೆಮಲೆ ಬೆಟ್ಟದಲ್ಲಿ ಕಂಡುಬರುವ ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಏಕೆಂದರೆ ರಸದೋಣಿ ಎಂದು ಕರೆಯಲು ಕಾರಣವೆಂದರೆ ಹಿಂದಿನ ಕಾಲದಲ್ಲಿ ರಸಸಿದ್ಧ ಎಂಬ ರಾಕ್ಷಸರು ಈ ದೋಣಿಯಲ್ಲಿ ವಿಷವನ್ನು ಸಂಗ್ರಹಿಸುತ್ತಾರೆ. ಯಾಕೆಂದರೆ ಇವರಿಗೆ ವಿಷವೇ ಆಹಾರವಾಗಿರುವುದರಿಂದ ಸುಮಾರು ೨ ಅಥವಾ ೮ ಕೊಪ್ಪರಿಗೆಯ ವಿಷವನ್ನು ಸಂಗ್ರಹಿಸುತ್ತಾರೆ. ಈ ವಿಷವನ್ನು ಹೇಗೆ ತಯಾರಿಸುತ್ತಾರೆ ಎಂದರೆ ಬೆಟ್ಟ ಗುಡ್ಡಗಳಲ್ಲಿ ದೊರೆಯುವ ಹಲವಾರು ವಿಷಪೂರಿತ ಗಿಡಮೂಲಿಕೆಗಳಿಂದ ಸಂಗ್ರಹಿಸುತ್ತಾರೆ. ಒಂದು ದಿನ ಭೈರವ ಮತ್ತು ಅಕ್ಕ ಕರ್ಪೂರದಮ್ಮ ನೀರು ಕುಡಿಯಲು ಕೆರೆಗೆ ಬಂದಾಗ ಅಲ್ಲಿ ಚಂಡಿ

ರಕ್ಕಸಿಯ ತಂಗಿಯರಾದ ಮಲಿಯವ್ವ ಹಾಗೂ ನುಂಕವ್ವ ನೀವು ಇಲ್ಲಿ ಇರುವುದು ಒಳ್ಳೆಯದು ಅಲ್ಲ ಮೊದಲು ಎಲ್ಲಿಗಾದರೂ ಹೋಗಿ ಎಂದು ಸಲಹೆ ನೀಡಿದಾಗ ಭೈರವ ನಾನು ಹೋಗಲು ಬಂದಿಲ್ಲ ರಣಚಂಡಿಯ ರುಂಡವನ್ನು ಚೆಂಡಾಡಿ ಅವಳನ್ನು ಸಂಹಾರ ಮಾಡುವವರೆಗೂ ಹೋಗುವುದಿಲ್ಲ ಎಂದಾಗ ಕರ್ಪೂರದಮ್ಮ ತಮ್ಮನಿಗೆ ಸಲಹೆ ನೀಡುವಳು ಅವರು ಸಾಮಾನ್ಯವಾದ ರಾಕ್ಷಸರಲ್ಲ ಅವರ ಬಳಿ ಇರುವ ವಿಷವನ್ನು ಭಿಕ್ಷೆ ಬೇಡಲು ಹೋಗಿ ಮೊದಲು ಖಾಲಿಮಾಡಿದ ನಂತರ ಅವರನ್ನು ಕೊಲ್ಲು ಎಂದಾಗ ಅಕ್ಕನ ಮಾತಿನಂತೆ ನಿಮಗೆ ಮಕ್ಕಳ ಫಲ ನೀಡುವುದಾಗಿ ಹೇಳಿ ವಿಷವನ್ನು ಎಲ್ಲಾವನ್ನು ಭೂಮಿಯ ಬಗೆದು ಇದರ ತುಂಬಿದ ಮೇಲೆ ನೀಡುವೆ ಎಂದಾಗ ಇರುವ ಎಲ್ಲಾ ವಿಷ ಸುರಿಯುವರು ಖಾಲಿ ಆದಾಗ ಅವರನ್ನು ಕೊಲ್ಲುವನು ಆದ್ದರಿಂದ ಈ ಸ್ಥಳಕ್ಕೆ ರಸದೋಣಿ ಎನ್ನುವರು.

೩.ಮೂಗು ಬಸಪ್ಪ

ಪ್ರತಿಯೊಂದು ಆಚರಣೆಯ ಹಿಂದೆ ಒಂದು ಐತಿಹ್ಯ ಅಥವಾ ಚರಿತ್ರೆ ಇರುತ್ತದೆ. ಅದು ಲಿಖಿತವಾಗಿರಬಹುದು, ಮೌಖಿಕವಾಗಿರಬಹುದು ಒಂದು ಇತಿಹಾಸವನ್ನು ಕಟ್ಟಿಕೊಡವುದು. ಜನರು ದನಗಳಿಗೆ ಉಣ್ಣೆಗಳು ಹೆಚ್ಚಾಗಿ ಬಿದ್ದರೆ ಮೂಗು ಬಸಪ್ಪನಿಗೆ ಹೋಳಿಗೆಯ ಹಚ್ಚಡವನ್ನು/ಎಡೆಯಾಗಿ ಹೋರಿಸುವರು. ಹೀಗೆ ದೂಡುವುದರಿಂದ ಆ ಉಣ್ಣೆಗಳು ಹೋಗುತ್ತವೆ. ಎಂಬ ನಂಬಿಕೆಯಿಂದ ಭಕ್ತಿ ಪೂರ್ವಕವಾಗಿ ಇಂತಹ ಆಚರಣೆ ಮಾಡುವರು. ಅಂದಿನಿಂದ ಇಲ್ಲಿವರಿಗೂ, ಅದಕ್ಕೆ ಮೂಗು ಬಸಪ್ಪವೆಂದೇ ಪ್ರಸಿದ್ಧಿ ಪಡೆದಿದೆ. ಇನ್ನೊಂದು ಅರ್ಥದಲ್ಲಿ ನೋಡುವುದಾದರೆ ಈ ಬೆಟ್ಟದಲ್ಲಿ ಬರೀ ಮೃಗವರ್ಗವೇ ಇದ್ದ ಮೂಗ ಕಾಲವನ್ನು ಇದು ಸೂಚಿಸುತ್ತದೆ. ಇಲ್ಲಿ ಮೃಗ ಎಂದರೆ ದನ ಎಂದಾರ್ಥ. ಹೀಗಾಗಿ ಮೂಗು ಬಸಪ್ಪ ಎಂಬ ಹೆಸರು ಬಂದಿರಬಹುದು. ಈ ಬೆಟ್ಟದಲ್ಲಿ ಹಲವಾರು ಕಲ್ಲು ಬಂಡೆಗಳು ಇದ್ದು ಕೆಲವು ಕಲ್ಲುಗಳು ಬಸವನ ತಲೆಯನ್ನು ಹೋಲುತ್ತದೆ.

೪.ಕುದುರೆ ಹೆಜ್ಜೆ

ನುಂಕೆಮಲೆ ಬೆಟ್ಟದಲ್ಲಿ ಕಂಡು ಬರುವ ಮತ್ತೊಂದು ಮನಮೋಹಕವಾದ ಸ್ಥಳವೆಂದರೆ ಕುದುರೆ ಹೆಜ್ಜೆ. ಇಂತಹ ಹೆಜ್ಜೆಗಳನ್ನು ಹೊಂದಿರುವ ಈ ಕರಿಯ ಬಂಡೆಯ ಅರ್ಧಮೈಲಿ ಎತ್ತರವಾಗಿದೆ. ಇದರ ಅರ್ಧ ಭಾಗದವರೆಗೂ ಗಿಡ, ಮರಗಳು ಬೆಳೆದು ನಿಂತಿವೆ. ಈ ಬಂಡೆಯ ಮೇಲೆ ಇರುವ ಕುದುರೆ ಹೆಜ್ಜೆಗಳನ್ನು ಸ್ಥಳಿಯರು ಹಾಗೂ ಪುರಾಣಗಳ ಪ್ರಕಾರ

ನುಂಕೇಶ್ವರ/ಲುಂಕೇಶ್ವರ ಈ ಬೆಟ್ಟದಲ್ಲಿ ಕುದುರೆಯನ್ನು ಏರಿ ರಾಕ್ಷಸರನ್ನು ಸಂಹಾರ ಮಾಡುವಾಗ ಕುದುರೆಗೆ ದಂಗುಪಡಿಸಿದ ಈ ಬಂಡೆಯನ್ನು ಏರಿದಾಗ ಮಧ್ಯೆದಲ್ಲಿ ಕುದುರೆಯ ಲಾಗಮು/ಕಡಿವಾಣ ಹರಿದು ಹೋಗುತ್ತದೆ. ಆಗ ಹತ್ತಿರವಿದ್ದ ಶಿಷ್ಯನಾದ ಹರಳಯ್ಯ ತನ್ನ ಹೆಬ್ಬೆರಳಿನಿಂದ ಮೈಯಲ್ಲಿರುವ ನರಗಳನ್ನು ಕಿತ್ತುಕೊಟ್ಟು ಕುದುರೆಗೆ ಲಾಗಾಮು ಮಾಡಿ ಕೊಟ್ಟನು. ಇದರ ಸಹಾಯದಿಂದ 'ರಕ್ಷಸಿದ್ಧ' ರಾಕ್ಷಸರನ್ನು ಕೊಂದನು. ಇವನ ಸಹಾಯಕ್ಕಾಗಿ ಏನು ವರಬೇಕು ಕೇಳು ಎಂದಾಗ ಸಾರ್ವಜನಿಕವಾಗಿ ಇರುವ ಹೊಂಡಾದಲ್ಲಿ ಎಲ್ಲಾ ಜಾತಿ ಧರ್ಮದವರು ನೀರನ್ನು ಬಳಸಬೇಕು ಎಂದು ಕೇಳಿದನು ಮತ್ತೊಂದು ನಿನ್ನ ದರುಶನ ಇರುವ ಕಡೆಯಲ್ಲಿ ನನಗೆ ಮೊದಲ ಪೂಜೆ ಆಗಬೇಕು ಎಂದು ಬೇಡಿಕೊಂಡನು.

ಕರ್ಪೂರದಮ್ಮನ ಕಿಂಡಿ

ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ 'ಕಿಂಡಿ' ಎಂದರೆ ತಕ್ಷಣ ನೆನಪಾಗೋದು ೧.ಏಳುಸುತ್ತಿನ ಕೋಟೆ ಚಿತ್ರದುರ್ಗದ 'ಒನಕೆ ಓಬವ್ವನ ಕಿಂಡಿ' ೨.ಉಡುಪಿಯ ಶ್ರೀಕೃಷ್ಣ ದೇವಾಲಯದ 'ಕನಕನ ಕಿಂಡಿ' ಇಂತಹ ಪ್ರಸಿದ್ಧ ಐತಿಹಾಸಿಕತೆ ಹೊಂದಿರುವ ಮತ್ತೊಂದು ಕಿಂಡಿ ಎಂದರೆ ಕರ್ಪೂರದಮ್ಮನ ಕಿಂಡಿ ಹಾಗಾದರೆ ಈ ಕಿಂಡಿ ಎಂಬ ಹೆಸರು ಹೇಗೆ ಬಂತು ಎಂಬುವುದನ್ನು ನೋಡುವುದಾದರೆ ತಮ್ಮ ಭೈರವ ರಾಕ್ಷಸರೊಂದಿಗೆ ಯುದ್ಧ ಮಾಡುತ್ತಿರುವಾಗ ತುಪ್ಪದಮ್ಮ ಹೋಗಲು ಎಲ್ಲಿಯೂ ಜಾಗವಿರುವುದಿಲ್ಲ ಚಿಂತಿಸಿ ಪಕ್ಕದಲ್ಲಿರುವ ಗುಂಡುಗಳನ್ನು ಪಕ್ಕಕ್ಕೆ ತಳ್ಳಿದಳು ಆಗ ಒಬ್ಬರು ಹೋಗುವಷ್ಟು ಜಾಗ ಇರುವಾಗ ಆ ಸ್ಥಳಕ್ಕೆ ಕರ್ಪೂರದಮ್ಮನ ಕಿಂಡಿ ಎಂದೇ ನಾಮಕರಣ ಮಾಡಿದ್ದಾರೆ. ಇಂದಿಗೂ ಸಹ ನುಂಕೆಮಲೆ ಬೆಟ್ಟದಲ್ಲಿ ಒಂದು ಸುಂದರವಾಗಿ, ಸೊಗಸಾಗಿ ಕಾಣುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ನಕ್ಷತ್ರ ಚಿಹ್ನೆಯುಳ್ಳ ಸನತ್ಕುಮಾರ ಸ್ವಾಮಿ

ನುಂಕೆಮಲೆಯಲ್ಲಿ ಕಂಡುಬರುವ ಮತ್ತೊಂದು ಚಾರಿತ್ರಿಕ ಸ್ಥಳವೆಂದರೆ ನಕ್ಷತ್ರ ಚಿಹ್ನೆಯುಳ್ಳ ಸನತ್ಕುಮಾರ ಸ್ವಾಮಿ ಈ ಚಿಹ್ನೆಯು ಮಲ್ಲಿಕಾರ್ಜುನ ದೇವಾಲಯ ಮುಂಭಾಗದ ಬಲಗಡೆಯಲ್ಲಿ ಒಂದು ಗುಡಿಯ ಮೇಲೆ ಕೆತ್ತಿರುವ ಚಿತ್ರ ಕಾಣುತ್ತದೆ. ಈ ಗುಂಡಿನ ಮೇಲೆ ನಕ್ಷತ್ರಾಕಾರದ ಚಿಹ್ನೆಯನ್ನು ಕೆತ್ತಿ ೫ ಮೂಲೆಗಳಲ್ಲಿ ಲಿಂಗಗಳ ಚಿತ್ರ ಕಂಡುಬರುತ್ತದೆ. ಇದರ ಪಕ್ಕದಲ್ಲಿ ಸರ್ಪಕೃತಿಯ ಭಾವಾಜಿಗಳು ಕೆಂಡವನ್ನು ಹಿಡಿದು ಚಿಮುಟದಾಕೃತಿಯಿಂದ ಕೆತ್ತಲ್ಪಟ್ಟಿರುವವು. ಈ ನಕ್ಷತ್ರ ಗುರುತು ತನ್ನ ಪರಮೇಶ್ವರ ಮಾನಸ ಪುತ್ರರಲ್ಲಿ ಶ್ರೇಷ್ಠರಾದ

ಸನತ್ಕುಮಾರನನ್ನು ಸೂಚಿಸವುದಷ್ಟೆ ಸುಬ್ರಮಣ್ಯಸ್ವಾಮಿಯೆಂದು, ಕುಮಾರಸ್ವಾಮಿಯೆಂದು, ಆದಿಶೇಷನೆಂದು ಕರೆಯುವರು. ಈ ಕ್ಷೇತ್ರಕ್ಕೆ ಕರೆಯಲ್ಪಟ್ಟ ೩೩ಜನ ಮಾನಸಪುತ್ರರಲ್ಲಿ ಸನತ್ಕುಮಾರರು ಒಬ್ಬರು. ಸನತ್ಕುಮಾರರು ಒಬ್ಬರು ಮಾತ್ರ ಉಳಿದಿರುವರೆಂದು ಕಂಡುಬರುತ್ತದೆ. ಇನ್ನು ಉಳಿದ ಬೇರೆ ಬೇರೆ ಪ್ರದೇಶಗಳಲ್ಲಿ ಕೆಲಸ ಮಾಡಲು ಹೊರಟರೆಂದು ಹಿರಿಯರು ಹೇಳುವರು.

ಆದಿಯಲ್ಲಿ ಬಂದವರ ಪೈಕಿ ಇವರು ಒಬ್ಬರು ಮಾತ್ರ ಉಳಿದ ಕಾರಣ ಆದಿಶೇಷನೆಂಬ ಹೆಸರು ಉಂಟಾಯಿತು ಆದ್ದರಿಂದಲೇ ಈ ನಕ್ಷತ್ರ ಗುರುತಿನ ಪಕ್ಕದಲ್ಲಿರುವ ಪ್ರಾಚೀನ ಕಾಲದಲ್ಲಿ ಇದನ್ನು ಕದಂಬರ ರಾಜರುಗಳು ಸರ್ಪಾಕೃತಿಯಿಂದ ತೋರಿಸಿರುವರು. ಇವರೇ ಲೋಕಗುರುಗಳು ಎಂದು ಹಿರಿಯರು ಹೇಳುತ್ತಾರೆ. ಈ ನಕ್ಷತ್ರ ಚಿಹ್ನೆಯುಳ್ಳ ಚಿತ್ರವನ್ನು ಇಂದಿಗೂ ಸಹ ನೋಡಬಹುದು. ಈ ಚಿತ್ರವನ್ನು ಅಜವರ್ಮ ಮಹಾರಾಜರ ಗುರುಗಳಾದ ಶ್ರೀಗಜೆಯ ಕಪ್ಪಡಿಯವರು ಇದನ್ನೆಲ್ಲ ನಿರ್ಮಿಸಿರಬಹುದು ಎಂದು ಹಿರಿಯರು ಹೇಳುತ್ತಾರೆ.

ಧಾರ್ಮಿಕ ಅಂಶಗಳು

೧.ಸಿದ್ದೇಶ್ವರ ಆರಾಧನೆ

೨.ಭೈರವಾರಾಧನೆ

೩.ಸಮುದಾಯದ ಆರಾಧನೆ

೧.ಸಿದ್ದೇಶ್ವರ ಆರಾಧನೆ

ನುಂಕೆಮಲೆಯ ಸಿದ್ದೇಶ್ವರ ಆರಾಧನೆಯನ್ನು ಎಲ್ಲಾ ಜನರು ಸರ್ವಸಾಮಾನ್ಯವಾಗಿ ಆಚರಿಸುತ್ತಾರೆ. ಹಾಗೂ ಎಲ್ಲ ಜನರು ಪೂಜೆ ಮಾಡುತ್ತಾರೆ. ಹಾಗೂ ಈ ದೇವಾಲಯವು ಶಿಲ್ಪವಿರುವ ಪದ್ಮಪೀಠವು ೨ ಅಡಿ ಎತ್ತರ, ೨ ಅಡಿ ಉದ್ದ, ೨ ಅಡಿ ಅಗಲವನ್ನು ಹೊಂದಿದೆ. ಸಿದ್ದೇಶ್ವರನ ಮೂರ್ತಿಯ ಮೇಲೆ ಹಾಗೂ ಅಕ್ಕ ಪಕ್ಕದಲ್ಲಿ ತ್ರಿಶೂಲಗಳನ್ನು ಇಟ್ಟಿದ್ದಾರೆ. ಇಂತಹ ದೇವಾಲಯದಲ್ಲಿ ಕಂಬಗಳ ಮೇಲೆ ಆಂಜನೇಯ ತ್ರಿಪುರುಷರ ಉಬ್ಬು ಕೆತ್ತನೆಗಳು ಕಂಡುಬರುತ್ತವೆ. ಗರ್ಭಗುಡಿಯ ಒಳಗೆ ಸೋಪಾನದಲ್ಲಿ ಆನೆ, ಕುದುರೆ ಮತ್ತಿತರ ಉಬ್ಬು ಶಿಲ್ಪಗಳಿವೆ. ಆದ್ದರಿಂದಲೇ ಈ ದೇವರಿಗೆ ಬಹು ಆರಾಧಕರು ಇದ್ದಾರೆ ಎಂಬುವುದು ದಿಟ. ಒಂದು ಸ್ಥಳಿಯ ಮಾಹಿತಿಯ ಪ್ರಕಾರ ಕುರಿಯ/'ಕರಿಯ ಕಂಬಳಿಯ ಹಾಸಿ' ಪೂಜೆಗೆ

ಎಡೆಯನ್ನು ಹಾಕುತ್ತಿದ್ದರು. ಎಂಬ ಅಂಶ ತಿಳಿದುಬರುತ್ತದೆ. ಆದ್ದರಿಂದ ಸಿದ್ದೇಶ್ವರ ಆರಾಧಕರು ಇರಬಹುದು ಎಂಬುವುದು ನನ್ನ ನಿರ್ಧಾರವಾಗಿದೆ.

೨.ಕಾಲಭೈರವ ಆರಾಧನೆ

ಕಾಲಭೈರವ ಎಂಬ ಹೆಸರು ಬರಲು ಮುಖ್ಯವಾದ ಕಾರಣವೆಂದರೆ ರಾಕ್ಷಸರ ವಿರುದ್ಧ ಹೋರಾಡುವಾಗ ರಕ್ಕಸರ ಶಕ್ತಿಯು ಉಗ್ರಸ್ವರೂಪ ತಾಳಿ ಯುದ್ಧ ಮಾಡಲು ಮುಂದದಾಗ ಅಕ್ಕ ಕರ್ಪೂರದಮ್ಮನ ಸಲಹೆಯಂತೆ ಭೈರವ ಈ ರಾಕ್ಷಸರು ಸಾಮಾನ್ಯದವರಲ್ಲ ಇವರಿಗೆ ಒಂದು ಹನಿ ರಕ್ತ ಕೆಳಕ್ಕೆ ಬಿದ್ದರೆ ಆ ರಕ್ತದಿಂದ ಮತ್ತೊಬ್ಬ ದೈತ್ಯ ರಾಕ್ಷಸ ಜನಿಸುತ್ತಾನೆ. ಆದ್ದರಿಂದ ನೀನು ಸಮಯ ವ್ಯರ್ಥ ಮಾಡದೇ ಕಾಲಭೈರವನ ಅವತಾರತಾಳಿ ಅವರನ್ನು ಸಂಹಾರ ಮಾಡು ಎಂದು ನೀಡಿದ ಉಕ್ತಿಯಿಂದ ಭೈರವದೇವ ಉಗ್ರನರಸಿಂಹನಂತೆ ಆ ರಾಕ್ಷಸರನ್ನು ಸಂಹಾರ ಮಾಡುತ್ತಾರೆ. ಮುಖ್ಯವಾಗಿ ಗಮನಿಸಿದಂತಹ ಅಂಶವೆಂದರೆ ಇಲ್ಲಿ ಭೈರವ ಇದು ಲಿಂಗಾಯತರ ದೈವ ಅಥವಾ ಆರಾಧನೆ ಎಂಬುದು ತಿಳಿದು ಬಂದಿದೆ. ಮುಂದುವರಿದು ಕಾಲಭೈರವ ಇವರು ಮೂಲತಃ ಮಂಗಳೂರಿನ ಕದ್ರಿಯವರು "ನಾಥರದೈವ" ಎಂಬುದಾಗಿಯೂ ದೊರೆತಿದೆ. ಇದು ಡಾ.ರಹಮತ್ ತರೀಕೆರೆ ಅವರು ಸಂಪಾದಿಸಿದ 'ಕರ್ನಾಟಕ ನಾಥ ಪಂಥ' ಎಂಬುದರಲ್ಲಿ ದೊರೆತಿದೆ. ಹಾಗೆಯೇ ಇಲ್ಲಿ ಸೂಕ್ಷ್ಮವಾಗಿ ಅರಿತ ಮತ್ತೊಂದು ವಿಷಯವೆಂದರೆ ಪೂಜೆ ಮಾಡುವಾಗ ತೇರನ್ನು ಎಳೆಯುವಾಗ ಮೊಟ್ಟಮೊದಲು ತೇರಿಗೆ ಇಟ್ಟ ಹಣ್ಣು, ಹೂ, ಕಾಯಿ, ಫಲಹಾರ ಮುಂತಾದವುಗಳನ್ನು ಲಿಂಗಾಯತರು, ಬೇಡರು, ಅಗಸರು, ಗೊರವರು, ಹರಳಯ್ಯ ಸಮುದಾಯದವರು ತೆಗೆದುಕೊಂಡು ಹೋಗುವಂತಹದ್ದು ದೊಡ್ಡ ಸಂಪ್ರದಾಯವಾಗಿದೆ.

೩.ಸಮುದಾಯದ ಆರಾಧನೆ

ಹಿಂದಿನ ಕಾಲದಿಂದಲೂ ಜನ ಸಮುದಾಯ ಮೊಟ್ಟ ಮೊದಲು ಭೂಮಿ ತಾಯಿಗೆ ವಂದನೆಯನ್ನು ಮಾಡಿ ಹೂಳುತ್ತಾರೆ. ಹಾಗೂ ಭೂಮಿಯನ್ನು ದೇವರೆಂದು ತಾಯಿಯೆಂದು ಪೂಜೆ ಮಾಡುತ್ತಾ ಬಂದಿದ್ದಾರೆ. ಹಾಗೂ ಜನಪದೀಯವಾಗಿ ಭೂಮಿ ತಾಯಿಗೆ ಹಾಡೊಂದು ಕಟ್ಟಿ ಪೂಜೆ ಮಾಡುತ್ತಿದ್ದರು.

'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ।
ಎಳ್ಳು ಜೀರಿಗೆ ಬೆಳೆಯೋಳ। ಭೂತಾಯಿ
ಎದ್ದೊಂದು ಘಳಿಗೆ ನೆನೆದೇನು"

ಎಂಬಂತೆ ಎದ್ದ ಕೂಡಲೇ ಭೂಮಿತಾಯಿಗೆ ನಮಿಸಿ ಮುಂದಿನ ಕಾರ್ಯ ಮಾಡುವರು ಬರುಬರುತ್ತಾ ಜಾತಿ, ಧರ್ಮ, ಜನಾಂಗ, ಸಂಸ್ಕೃತಿ, ಉಡುಗೆ, ತೊಡುಗೆ ಮುಂತಾದ ಸಂಪ್ರದಾಯದ ಮಡಿಲಲ್ಲಿ ಜೀವಿಸುವ ಹೊತ್ತಿಗೆ ಒಬ್ಬ ದೈವರನ್ನು ಆರಾಧನೆ ಮಾಡುವ ಕಾಲವೊಂದು ಬರುತ್ತದೆ. ಆದ್ದರಿಂದ ಈ ಜನ ಸಮುದಾಯದವರು ತಮ್ಮ ಅಕ್ಕ ಪಕ್ಕದಲ್ಲಿರುವ ದೇವರುಗಳಿಗೆ ಮನಃಸಾಕ್ಷಿಯಾಗಿ ಭಕ್ತಿಭಾವದಿಂದ ಆರಾಧನೆ ಮಾಡುತ್ತಾರೆ. ಇದರಂತೆಯೇ ಭೈರವದೇವರನ್ನು ಮನೆದೇವರು ಎಂಬಂತೆ ಪೂಜೆ ಮಾಡುತ್ತಾ ಆರಾಧಿಸುತ್ತಾ ಬಂದಿದ್ದಾರೆ. ಯಾವುದೇ ಜಾತಿ, ಮತ, ಬೇಧಭಾವ ಮಾಡದೇ ಸರ್ವಧರ್ಮದವರು ಜಾತ್ರೆಯ ಸಮಯದಲ್ಲಿ ಭಾಗವಹಿಸುತ್ತಾರೆ. ಹಾಗೂ ಆ ದೇವರಿಗಾಗಿ ಭಕ್ತಿಯಿಂದ ಏನೆಲ್ಲಾ ಒಪ್ಪಿಸುತ್ತಾರೆ ಎಂಬುವುದನ್ನು ಈ ಮುಂದಿನಂತೆ ನೋಡುವುದಾದರೆ ಕುಂಬಾರರು ದೇವರ ಮೇಲಿರುವ ಭಕ್ತಿಯಿಂದ ಪ್ರತಿವರ್ಷ ಅವರು ಜಾತ್ರೆಯ ಸಂದರ್ಭದಲ್ಲಿ ಎಡೆಮಾಡಲು ಮಣ್ಣಿನ ಪಾತ್ರೆಗಳನ್ನು ಹಾಗೂ ಕಾರ್ತಿಕ ಮಾಸದಲ್ಲಿ ಮಣ್ಣಿನ ದೀಪಗಳನ್ನು ಕೊಡುವುದು ಇಂದಿಗೂ ರೂಢಿಯಲ್ಲಿದೆ ಎಂಬುದು ಸತ್ಯ ಘಟನೆಯಾಗಿದೆ. ಹಾಗೆಯೇ ಆಚಾರ್ಯ ಸಮುದಾಯದವರು ದಸರಾ ಹಬ್ಬದ ಸಮಯದಲ್ಲಿ ಸ್ವಾಮಿಯ ಪಟ್ಟಕ್ಕೆ ಕೂರುವಾಗ ಜೋಗಿಯ ಮಠಕ್ಕೆ ಕರೆದುಕೊಂಡು ಹೋಗುವುದು ಇಂದಿಗೂ ರೂಢಿಯಲ್ಲಿದೆ. ತೇರು ಎಳೆಯುವ ಸಮಯಕ್ಕೆ ನಾಲ್ಕು ಗಾಲಿಗಳಿಗೂ ಹಾಕಿದ ಬಲಿ ಅನ್ನವನ್ನು ವಾಲ್ಮೀಕಿ ಜನಾಂಗದವರು, ಹರಿಜನರು, ಮಡಿವಾಳರು, ಆಚಾರಿಗಳು ತೆಗೆದುಕೊಳ್ಳುವ ಪದ್ಧತಿ ಇದೆ." ಅಗಸರು ಬಟ್ಟೆಯನ್ನು ಸ್ವಚ್ಛಮಾಡುವ ಕಾರ್ಯದವರು ಹಾಗೆಯೇ ಭೈರವ ಆರಾಧನೆ ಮಾಡುವಾಗ ಸ್ವಚ್ಛ ಮನಸ್ಸಿನಿಂದ ತೇರು ಎಳೆಯುವಾಗ ತಡಿಮುಡಿಯನ್ನು (ನೀರಿನಿಂದ ನೆನಿಸಿದ ಬಟ್ಟೆ ಯಾವುದೇ ಧೂಳು ತಾಕದೇ ಇರಲಿ) ಎಂಬುವುದರ ಉದ್ದೇಶದಿಂದ ಉದ್ದವಾದ ಸುಮಾರು ೮ರಿಂದ ೧೦ಅಡಿ ಉದ್ದವಿರುವ ಅಂದರೆ ಹಲವಾರು ಸೀರೆಗಳನ್ನು ಒಂದಕ್ಕೊಂದು ಜೋಡಿಸಿ ಹೊಲಿಗೆ ಮಾಡಿದ ಹಾಸಿಗೆಯನ್ನು ಹಾಸಿ ತೇರು ಮುಂದೆ ಹೋದಾಂಗೆಲ್ಲ ಅದನ್ನು ಮುಂದೆ ಮುಂದೆ ಹಾಸಿಕೊಂಡು ಹೋಗುವರು ಹಾಗೂ ಗೊಲ್ಲರ ಹೆಣ್ಣುಮಕ್ಕಳು ಸೋಬಾನೆಯನ್ನು ಹಾಡುವಂತಹದ್ದು ಕಂಡುಬರುವುದು. ಒಟ್ಟಾರೆಯಾಗಿ ಸ್ಥಳಿಯ ಜನಸಮುದಾಯವು ಭೈರವ ದೇವರನ್ನು ಪ್ರತ್ಯಕ್ಷವಾಗಿ ಕಾಣುವ ದೇವರಂತೆ ಕಂಡು ಜಾತ್ರೆಯ ಸಮಯದಲ್ಲಿ ಬೆಟ್ಟದಲ್ಲಿ ನುಂಕೆಮಲೆ ಸಿದ್ದೇಶ್ವರ ನಾಟಕ ಆಡುತ್ತಾರೆ. ಜನ ಸಮುದಾಯವು ನುಂಕೆಮಲೆ ಸಿದ್ದೇಶ್ವರ ಜಾತ್ರೆಯು ಪ್ರಾರಂಭವಾಗುವ ಮೊದಲು ತನ್ನ ದೇವರಿಗೆ ಮನೆಯನ್ನು ಸ್ವಚ್ಛಗೊಳಿಸಿ ಮನೆಯಲ್ಲಿರುವ ದೇವರ ಪೋಟೊಗಳಿಗೆ

ಗಂಧ, ವಿಭೂತಿ, ಕುಂಕುಮವನ್ನು ಹಚ್ಚಿ ಜಾತ್ರೆಯ ಪ್ರಾರಂಭದ ದಿನದಂದು ನುಂಕೆಮಲೆ ಭೈರವನಿಗೆ ಕೊಂಡಿದುಡ್ಡು ಎಂದು ಅದಕ್ಕೆ ಮೀಸಲಾಗಿ ತೆಗೆದಿಡುತ್ತಾರೆ. ಹೀಗೆ ದೇವರಿಗೆ ಮಾಡಿದ ಊಟವನ್ನು ಎಡೆ ಹಾಕಿದ ನಂತರವೇ ಅವರು ತಂದಿರುವ ಊಟವನ್ನು ಜಾತ್ರೆಯಲ್ಲಿ ಕಿಕ್ಕಿರಿದ ಜನಸಂದಣಿಯಲ್ಲಿ ಎಲ್ಲಾರು ಸೇರಿ ಭೋಜನ ಮಾಡುವರು. ಹಾಗೂ ಜಾತ್ರೆಗೆ ಬಂದ ಕೆಲವು ಭಕ್ತಾಧಿಗಳಿಗೆ ಊಟ ನೀಡುವುದು ಕೆಲವರ ಸಂಪ್ರದಾಯವಾಗಿದೆ. ಮೊದಲನೆಯ ದಿನ ರಥೋತ್ಸವಕ್ಕೆ ಬರುವ ಜನರು ಮನೆಯ ಮುಂದಿರುವ ನೆಲಚಾರಿಸಿ ದೇವರ ಹೆಸರಿನಲ್ಲಿ ರಂಗೋಲಿ ಬಿಡಿಸಿ ಕರಿಕಂಬಳಿಯ ಮೇಲೆ ಗದ್ದುಗೆಯ ಹಾಕಿ ಮನೆಯಲ್ಲಿರುವ ಹಲವಾರು ಹಸು, ಕರು, ಎಮ್ಮೆ, ಕುರಿ, ಮೇಕೆಗಳಿಗೆ, ಆಹಾರವನ್ನು ಹಾಕಿ ಆಗ ಅವುಗಳ ಮೇಲೆ ಮುಸಿರೆಯನ್ನು ಚೆಲ್ಲಿ ಯಾವುದೇ ಪ್ರಾಣಾಪಯ ಆಗದಿರಲಿ ಎಂದು ಈ ರೀತಿಯಾಗಿ ಸಂಪ್ರದಾಯ ಮಾಡಿ ಕುಟುಂಬದೊಂದಿಗೆ ಜಾತ್ರೆಗೆ ಆಗಮಿಸುವರು.

ಜಾತ್ರೆಗೆ ಯಾವುದೇ ಜಾತಿ, ಮತ ಭಿನ್ನಾಭಿಪ್ರಾಯವಿಲ್ಲದೇ ಎಲ್ಲಾ ಜನರು ಆಗಮಿಸಿ ದೇವರಿಗೆ ಹರಕೆ ಹೊತ್ತ ಜನರು ಉರುಮೆ, ತಪ್ಪಡಿ, ತಾಳ, ಮೇಳಗಳೊಂದಿಗೆ ಹೂವಿನಹಾರ, ದೇವರಿಗೆ ನೀಡಿ ಹರಕೆಯನ್ನು ಒಪ್ಪಿಸುವುದು. ಇನ್ನು ಕೆಲವರು ಮಕ್ಕಳ ಭಾಗ್ಯ ನೀಡಿದ್ದರಿಂದ ಆ ಮಗು ತೂಕದ ಹಣವನ್ನು ನೀಡುವುದು ವಾಡಿಕೆಯಾಗಿದೆ. ಹಾಗೂ ಕಂಬಾರ ಜನರು ಹಣತಿಯನ್ನು ಮತ್ತು ಸೊರೆ, ಪೊಡಗವನ್ನು ದೇವರಿಗೆ ಉಚಿತವಾಗಿ ನೀಡುವುದು ವಾಡಿಕೆಯಾಗಿದೆ. ಸ್ಥಳಿಯರು ಮನೆದೇವರಂತೆ ಇವರನ್ನು ಆರಾಧಿಸುತ್ತಾರೆ. ಕೆಲವರು ನುಂಕೆಮಲೆಯ ಸಿದ್ದೇಶ್ವರನಿಗೆ ಭಾನುವಾರ ಉಪವಾಸ ಇರುವರು. ಇದರಿಂದ ದೇವರು ಒಳ್ಳೆಯದು ಮಾಡುತ್ತಾನೆ ಎಂಬ ನಂಬಿಕೆಯಲ್ಲಿ ಕೂಡ ಜನರು ಬೇರೂರಿ ಭಾನುವಾರ ಬೆಟ್ಟದ ಮೇಲೆ ಹರಕೆ ಹೊತ್ತು ಭಕ್ತಾದಿಗಳು ಸಹ ಭೋಜನವನ್ನು ಏರ್ಪಡಿಸಿ ದೇವರ ಪೂಜೆಗೆಂದು ಬಂದ ಎಲ್ಲಾರನ್ನು ಕರೆದು ಊಟ ಹಾಕುವುದು ಇಂದಿಗೂ ಪ್ರಸ್ತುತದಲ್ಲಿ ಇದೆ. ಈ ರೀತಿಯಾದ ಜನ ಸಮುದಾಯವು ಭೈರವನನ್ನು ಆರಾಧಿಸಿ ಮನೆಯಲ್ಲಿ ಪೋಟೊಗಳೊಂದಿಗೆ ಆರಾಧಿಸುತ್ತಾರೆ.

ತಳಸಮುದಾಯ ಹಾಗೂ ನಾಥ ಪಂಥದವರ ಆಚರಣೆ

ಇತಿಹಾಸದಲ್ಲಿ ತಳಸಮುದಾಯವು ತನ್ನದೇ ಆದ ವಿಶಿಷ್ಟ ಜೀವಪರ ಆಚರಣೆಗಳು ವೈದಿಕ ಸಂಸ್ಕೃತಿಗೆ ಮಿಗಿಲಾದ ವಿಶಿಷ್ಟ ಆಚರಣೆಗಳನ್ನು ರೂಢಿಸಿಕೊಂಡು ಬಂದಿವೆ. ತಳಸಮುದಾಯಗಳಾದ ಬುಡಕಟ್ಟು ಸಮುದಾಯ, ಕಟ್ಟೆ ಮನೆಗಳು, ದಲಿತ ಸಮುದಾಯ, ಹಿಂದುಳಿದ ವರ್ಗ, ವೀರಶೈವ ಲಿಂಗಾಯತ ಸಮುದಾಯಗಳು ತಮ್ಮ ಆಚರಣೆಗಳಾದ ದಾನ, ಅನ್ನದಾನ, ವಿಶಿಷ್ಟ ಆಹಾರ ಪದ್ಧತಿ, ಸಾಂಸ್ಕೃತಿಕ ಕಲೆಗಳಾದ, ಬಯಲಾಟ, ನಾಟಕ, ಮಾತೃ ಆಚರಣೆಗಳು, ಜುಂಜಪ್ಪ ಆಚರಣೆ, ಕಾಲಜ್ಞಾನ, ಊರ ಜಾತ್ರೆಗಳು, ವಿಶಿಷ್ಟ ಆಚರಣೆಗಳು, ಮಹಿಳೆಯ ಸೋಪಾನ ಪದಗಳು, ಕೋಲಾಟ, ಲಾವಣ್ಯಗಳು ಈ ರೀತಿಯಾಗಿ ಆಚರಣೆಗಳು ರೂಢಿಸಿಕೊಂಡು ಬಂದಿದ್ದಾರೆ.

ನಾಥಪಂಥ (ಲೋಕಿಮಠ)

ನುಂಕೆಮಲೆ ಬೆಟ್ಟದಲ್ಲಿ ಇವರು ಮೂಲತಹ ಉತ್ತರ ಭಾರತದಿಂದ ಆಂಧ್ರಪ್ರದೇಶದಲ್ಲಿರುವ ಕದರಿ ಮುಖ್ಯ ಮಠ ಅಲ್ಲಿಂದ ನುಂಕೆಮಲೆ ಬೆಟ್ಟದಲ್ಲಿರುವ ಮಠ ನಾಥ ಪರಂಪರೆಯ ಮಟಾಧಿಪತಿಯನ್ನು ನೇಮಕ ಮಾಡುತ್ತಾರೆ. ಇವರು ಬ್ರಹ್ಮಚಾರಿಯಾಗಿದ್ದು. ನುಂಕೆಮಲೆ ಬೆಟ್ಟದಲ್ಲಿರುವ ಎಲ್ಲಾ ಕಾರ್ಯಕ್ರಮಗಳನ್ನು ಇವರೇ ನಿರ್ವಹಿಸುತ್ತಾರೆ. ಶ್ರೀ ನುಂಕೆಮಲೇಶ್ವರ ಭಕ್ತಾಧಿಗಳೆಂದರೆ ಮ್ಯಾಸಬೇಡರು, ದಲಿತರು, ವಿರಶೈವ ಲಿಂಗಾಯತರು, ಈ ದೇವಾಲಯಕ್ಕೆ ನಡೆದುಕೊಳ್ಳುತ್ತಾರೆ. ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ಮತ್ತು ಬುಡಕಟ್ಟು ಸಂಸ್ಕೃತಿಯನ್ನು ಪರಂಪರಗತವಾಗಿ ಆಚರಿಸಿಕೊಂಡು ಬರುತ್ತಾರೆ.

ಕೊನೆ ಟಿಪ್ಪಣಿಗಳು

೧.ನುಂಕೆಮಲೆ ಭೈರವಾರಾಧನೆ ಹೊಳಹು, ಎ.ಸಿದ್ದಣ್ಣ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಪುಟ-೩೧

೨.ಕರ್ನಾಟಕದ ಉಗ್ರ ಆಚರಣೆಗಳು, ಡಾ.ತಾರಿಹಳ್ಳಿ ಹನುಮಂತಪ್ಪ, ಪುಟ-೧೨

೩.ಅದೇ, ಪುಟ-೧೨

೪.ಅದೇ, ಪುಟ-೧೨

೫.ನುಂಕೆಮಲೆ ಸಿದ್ದೇಶ್ವರ ಪುರಾಣ,ಡಾ.ಕೆ.ರವೀಂದ್ರನಾಥ, ಪುಟ-೧೨೬

೬.ಕರ್ನಾಟಕದ ನಾಥ ಪಂಥ, ಡಾ.ರಹಮತ್ ತರೀಕೆರೆ, ಪುಟ-೧೧೩

೭.ಅದೇ, ಪುಟ-೧೧೩

೮.ಅದೇ, ಪುಟ-೧೧೩

೯.ಅದೇ, ಪುಟ-೧೧೩

೧೦.ಅದೇ, ಪುಟ-೧೧೩

೧೧.ನುಂಕೆಮಲೆ ಭೈರವಾರಾಧನೆ ಹೊಳಹು, ಎ.ಸಿದ್ದಣ್ಣ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಪುಟ-೬೨

೧೨.ನುಂಕೆಮಲೆ ಸಿದ್ದೇಶ್ವರ ಪುರಾಣ, ಡಾ.ಕೆ.ರವೀಂದ್ರನಾಥ, ಪುಟ-೨೭

೧೩.ಅದೇ, ಪುಟ-೨೭

೧೪.ಅದೇ, ಪುಟ-೨೭

೧೫.ನುಂಕೆಮಲೆ ಭೈರವಾರಾಧನೆ ಹೊಳಹು, ಎ.ಸಿದ್ದಣ್ಣ, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಪುಟ-೫೫

೧೬.ಅದೇ, ಪುಟ-೫೬

ಅಧ್ಯಾಯ-೫

ನುಂಕೆಮಲೆ ಸಿದ್ಧೇಶ್ವರ ಪುರಾಣ: ಸಾಹಿತ್ಯಿಕ ವಿಚಾರಗಳು

೫.೧ ಅಲಂಕಾರ

೫.೨ ಛಂದಸ್ಸು

೧. ಕಂದ

೨. ತ್ರಿಪದಿ

೩. ದ್ವಿಪದಿ

೪. ಸಾಂಗತ್ಯ

೫.೩ ಭಾಷೆ

೧. ಗಾದೆ ಮಾತುಗಳು

೨. ನುಡಿಗಟ್ಟುಗಳು

ಅಧ್ಯಾಯ – ೫

ನುಂಕೆಮಲೆ ಸಿದ್ಧೇಶ್ವರ ಪುರಾಣ : ಸಾಹಿತ್ಯಿಕ ವಿಚಾರಗಳು

ನುಂಕೆಮಲೆ ಸಿದ್ದೇಶ್ವರ ಪುರಾಣವು ಆಡುಮಾತಿನಲ್ಲಿ ಜೋಗಿಗಳ ರೂಪದಲ್ಲಿ ತಮ್ಮ ಜೋಳಿಗೆಯಲ್ಲಿ ಹಲವಾರು ರೀತಿಯಾದ ಸಿದ್ಧಿಭುಕ್ತಿಯಿಂದ ತಯಾರದ ರೊಟ್ಟಿಯನ್ನು ಇಟ್ಟುಕೊಂಡು ಊರು ಊರು ಅಲೆದು ತಮ್ಮಗೆ ಹಸಿವು ಆದಾಗ ಆ ರೊಟ್ಟಿಯನ್ನು ತಿನ್ನುತ್ತ ಸಾಗುತ್ತಿರಲು ಒಂದು ಊರಿನಿಂದ ಮತ್ತೊಂದು ಊರಿಗೆ ಪಲಾಯನ ಮಾಡುತ್ತ ಸ್ವಾಮಿಯ ಪುರಾಣವನ್ನು ಹೇಳಿಕೊಳ್ಳುತ್ತಿದ್ದರು. ನಂತರದಲ್ಲಿ "ನುಂಕೆಮಲೆ ಸಿದ್ದೇಶ್ವರ ಪುರಾಣವು ಯಕ್ಷಗಾನ ಪ್ರಕಾರದಲ್ಲಿ ರಚನೆಯಾಗಿದ್ದು ಇದು ದೇಸಿ ಕಾವ್ಯಬಂಧಕ್ಕೆ ಸೇರುವಂತದ್ದು.[೦೧] ಹಲವಾರು ಕಥೆಗಳನ್ನು ಅಜ್ಜಿಯ ಕಥೆಗಳ ಮೂಲಕ ಪ್ರಚೋರತೆಯನ್ನು ಪಡೆಸಲಾಯಿತು. ಆದರೆ ಯಾವುದೆ ಒಂದು ನಿರ್ದಿಷ್ಟ ಪುರಾಣವು ಗಟ್ಟಿಗೊಳ್ಳಬೇಕಾದರೆ ಅದಕ್ಕೆ ಆಧಾರಗಳು ಮುಖ್ಯವಾಗಿರಬೇಕು. ಇಂತಹ ದಾಖಲೆಗಳನ್ನು ಮತ್ತು ಆಧಾರವನ್ನು ಹುಡುಕುತ್ತ ಹೋದಂತಹ ಸಂದರ್ಭದಲ್ಲಿ ಎರಡು ಹಸ್ತಪ್ರತಿಗಳು ದೊರೆತ್ತಿದ್ದು ಅದರಲ್ಲಿ ಒಂದರಲ್ಲಿ ಮಾತ್ರ ಸ್ತುತಿಪದ್ಯದಲ್ಲಿ ಬರೆದವನ ಉಲ್ಲೇಖ ಹೀಗೆ ದಾಖಲಾಗಿದೆ.

"ವಿಜಯವರುಷದಿ ಅರ್ತಿ ಫಾಲ್ಗುಣವು ಮತ್ತು ಶುದ್ಧಪಾಡ್ಯ ನಿತ್ಯಶನಿವಾರು ಪಾಲಪ್ಪನಾಯ್ಕ ಬರೆದ ಮಂಗಳ ಚರಿತ್ರೆ"[೦೨] ಎಂದು ಉಲ್ಲೇಖಗೊಂಡಿದೆ. ಇದರಿಂದ ಈ ಕೃತಿಯ ಕರ್ತೃ ಪಾಲಪ್ಪನಾಯಕನೆಂದು ಇಟ್ಟುಕೊಳ್ಳಬಹುದು. ನುಂಕೆಮಲೆ ಸಿದ್ದೇಶ್ವರ ಪುರಾಣವು ಹಲವು ಪುರಾವೆಗಳಿಂದ ಸಾಹಿತ್ಯದ ಕೃತಿಯಿಂದ ಇದು ಹಿಂದಿನ ಕಾಲದಲ್ಲಿ ಶಿವ ಪಾರ್ವತಿಯರ ಅನುಗ್ರಹದಿಂದ ಭೂಲೋಕದಲ್ಲಿ ಹುಟ್ಟಿ ಜಗಪ್ರಸಿದ್ಧವಾದ ಅವತಾರ ಪುರುಷನಾಗಿ ರಾಕ್ಷಸರನ್ನು ಸಂಹಾರ ಮಾಡಲು ಭೂಲೋಕಕ್ಕೆ ಬಂದು ತಮ್ಮ ವಾಸಸ್ಥಳವನ್ನು ನುಂಕೆಮಲೆ ಮಾಡಿಕೊಂಡು ಜೀವಿಸಿದ್ದನು. ಒಂದು ವಾಸ್ತಾವಾಂಶಕ್ಕೆ ಕಟ್ಟಿಕೊಡುತ್ತದೆ "ನುಂಕೆಮಲೆ ಸಿದ್ದೇಶ್ವರ ಪುರಾಣವು ಕಾವ್ಯವು ಹೌದು, ಸ್ಥಳನಾಮ ಚರಿತ್ರೆಯು ಹೌದು"[೦೩] ಎಂಬುವುದಾಗಿ ಡಾ. ಕೆ ರವೀಂದ್ರನಾಥ ಗುರುತಿಸಿದ್ದಾರೆ. ಈ ಕಾವ್ಯಗಳು ವಿಶೇಷವಾಗಿ ಸಾಹಿತ್ಯ ಮೀಮಾಂಸೆಯನ್ನು ಹಾಗೂ ಕಾವ್ಯಬಂಧ ಪುರಾಣದ ಹಿನ್ನೆಲೆಯಲ್ಲಿ ರಚನೆಯಾಗಿವೆ. ಏಕೆಂದರೆ ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನ ಕಾವ್ಯಗಳು ಜನಪದ ಸಾಹಿತ್ಯವು ವಿಶಿಷ್ಟವಾಗಿ ಹಾಗೂ ಪ್ರಕಾರವಾಗಿ ಮೂಡಿಬಂದಿದ್ದು ಶಿಷ್ಟಸಾಹಿತ್ಯದಿಂದ ಭಿನ್ನವೆನ್ನಿಸಿದರು ಶ್ರೀ ಸಾಮಾನ್ಯರಿಗಾಗಿ

ಹರಿದು ಬಂದಿರುವ ಸಾಹಿತ್ಯವಾಗಿದೆ. ಹಲವಾರು ರೀತಿಯಾದ ಲಯಗಳು, ರಾಗ, ತಾಳ, ಪ್ರಬುದ್ಧತೆಯಿಂದ ಎಣೆದಿರುವುದನ್ನು ನಾವು ನೋಡುತ್ತೇವೆ. " ಹೀಗಾಗಿಯೇ ಈ ಕೃತಿಗಳಿಗೆ ಶ್ರವ್ಯಗುಣ ಜೊತೆಗೆ ದೃಶ್ಯಗುಣ ಸೇರಿ ಪ್ರಸಂಗ ಪ್ರದರ್ಶನ ಸಾಹಿತ್ಯವೆಂಬ ಮರ್ಯಾದೆ ಸಲ್ಲುತ್ತದೆ ಈ ಕಾರಣಕ್ಕಾಗಿಯೆ ನುಂಕೆಮಲೆ ಸಿದ್ದೇಶ್ವರ ಪುರಾಣವು ವಿಶಿಷ್ಟ ಕೃತಿಯಾಗಿದೆ"[೦೪]

ಮುಂದುವರೆದು ನೋಡುವುದಾದರೆ ಈ ಪುರಾಣವು ಸಾಹಿತ್ಯಿಕವಾಗಿ ಮೈಗೂಡಿಸಿಕೊಂಡಿರುವಂತಹ ಹತ್ತು ಹಲವು ನಾಟಕಗಳು ಇವುಗಳಿಗೆ ಪುರಾಣ ಕಥೆಗೆ ಸಾಕ್ಷಿಯಾಗಿದೆ.

ಉದಾಹರಣೆಗೆ : ಶ್ರೀ ಶನಿಮಾತ್ಮೆಹೆ ಪುರಾಣ, ಭೈರವೇಶ್ವರ ಪುರಾಣ, ತುಪ್ಪದ್ದಮ್ಮನ ನಾಟಕ, ಕರಿಬಂಟ ಕಾಳಗದ ಪುರಾಣ, ಮುತಾಂದವು ಇದಕ್ಕೆ ಪೂರಕವಾಗಿದೆ. "ನುಂಕೆಮಲೆ ಸಿದ್ದೇಶ್ವರ ಪುರಾಣವು ದ್ವಿಪದಿ, ತ್ರಿವುಡೆ, ಜಂಪೆ, ಅಟತಾಳ, ಏಕತಾಳ, ಕಂದ, ಯಾಲಪದ, ಮುಂತಾದ ಛಂದೋರೂಪಗಳಿಂದ ರಚನೆಗೊಂಡಿದೆ"[೦೫]

ಕನ್ನಡ ಸಾಹಿತ್ಯವು ಹಿಂದಿನಿಂದಲೂ ಜನಪದೀಯವಾಗಿ ಪರಂಪರೆಯಿಂದ ಸಾಹಿತ್ಯವು ಶಿಷ್ಟಸಾಹಿತ್ಯದಿಂದ ದೇಶಿಯ ಸಾಹಿತ್ಯದಡೆಗೆ ಬೆಳೆದು ಬಂದಿದೆ. ಜನಪದಿಯ ಸಾಹಿತ್ಯವು ಹೃದಯಗಳಿಗೂ ಅರ್ಥವಾಗುವಂತಹ ಕಾವ್ಯ ಪರಂಪರೆಯಾಗಿದೆ. " ಕರ್ನಾಟಕದಲ್ಲಿ ಬಹಳ ಹಿಂದಿನಿಂದಲೂ ಯಕ್ಷಗಾನ, ಬಯಲಾಟಗಳನ್ನು ರಾಗಬದ್ಧವಾಗಿ ವಾಚಿಸುವ ಪರಂಪರೆಯಿತ್ತು"[೦೬] ಎಂಬುದು ಈ ಕಾವ್ಯವು ಸ್ಪಷ್ಟವಾಗಿ ತಿಳಿಸುತ್ತದೆ.

ಮಾತು ಮೊದಲೊ? ಅಥವಾ ಬರವಣಿಗೆ ಮೊದಲೊ ಎಂಬ ಪ್ರಶ್ನೆ ಸರ್ವೆಸಾಮಾನ್ಯವಾಗಿ ಉದ್ಭವವಾಗುತ್ತವೆ. ಇಂತಹ ಅಸ್ಪಷ್ಟವಾದ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಬಹಳ ಕಷ್ಟ. ಮೊದಲು ಮೌಖಿಕ ಪರಂಪರೆಯಾದ 'ಮಾತು' ಎಂಬುವುದನ್ನು ತಿಳಿದಿದ್ದೇವೆ. ಅನಂತರ ಕಾವ್ಯಕ್ಕೆ ಸ್ಪಷ್ಟತೆ ಸಿಗುವುದು ಬರವಣಿಗೆಯಿಂದ ಎಂಬುವುದು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕು. ಆದ್ದರಿಂದ ವಾಚನಕ್ಕೆ ಅಭಿನಯ ಸೇರಿ ದೃಶ್ಯಕಾವ್ಯಗಳಾಗಿ ರೂಪಾಂತರಗೊಂಡಿವೆ ಎಂಬುವುದನ್ನು ಮರೆಯುವಂತಿಲ್ಲ.

"ರಾಗದಿಂದ ರಚಿತವಾದ ಈ ಕಾವ್ಯಗಳಲ್ಲಿ ದೈವವಿದೆ, ನೀತಿಯಿದೆ, ಚರಿತ್ರೆ ಇದೆ, ಧರ್ಮ ಇದೆ, ಸಂಸ್ಕೃತಿಯ ಮಟ್ಟ ಹೆಚ್ಚಿದೆ[೦೭] ಎಂಬ ಸಂಗತಿಯನ್ನು ತಿಳಿಯುತ್ತೇವೆ. ಈ ಹಿನ್ನಲೆಯಲ್ಲಿ

ನುಂಕೆಮಲೆ ಸಿದ್ದೇಶ್ವರ ಪುರಾಣ : ಒಂದು ಅಧ್ಯಯನ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಸಾಹಿತ್ಯಿಕ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಅಲಂಕಾರ

ಸಿದ್ದೇಶ್ವರ ಪುರಾಣದಲ್ಲಿ ಬಳಕೆಯಾದ ಅಲಂಕಾರಗಳ ಬಗ್ಗೆ ಈ ಕೆಳಗಿನಂತೆ ನೋಡಬಹುದು.

"ದೇವರಂತೆ ತೋರುತಿರುವೆ । ದೇವರಾಗಿ ಬಂದೆಯಿಲ್ಲ ।

ದೇವ ದೇವ ನಿಮ್ಮ ನೀ ಕಾಯೇ । ದೇವರ ದೇವ

ಸೇವಕರು ನಾವು ಇರುವೆವು । ಈಶ ಪೊರೆಯಾ ದೀನರನ್ನು"[೧೮]

"ಲಕ್ಷ ಕುದುರೆಯು । ಲಕ್ಷ ಆನೆಯು

ಲಕ್ಷ ಒಂಟೆಯು । ಲಕ್ಷ ರಥಗಳು

ಲಕ್ಷ – ಲಕ್ಷವು ದಂಡುದಳಗಳು"[೧೯]

ಈ ಮೇಲಿನ ಪದ್ಯವನ್ನು ಗಮನಿಸಿದಾಗ ತ್ರಿಪದಿಯಲ್ಲಿ ರಚನೆಯಾಗಿದ್ದು ಅಲಂಕಾರಿಕವಾಗಿ ವರ್ಣಿತಗೊಂಡಿದೆ. ಇದರಲ್ಲಿ ಹಲವು ಪದಗಳು ಪುನರಾವರ್ತನೆ ಆಗಿರುವುದು ಕಂಡುಬರುತ್ತದೆ. ಹೀಗೆ ಕಂಡು ಬರುವ ಪದಗಳನ್ನು ಛೇಕಾನುಪ್ರಾಸದಲ್ಲಿ ಗಮನಿಸಿದ್ದೇನೆ. 'ಪದ್ಯದ ಸಾಲುಗಳಲ್ಲಿ ಎರಡು, ಹೆಚ್ಚು ವ್ಯಂಜನಗಳಿಂದ ಕೂಡಿದ್ದ ಪದವು ಪುನರವರ್ತನೆಯಾಗಿದ್ದರೆ ಅದನ್ನು ಛೇಕಾನುಪ್ರಾಸವೆಂದು ಕರೆಯುತ್ತೇವೆ. 'ಅಲಂಕಾರ ಎಂದರೆ ಕಾವ್ಯದ ಸೌಂದರ್ಯವನ್ನು ಉಂಟುಮಾಡಲು ಶಬ್ಧ ಅಥವಾ ಅರ್ಥ ಚಮತ್ಕಾರಕ್ಕೆ ಅಲಂಕಾರ ಎನ್ನುವರು' ಇಂತಹ ಅಲಂಕಾರಗಳು ನಾನು ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ಹಲವು ಅಲಂಕಾರಗಳನ್ನು ಗುರುತಿಸಿದ್ದೇನೆ.

"ಕರಿಯ ಕಂಬಳಿಯ ಮೇಲೆ ಸುತ್ತಿಹ

ಹುಲಿಯ ಚರ್ಮವ ಹಾಸಿ ಕುಳಿತಹ

ಮರದ ಎಲೆಯನು ಎಡೆಗೆ ಹಾಕಲು

ಬುರುಡೆ ಇಟ್ಟಿಹನು"[೨೦]

ವಿಶ್ಲೇಷಣೆ : ಈ ಪದ್ಯವನ್ನು ಅಲಂಕಾರಕ್ಕಾಗಿ ಬಳಸಿಕೊಂಡು ಭೈರವ ದೇವ ದಿನನಿತ್ಯದ ಪೂಜೆಗೆಂದು ಕರಿಯ ಕಂಬಳಿಯ ಜೊತೆ ಹುಲಿಯ ಚರ್ಮವನ್ನು ಹಾಸಿಕೊಂಡು ಮರದ ಎಲೆಯನ್ನು ದೇವರ ಪ್ರಸಾದಕ್ಕೆಂದು ಎಡೆಯನ್ನು ಹಾಕುವ ಮೂಲಕ ಧ್ಯಾನದಲ್ಲಿ ಮಗ್ನನಾಗುತ್ತಿದ್ದನು.

ಮುಂದುವರೆಸುತ್ತ

"ಬೆಟ್ಟಗುಡ್ಡಗಳಲ್ಲಿ । ಬಟ್ಟ ಬಯಲಲ್ಲಿ

ಬಿಟ್ಟು ಬಿಡದೆಯಿಲ್ಲ ದಟ್ಟಕಾನನದಲ್ಲಿ"[೧೧]

ವಿಶ್ಲೇಷಣೆ : ಪರಮೇಶ್ವರನ ಮಗನಾದ ಭೈರವ ದೇವನು ಪರಶಿವನ ಧ್ಯಾನಕ್ಕೆಂದು ಕುಳಿತಾಗ ಅವನ ಪರಿಸರದಲ್ಲಿ ಗಾಳಿ, ಮಳೆ, ಗುಡುಗು, ಮಿಂಚನ್ನು ಲೆಕ್ಕಿಸದೆ ದಟ್ಟವಾದ ಕಾಡುಬಯಲಿನಲ್ಲಿ ಕುಳಿತಿರುವನು. ಅಂದರೆ ಈ ಪದ್ಯವು ಬೆಟ್ಟ, ಗುಡ್ಡ, ಮರಗಿಡಗಳ ಪರಿಸರವನ್ನು ಅಲಂಕಾರಿಕವಾಗಿ ವರ್ಣಿಸಲಾಗಿದೆ. ಪ್ರಸ್ತುತ ಈಗಲೂ ಸಹ ಅಲ್ಲಿನ ಬೆಟ್ಟಗುಡ್ಡಗಳನ್ನು ಕಾಣಬಹುದು. ಇನ್ನು ಹಲವಾರು ಅಲಂಕಾರಿಕವಾಗಿ ಸಾಹಿತ್ಯಿಕವಾಗಿ ವರ್ಣಿಸಬಹುದಾದ ಕಾವ್ಯಗಳನ್ನು ನೋಡಬಹುದು. ಅಲಂಕಾರವೆಂದರೆ ವರ್ಣಮಯವಾದ ವಿಷಯ ತತ್ವವೆಂಬಂತೆ ನೋಡುವುದು ಅದರಂತೆ

"ಶೂರರಾದರೆ ಬನ್ನಿ ಮುಂದಕೆ

ವೀರರಾದರೆ ಕತ್ತಿಹಿಡಿಯಿರಿ

ತೋರುವೆವು ನಾವೀಗ ನಿಮಗೆಯು ಧೀರ ಶಕ್ತಿಯನು"[೧೨]

*ಅಲಂಕಾರಗಳಲ್ಲಿ ಅರ್ಥಾಲಂಕಾರ, ಶಬ್ಧಾಲಂಕಾರ ಎಂಬ ಎರಡು ಪ್ರಕಾರವಾದ ಅಲಂಕಾರವನ್ನು ನೋಡುತ್ತೇವೆ. ಶಬ್ದಾಲಾಂಕಾರಕ್ಕೆ ಈ ರೀತಿಯಾದ ಪದ್ಯವನ್ನು ಆರಿಸಿದ್ದೇನೆ.

"ಹಿಡಿಯಿರಿವರನು ಬಿಡಲು ಬೇಡಿರಿ।

ಕಡಿದು ರುಂಡನ ತುಂಡುಮಾಡಿರಿ

ಬುಡನೆ ತುಡುಗರ ಹಿಡಿದು ಬಂಧಿಸಿ। ಬಿಡಲು ಬೇಡಿ"[೧೩]

ವಚನ:- ಖಡ್ಗದಿಂದ ಹಿಡಿದು ಯುದ್ಧಕ್ಕೆ ಬಂದಂತಹ ಶತ್ರುಗಳನ್ನು ಅಥವಾ ರಾಕ್ಷಸರ ರುಂಡವನ್ನು ಚಂಡಾಡುವಂತೆ ಕತ್ತರಿಸಿ ಬಿಟ್ಟರೆ ಮುಳ್ಳುಗಾವರು ಎಂಬುವುದು ಒಳಾರ್ಥವಾಗಿದೆ.

"ಮಲ್ಲಯುದ್ಧವ ಮಾಡಿ ದುಡಿದರು।

ಬಿಲ್ಲು ಬಾಣಗಳಿಂದ ಕೊಲ್ವರು

ಬಲ್ಲಿದರು ಹೊಡೆದಾಡಿ ಮೂರ್ಛೆಯ। ಅಲ್ಲಿ ಬಿದ್ದಿಹರೂ"[೧೪]

ಇಂತಹ ಹಲವಾರು ವರ್ಣಮಯವಾದ ಪದ್ಯಗಳನ್ನು ನನ್ನ ಅಧ್ಯಯನದ ವ್ಯಾಪ್ತಿಗೆ ಸಂಬಂಧಿಸಿದಂತೆ ಗುರುತಿಸಿ ವಿವರಿಸಿದ್ದೇನೆ.

ಛಂದಸ್ಸು

ತ್ರಿಪದಿ:- ತ್ರಿಪದಿಗೆ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ತ್ರಿಪುಡೆ, ತಿವುಡೆ, ತಿವದಿ, ತಿವದಿಗೆ, ತ್ರಿಪದಿಕಾ, 'ಮುಕ್ಕಾಲ್ವಾಡು' ಎಂಬ ಪರ್ಯಾಯ ಪದದಿಂದ 'ತ್ರಿಪದಿ' ಎಂಬುವುದಾಗಿ ಬಳಕೆಯಾಗಿದೆ. ಹಿಂದಿನ ಕಾಲದಲ್ಲಿ ಜನಪದೀಯವಾಗಿ ಹರಿದು ಬಂದಂತಹ ಸಾಹಿತ್ಯಿಕ ಪ್ರಕಾರ ತ್ರಿಪದಿಯು ಹಲವಾರು ವರ್ಷಗಳ ಹಿಂದೆಯೇ ಜನರು ಮೊದಲು ಭೂತಾಯಿಯನ್ನು ಪೂಜೆ ಮಾಡುವಂತಹದ್ದು ಹಾಗೂ ಎದ್ದೊಂದು ಘಳಿಗೆ ಭೂಮಿ ತಾಯಿಗೆ ನಮಿಸಿ ನಂತರ ಕೆಲಸ ಕಾರ್ಯವನ್ನು ಮಾಡುವಂತಹ ಪದ್ಧತಿಯು ಇನ್ನು ಕೆಲವು ಹಳ್ಳಿಗಳಲ್ಲಿ ನಡೆಯುತ್ತವೆ. ನಂತರದಲ್ಲಿ ತಮ್ಮ ಇಷ್ಟ ದೈವರನ್ನು ಪೂಜೆ ಮಾಡುವುದು ಹಾಗೂ ಅದು ಹಿಂದಿನಿಂದಲೂ ಇಂದಿನವರೆಗೆ ಭೈರವನನ್ನು ಮನೆ ದೇವರೆಂದು ಪೂಜಿಸುತ್ತಾ ಬಂದಿದ್ದಾರೆ. ಜನಭಾಷೆಯಾಗಿ ಮಾತಿನಿಂದ ಮಾತಿಗೆ ಹರಿದು ಬಂದಿರುವುದು ಕಂಡುಬರುತ್ತದೆ. ಜನಪದರು ಹೀಗೆ ತ್ರಿಪದಿಯನ್ನು ಕಟ್ಟಿದ್ದಾರೆ.

"ಆಡಿ ಬಾ ನನಕಂದ ಅಂಗಾಲ ತೊಳೇದೇನ

ತೆಂಗಿನ ಕಾಯಿ ತಿಳಿನೀರು ತಕ್ಕೊಂಡು

ಬಂಗಾರ ಮೊರೆ ತೊಳೆದೇನಾ"

ಈ ರೀತಿಯಾದ ಸಾಹಿತ್ಯಿಕ ರೂಪವಾಗಿ ಮುಂದೆ ಸರ್ವಜ್ಞನವರು ಸಂಪೂರ್ಣವಾಗಿ ಬಳಸಿಕೊಂಡು 'ಸರ್ವಜ್ಞನೆಂದರೆ ತ್ರಿಪದಿ ತ್ರಿಪದಿಯೆಂದರೆ ಸರ್ವಜ್ಞ' ಎಂಬಂತೆ ಬೆಳೆದು

ಬಾನೆತ್ತರಕ್ಕೆ ಬೆಳಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾಖಿಕ ಪರಂಪರೆಯಲ್ಲಿ ದೇವರನ್ನು, ನಿಸರ್ಗವನ್ನು ಪೂಜಿಸಿ ನಂತರ ಹತ್ತು ಹಲವು ಪುರಾಣ ಪುರುಷರ ಮೇಲೆ ತ್ರಿಪದಿಯು ಶ್ರೀ ನುಂಕೆಮಲೆ ಸಿದ್ದೇಶ್ವರ ಪುರಾಣಕ್ಕೆ ಕೆಲವು ಆರಿಸಿ ಹೇಗೆ ಒಂದು ಕಾವ್ಯದ ಪರಂಪರೆಯಲ್ಲಿ ಭೈರವನನ್ನು ಆರಾಧಿಸಿ ಹೊಗಳಿ ತ್ರಿಪದಿ ರಚಿಸಿದ್ದಾರೆ. ಎಂದರೆ

"ಬೇಗ ಬಾರೈ ಕಂದ ಭೈರವ। ಬೇಗ ಬರೆವವೆನು ಅಂತ್ಯಕಾಲಕೆ

ಜೋಗಿಯಾಗುತ ಕೆಲವು ಕಾಲವು।

ಪೊಗು ಮರ್ತ್ಯದೊಳು"[೧೫]

ಭೂಲೋಕದಲ್ಲಿ ರಾಕ್ಷಸರ ಅಟ್ಟಹಾಸದಿಂದ ಜನರು ವಿಲವಿಲನೆ ಒದ್ದಾಡಿ ನರಳುವಂತಹ ಸ್ಥಿತಿಯಲ್ಲಿ ರಾಕ್ಷಸರ ಘೋರ ಚಿತ್ರಹಿಂಸೆ ತಾಳಲಾರದೆ ಬಾರಯ್ಯ ಬಾ ಕಂದ ಈ ಧರೆಗೆ ತಾಳಲಾರದೆ ರಾಕ್ಷಸರಿಂದ ನಮ್ಮನ್ನು ರಕ್ಷಿಸು ಇಷ್ಟು ದಿನಗಳ ಕಾಲ ಈ ಘೋರ ರಾಕ್ಷಸರ ಕೈಯಿಂದ ಸತ್ತು ಬದುಕಿದ್ದೇವೆ. ಈಗಾದರೂ ಬಂದು ನಮ್ಮನ್ನು ಪಾರು ಮಾಡು ಎಂದು ಕರೆಯುವರು ಮತ್ತೊಂದು ಮುಖ್ಯವಾದ ತ್ರಿಪದಿಯನ್ನು ನೋಡುವುದಾದರೆ

"ಧೀರನಾದರೆ ಬರಲಿ ಇಲ್ಲಿಗೆ।

ಘೋರ ದೈತ್ಯಳಿ ಶಕ್ತಿ ತೋರುವೆ।

ಹಾರಿಸುತ ತಲೆಯನ್ನು ರಕ್ತವ। ಹೀರುವೆನು ಮೊದಲು"[೧೬]

"ಕೊಲ್ಲುವೆನು ಅವರನ್ನು ಈಗಲೆ

ಎಲ್ಲಿ ಹೋದರೂ ಬಿಡೆನು ಈ ಕ್ಷಣ।

ಹಲ್ಲಿನಿಂದ ನಾ ಕಚ್ಚಿಕೊಲ್ಲುವೆ। ಹುಲ್ಲು ಮಾನವರಾ"[೧೭]

ಇನ್ನು ನನ್ನ ಅಧ್ಯಯನದಲ್ಲಿ ಸಾಂಗತ್ಯವನ್ನು ನೋಡಿದ ಬಗೆ ಹೇಗೆ ಎಂಬುವುದು ತಿಳಿಯುವುದು ಮುಖ್ಯವಾಗಿದೆ.

ಸಾಂಗತ್ಯ:-

ಸಾಂಗತ್ಯವು ದೇಶಿ ಛಂದೋ ಪ್ರಕಾರದ ಜೊತೆಗೆ 'ಹಾಡುಗಬ್ಬ' ಸಾಂಗತ್ಯವು ಮೊದಲಿಗೆ ದೇವರಾಜ ಅಥವಾ ದೇಪರಾಜನ 'ಸೊಬಗಿನ ಸೋನೆ' ಎಂಬ ಕೃತಿಯಲ್ಲಿ ಬಳಕೆಯಾಗಿದೆ. ಮುಂದೆ ಹಲವಾರು ಕವಿ ಪುಂಗದವರು ಸಾಂಗತ್ಯವನ್ನು ಅನುಸರಿಸಿ ಹಲವು ಕೃತಿಗಳನ್ನು ಬರೆದಿದ್ದಾರೆ. ಅಂತಹ ಕೆಲವು ಕೃತಿಗಳನ್ನು ಗಮನಿಸುವುದಾದರೆ

"೧.ಶಿಸುಮಾಯಣನ ಅಂಜನಾ ಚರಿತೆ, ತ್ರಿಪುರ ದಹನ ಸಾಂಗತ್ಯ, ಸು. ೧೫ನೇ ಶತಮಾನ

೨.ರತ್ನಾಕರವರ್ಣಿಯ ಭರತೇಶ ವೈಭವ, ೧೫೫೦

೩.ಹೆಳವನಕಟ್ಟೆ ಗಿರಿಯಮ್ಮನ ಚಂದ್ರಹಾಸ ಕಥೆ, ೧೭೫೦

೪.ಪಯಣ ಮುನಿಯ ಸನತ್ಕುಮಾರ ಚರಿತೆ, ೧೬೦೬

೫.ತಿರುಮಲಾರ್ಯನ ಕರ್ಣವೃತ್ತಾಂತ ಕಥೆ, ೧೯೪೫

೬.ಕಲ್ಯಾಣಕೀರ್ತಿಯ ರಾಮನಚರಿತ್ರೆ, ೧೪೩೯

೭.ಮೂರನೇ ಮಂಗರಸನ ಪ್ರಂಭಜನ ಚರಿತೆ, ೧೫೦೩

೮.ಓದುವಗಿರಿಯನ ಸಾನಂದ ಗಣೇಶ ಸಾಂಗತ್ಯ, ೧೫೨೫

೯.ಬೇಂಟೆಯ ಲಕ್ಕನ ಹರಿಶ್ಚಂದ್ರ ಸಾಂಗತ್ಯ, ೧೫೩೮

೧೦.ತೆರಕಣಾಂಬಿ ಬೊಮ್ಮರಸನ ಜೀವಂಧರ ಸಾಂಗತ್ಯ, ೧೪೮೫

೧೧.ಚಂದ್ರಸಾಗರವರ್ಣಿಯ ಅಕಳಂಕ ಚರಿತೆ, ೧೮೧೦

೧೨.ಸಾಳ್ವಕವಿಯ ವೈದ್ಯ ಸಾಂಗತ್ಯ (ಸುಳುವ ಸಾಂಗತ್ಯ), ೧೫೫೦"[೧೮]

ಹೀಗೆ ಇನ್ನು ಹತ್ತು ಹಲವು ಕೃತಿಯನ್ನು ರಚನೆ ಮಾಡಿದ್ದಾರೆ. ಇಷ್ಟೇನಾ ಕೃತಿಯೆಂಬುವುದು ಅಪನಂಬಿಕೆ ಇವುಗಳನ್ನು ನನ್ನ ಅಧ್ಯಯನ ದೃಷ್ಟಿಯಿಂದ ಉದಾಹರಣೆಯಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಇಂತಹ ಸಾಂಗತ್ಯದ ಪದ್ಯವೊಂದನ್ನು ಆರಿಸಿಕೊಂಡಿದ್ದೇನೆ.

"ಅಮ್ಮಾಜಿ ಕೇಳಮ್ಮ ನಮ್ಮ ರಕ್ಷಪರಿಲ್ಲ।

ನಮ್ಮನೆಲ್ಲ ಸಲಹುತಾಯಿ

ರಕ್ಕಸಿಯನು ಕೊಂದು। ಸಿಕ್ಕದ್ಹೋದನು ಜೋಗಿ।

ಅಕ್ಕ ಹೇಳಮ್ಮ ನಿನ್ನ ತಮ್ಮ

ಜ್ಞಾನವಿಲ್ಲದ ರೀತಿ ದೀನನಾಗಿಯೆ ಹೋದ।

ಕಾನನದೊಳು ಅತ್ತಕಡೆಗೆ

ನಾವೀಗ ನಿಮ್ಮೊಡನೆ। ಧಾವಿಸಿ ಬರುವೆವು

ದೇವಿಯೆ ಹುಡುಕುವೆವಲ್ಲಿ

ಎಮ್ಮ ರಕ್ಷಿಪರಿಲ್ಲ। ಎಮ್ಮ ನೋಡುವರಿಲ್ಲ।

ನಿಮ್ಮಲ್ಲಿ ನಾವು ಬಂದೆವಮ್ಮ"

ವಿಶ್ಲೇಷಣೆ:- ಒಂದುಕಡೆ ಭೈರವ ಕಾಟಣ್ಣ ಮತ್ತು ಆ ಊರಿನ ಬಲ್ಲಾಳನ ಯುದ್ಧದಿಂದ ಅವರಿಬ್ಬರನ್ನು ಒಂದುಮಾಡಿ ಕಾಟಣ್ಣನಿಗೆ ಪಟ್ಟವ ಕಟ್ಟಿ ಸಂತೋಷವಾಗಿರುವಾಗ ಮತ್ತೊಂದು ಕಡೆ ರಾಕ್ಷಸಿಯರ ದಾಸಿಯರು ಕರ್ಪೂರದಮ್ಮನನ್ನು ತಮ್ಮನ್ನು ಕಾಯೇ ತಾಯಿ ರಾಕ್ಷಸರಿಂದ ನಮ್ಮನ್ನು ಮುಕ್ತಿಗೊಳಿಸು ಅಮ್ಮ ಎಂದು ಅಂಗಲಾಚಿ ಬೇಡಿಕೊಂಡರು. ನಂತರದಲ್ಲಿ ಗಾದ್ರಿಮಲೆಯಲ್ಲಿರುವ ಭೈರವನನ್ನು ಬೇಗ ಹುಡುಕಿ ತಂದು ಪರಿವಿಲ್ಲದೆ ದೀನರ ಮೇಲೆ ಕೊಂದು ತಿನ್ನುವ ಈ ನರ ಚಂಡಿಗೆ ಒಂದು ಶಾಶ್ವತವಾದ ಸಾವಿನ ದಾರಿ ತೋರಿಸು ತಾಯಿ ಎಂದು ಅಮ್ಮಾಜಿಯಾದ ಕರ್ಪೂರದಮ್ಮನನ್ನು ಬೇಡಿಕೊಳ್ಳುತ್ತಾರೆ.

ಕಂದ:-

"ಸಂಸ್ಕೃತದ ಮಾತ್ರಾ ವೃತ್ತದಲ್ಲಿನ ಆರ್ಯಗೀತಿ, ಉಪಗೀತೆ, ಉದ್ಗೀತಿ, ಆರ್ಯಾಗೀತಿಗಳು ಕಂದಪದ್ಯದ ಇತರ ಪ್ರಭೇದಗಳು ಸಂಸ್ಕೃತದ ಆರ್ಯಗೀತಿಕೆ ಪ್ರಾಕೃತರೂಪವೇ 'ಸ್ಕಂದಕ' ಪ್ರಾಕೃತದಲ್ಲಿರುವ ಗಾಥಾ ಪ್ರಭೇದಗಳಲ್ಲಿ ಸ್ಕಂದವೂ ಒಂದು ಪ್ರಾಕೃತದ ಸ್ಕಂದಕ>ಖಂದ>ಖಂದ>ಕಂದ ಆಗಿದೆ"[೨೦] ಕನ್ನಡದಲ್ಲಿ ೮ನೇ ಶತಮಾನದ

'ನರಸಿಂಹರಾಜಪುರದ 'ಸಿಂಗಣಗದ್ದೆ' ಶಾಸನದಲ್ಲಿ ಕಾಣಿಸಿಕೊಂಡ ಕಂದ ಪದ್ಯ ಮೊದಲನೆಯದು. ನಂತರದಲ್ಲಿ ಶಾಸನ, ಕಾವ್ಯ, ಪುರಾಣ, ಶಾಸ್ತ್ರಗಳಲ್ಲೆಲ್ಲ ಕಂದವು ಪಸರಿಸುವುದನ್ನು ನಾವು ನೋಡಿದ್ದೇವೆ. ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ಗುರುತಿಸಿದ ಕಂದ ಪದ್ಯಗಳನ್ನು ನೋಡುವುದಾದರೆ

"ಕಾರುಗತ್ತಲೆಯೆಂದು ನೋಡದಲೆ।

ಆರು ಕಾಣದ। ತೆರದಿ ಪೋಗುತ

ಧೀರವರ ಕಾಟಣ್ಣ ನಡದನು। ಮಾರ ವೈರಿಯ

ಸ್ಮರಿಸಿ ಪೋಗುತ ನಗರ ಬೀದಿಯಲಿ"[೨೧]

"ಭೈರವದೇವರ ಮಹಿಮೆಯಿಂದಲಿ

ಚೋರಗಂಡಿಲಿ ತೂರಿ ಹೊಕ್ಕನು

ಆರು ಅರಿಯದ ರೀತಿ ಪೋಗುತ।

ವೀರಬಲ್ಲಾಳನನು ಕೊಲ್ಲುವೆನೆನೆತ ಹೊಕ್ಕನರಮನೆಯ"[೨೨]

ಮತ್ತೊಂದು ಕಂದ ಪದ್ಯದ ಸಾಲುಗಳು ಹೀಗಿವೆ.

"ಆ ಮಹಾತ್ಮನು ಸ್ವಾಮಿ ಭಯರವದೇವ।

ಭೂಮಿಯಲಿ ಶೂರ ಕಾಟಣ್ಣನಿಗೆ

ಆ ಮಹಾ ಸ್ಥಳದಿ ದೊರೆ ಪಟ್ಟ ಕಟ್ಟಲು

ಪ್ರೇಮದಿಂ ಬರೆದಿಹನು। ತನಪಾದವಂದ್ಯಂಗುಣಸಾಂದ್ರ"[೨೩]

ಈ ರೀತಿಯಾದಂತಹ ಸಾಲುಗಳು ಅಥವಾ ಪದ್ಯಗಳ ಶ್ರೀನುಂಕೆಮಲೆ ಭೈರವ ಪುರಾಣದಲ್ಲಿ ಹೇರಳವಾಗಿ ದೊರೆಯುತ್ತವೆ. ಹಾಗೂ ನನ್ನ ಅಧ್ಯಯನಕ್ಕೆ ಪೂರಕವಾದಂತಹ ಕಂದ ಪದ್ಯಗಳನ್ನು ಮಾತ್ರ ನಾನು ಬಳಸಿಕೊಂಡಿದ್ದೇನೆ. ಇನ್ನು ಮುಂತಾದವು ಇದ್ದಾವೆ.

ಉದಾ:- "ನಿದ್ರೆಯಿಂದ ಜನರು ಮಲಗಿರೆ।

ಸದ್ದುಯಿಲ್ಲದೆ ಶಾಂತಿ ತೋರಿತು।

ದುರ್ಗದಲ್ಲಿ ಏನೊಂದು ಕಾಣದು

ಸದ್ದು ಆಲಿಸುತಾಗ ಹೊಕ್ಕನು ಭದ್ರಕೋಟೆಯಲಿ"[೨೪]

ದ್ವಿಪದಿ:- ದ್ವಿ ಎಂದರೆ 'ಎರಡು'

ಪದಿ ಎಂದರೆ ಸಾಲು ಅಥವಾ ಪಂಕ್ತಿ

ಎರಡು ಸಾಲಿನ ಪದ್ಯಜಾತಿಗೆ ದ್ವಿಪದಿ ಎಂದು ಕರೆಯುತ್ತಾರೆ. ಈ ದ್ವಿಪದಿಯ ಸಾಲುಗಳು ನುಂಕೆಮಲೆ ಸಿದ್ದೇಶ್ವರ ಪುರಾಣದ ಬಗ್ಗೆ ಅಧ್ಯಯನ ಮಾಡುವಾಗ ಹಲವು ಸಾಲುಗಳನ್ನು ಬಳಸಿಕೊಂಡಿದ್ದೇನೆ.

"ಶ್ರೀಗುರುವೆ ಮಹಾಗುರುವೆ ಶಾಂತಿಕ

ಳಾಗುರುವೆ ಶಿವಾತ್ಮ ವಿದ್ಯಾಗುರುವೆ"

"ಪುರಾಗುರುವೆ ವಿಶ್ವ ಜಗದ್ಗುರುವೆ ವಿಶುದ್ಧ ಜೇಷ್ಠಾ

ಗುರುವೆ ಶ್ರುತಿಗುರುವೆ ಭಕ್ತಿ ಯಶೋ ಗುರುವೆ"

"ಪ್ರಸಾದ ತೇಜೋ ಗುರುವೆ

ಕೃಪಾಗುರುವೆ ಮದ್ಗುರುವೆ ಶಿವಾಥವಾ"[೨೫]

ಈ ಸಾಲಿನ ಪದ್ಯಗಳ ವಿಶ್ಲೇಷಣೆ ಭೂಲೋಕವನ್ನು ಕಾಯುವುದಕ್ಕಾಗಿ ಹಾಗೂ ಜನರ ರಕ್ಷಣೆಗಾಗಿ ಪರಮಾತ್ಮನಿಂದ ಜನ್ಮವಾದ ಭೈರವನು ತಂದೆಯಾದ ಪರಮೇಶ್ವರನನ್ನು ಪಾದಕಮಲಗಳಿಗೆ ಪಡುಮಟ್ಟು ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ನಮ್ಮನ್ನು ದಯಪಾಲಿಸಿ, ಅನುಗ್ರಹಿಸಿ, ಆಶೀರ್ವಾದಿಸಿ ಭೂಲೋಕವನ್ನು ಕಾಯಲು ಕಳಿಸೆನ್ನ ಗುರುವೆ ಎಂದು ಬೇಡಿಕೊಳ್ಳುತ್ತಾನೆ. ಈ ರೀತಿಯಾಗಿ ದ್ವಿಪದಿ ಪದ್ಯಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಬಳಸಿಕೊಂಡಿದ್ದೇನೆ.

ಭಾಷೆ

ಭಾಷೆಯೆಂದರೆ ಸಾಮಾಜಿಕ ಸಂಪರ್ಕಕೋಸ್ಕರ ಮಾನವ ನಿರ್ಮಿಸಿಕೊಂಡ ಯಾದೃಚ್ಛಿಕ ಮೌಖಿಕ ಸಂಕೇತಗಳ ವ್ಯವಸ್ಥೆ. ಭಾಷೆಯು ಯಾದೃಚ್ಛಿಕ ಸಂಕೇತಗಳಲ್ಲಿ ಚಾಕ್ಷುಸ, ಶ್ರಾವಣ, ಸ್ಪರ್ಶನ, ಜ್ಞಾನೇಂದ್ರಿಯ ಮೌಖಿಕತೆಗಳೆಂದು ವೈವಿಧ್ಯತೆಯಿದೆ. ಬಾಷೆಯು ಬಹಳ ಮುಖ್ಯವಾಗಿ ಧ್ವನ್ಯಂಗ ಮತ್ತು ಧ್ವನಿ ಸ್ಥಾನಗಳ ಸಂಯೋಗದಿಂದ ಭಾಷಾ ಧ್ವನಿಗಳು ಹುಟ್ಟುತ್ತವೆ. ಆದರೆ ಭಾಷೆಯೆಂಬುದನ್ನು ಒಂದು ಸೂತ್ರ ರೂಪವಾಗಿ ಹಿಡಿದಿಟ್ಟುಕೊಳ್ಳುವುದು ತುಂಬಾ ಕಷ್ಟ. ಜಗತ್ತಿನಾದ್ಯಂತ ಹಲವು ವಿದ್ವಾಂಸರು ವಿವಿಧ ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಪ್ಲೇಟೋ:– "ಧ್ವನಿ ಸಂಕೇತಗಳಿಂದ ಮನುಷ್ಯರ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಸಾಧನ ಎಂದು ವಿಚಾರ ಮಾಡಿದವನು. ಹಾಗೇಯೆ ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವುದೇ ಭಾಷೆ."[೨೬]

ಐಸ್ಲರ್:– "ಮನಸ್ಸಿರುವ ಯಾವುದೇ ಪ್ರಾಣಿಯ ಅನುಭವದ ಅಭಿವ್ಯಕ್ತಿಯೇ ಭಾಷೆ."[೨೭]

ಹೀಗೆ ಹಲವಾರು ವಿದ್ವಾಂಸರು ಭಾಷೆಯ ಬಗ್ಗೆ ವಿವಿಧ ವ್ಯಾಖ್ಯಾನಗಳನ್ನು ಗಮನಿಸಿದಾಗ ಆಧುನಿಕ ಸಾಹಿತ್ಯ ಬೆಳವಣಿಗೆಗೆ ಕೈಗನ್ನಡಿಯಾಗಿದೆ. ಆದರೆ ಹಿಂದಿನ ಕಾಲದಲ್ಲಿ ಭಾಷೆಗೆ ಯಾವುದೇ ಲಿಖಿತ ರೂಪವಿಲ್ಲದೆ ಕೇವಲ ಮೌಖಿಕವಾಗಿ ಹಾಗೂ ಹಾಡು ಮಾತಿನಲ್ಲಿ ಭಾಷೆಯನ್ನು ಕಟ್ಟಿದ್ದರು. ಬರುಬರುತ್ತಾ ಜನಪದಿಯವಾಗಿ ಬೆಳವಣಿಗೆ ಹೊಂದಿ ದೇಶಿಭಾಷಾ ಶೈಲಿಯಿಂದ ಸಾಹಿತ್ಯವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಇಂತಹ ಜನಭಾಷೆಯಿಂದ ನುಂಕೆಮಲೆ ಸಿದ್ದೇಶ್ವರ ಪುರಾಣ ಎಂಬ ಅಧ್ಯಯನಕ್ಕೆ ತೊಡಗಿದಾಗ ಹಲವಾರು ಭಾಷಿಕ ಅಂಶಗಳನ್ನು ಗುರುತಿಸಿದ್ದು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದು ಇವು ನನ್ನ ಅಧ್ಯಯನಕ್ಕೆ ಪೂರಕವಾಗುವಂತೆ ಬಳಸಿಕೊಂಡಿದ್ದೇನೆ.

ಉದಾಹರಣೆಗೆ ಗಾದೆಮಾತುಗಳು, ನುಡಿಗಟ್ಟುಗಳು, ಒಗಟುಗಳು, ಜನಪದಗೀತೆಗಳು ಇತ್ಯಾದಿಗಳನ್ನು ಬಳಸಿಕೊಂಡಿದ್ದೇನೆ.

೧.ಗಾದೆಮಾತು

ಗಾದೆಗಳು ಪ್ರತ್ಯಕ್ಷ ಜೀವನದ ಅನುಭವದಿಂದ ರೂಪುಗೊಳ್ಳುವುದರಿಂದ ಗಾದೆಮಾತಿನ ಬಗೆಗೆ ಎಲ್ಲರಿಗೂ ಆಸಕ್ತಿ ಇರುತ್ತದೆ. ದೈನಂದಿನ ಸಂದರ್ಭಗಳಲ್ಲಿ ಇಕ್ಕಟ್ಟುಗಳು ತಲೆದೋರಿದಾಗ

ಹಿರಿಯರ ಗಾದೆಮಾತುಗಳನ್ನು ಉದಾಹರಣೆಯಾಗಿ ಪರಿಸ್ಥಿತಿಗೆ ಅನುಗುಣವಾಗಿ ತಿಳಿಗೊಳಿಸುವುದುಂಟು. ಒಂದೊಂದು ಬಾರಿ ಮಾತುಗಳು ಕೇವಲ ಆಲಸ್ಯವಾಗಿ ಗಾಳಿಗೂ ಹೋಗಬಹುದು ಆದರೆ ಗಾದೆಮಾತುಗಳು ಮಾತ್ರ ಜೀವನ ಅನುಭವದಿಂದ ಹುಟ್ಟಿದವು ಎಂಬ ಕಾರಣ ಮಾತ್ರವಲ್ಲದೆ ಅವು ಆಕಾರದ ದೃಷ್ಟಿಯಿಂದಲೂ ಕೇಳುಗರ ಮನ ಸೂರೆಗೊಳ್ಳುತ್ತದೆ. ಆದ್ದರಿಂದಲೇ ಗಾದೆಗಳು ವೇದಗಳಿಂಗಿಂತಲೂ ಅಗ್ರಸ್ಥಾನದಲ್ಲಿವೆ ಎಂಬುದು ಜನಪದರ ನಂಬಿಕೆಯಾಗಿದೆ. ವೇದಗಳು ಅಕ್ಷರಗಳ ಬಲ್ಲವರಿಗೆ ಮಾತ್ರ ಸೀಮಿತವಾಗಿದ್ದರೆ ಗಾದೆಗಳು ಎಲ್ಲರ ಸ್ವತ್ತಾಗಿಯೇ ಇವೆ. ಆದರೆ ವೇದಗಳ ಜ್ಞಾನ ನಿರ್ದಿಷ್ಟವಾದದು ಮತ್ತು ಗಾದೆಗಳು ಕಾಲದಿಂದ ಕಾಲಕ್ಕೆ ಬೆಳೆದು ವಿಶಾಲವಾದ ಜ್ಞಾನ ಹೊಂದಿವೆ. ಈ ಗಾದೆಮಾತುಗಳ ಬಗ್ಗೆ ಪ್ರಾಚೀನ ಕಾಲದಲ್ಲಿ ಹಲವಾರು ವ್ಯಕ್ತಿಗಳು ಬಳಸಿದ್ದರು ಅವುಗಳನ್ನು ಸರಿಯಾದ ಸಂದರ್ಭಕ್ಕೆ ತಕ್ಕಂತೆ ಬಳಸಲಾಗಿಲ್ಲ ಇದಕ್ಕಾಗಿಯೇ ಗಾದೆಮಾತುಗಳ ಬಗ್ಗೆ ಹಲವು ವಿದ್ವಾಂಸರು ವ್ಯಾಖ್ಯಾನಗಳನ್ನು ನೀಡಿದ್ದಾರೆ.

ಡಾ.ದೇ.ಜವರೇಗೌಡ:- "ಕೆಲವೇ ಕೆಲವು ಅರ್ಥಗರ್ಭಿತವಾದ ಮಾತುಗಳುಳ್ಳ ಚಿಕ್ಕದೂ ಚೊಕ್ಕದಾಗಿದ್ದು ವ್ಯಾಕ್ಯವೇ ಗಾದೆ. ಅದು ಪದ್ಯದಂತೆ ಲಯಬಂಧ ಪ್ರಾಸಗಳುಳ್ಳದ್ದು ಗದ್ಯದಂತೆ ಗಣನಿಯಮವಿಲ್ಲದ್ದು ಅರಿವುಳ್ಳದ್ದು, ಸ್ಪಷ್ಟತೆವುಳ್ಳದ್ದು ಗದ್ಯ ಮತ್ತು ಪದ್ಯಗಳ ಲಕ್ಷಣಗಳನ್ನು ಅರ್ಥಪೂರ್ಣವಾಗಿ ಮೇಳೈಸಿಕೊಂಡ ವಿಶಿಷ್ಟ ಪ್ರಕಾರದ್ದು."–[೨೮]

ಇಸೆಲಿಯನ್:- "ಗಾದೆಗಳೆಂದರೆ ಜನಸಾಮಾನ್ಯರಲ್ಲ ಚಲಾವಣೆಯಲ್ಲಿರುವ ಮುದ್ರೆ ಬಿದ್ದಿರುವ ಪ್ರಚಲಿತವೂ ಸ್ವೀಕೃತ ಮೌಲ್ಯಭರಿತವೋ ಆಗಿರುವ ನಾಣ್ಯ. ಇದನ್ನು ಇನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಜನತೆಯ ಕೌಟುಂಬಿಕ ಪದವೇ ಗಾದೆಯೆನಿಸಿಕೊಳ್ಳುತ್ತದೆ."–[೨೯] ಈ ವ್ಯಾಖ್ಯಾನಗಳು ಬದುಕಿನ ಸಂದರ್ಭದಲ್ಲಿ ಹುಟ್ಟುವುದರಿಂದ ಅವು ಸಮಸ್ತ ಜೀವನದ ಅನುಭವದಿಂದ ಹೆಪ್ಪುಗಟ್ಟಿ ನಿಂತಿವೆ ಎಂದು ಹೇಳಬಹುದು. ಏಕೆಂದರೆ ಹಿರಿಯರು ಹೇಳಿದ್ದನ್ನು ಕಿರಿಯರು ಅದನ್ನು ಆಲಿಸಿ ನೆನಪಿನಲ್ಲಿಟ್ಟುಕೊಂಡು ಅಂತಹ ಸಮಯ ಸಂದರ್ಭ ಬಂದಾಗ ಪುನಃ ಉಚ್ಚರಿಸುವುದು ಗಾದೆಗಳು ಬಾಯಿಂದ ಬಾಯಿಗೆ, ತಲೆಮಾರಿನಿಂದ ತಲೆಮಾರಿಗೆ ಸಾಗಿಬರಲು ಮುಖ್ಯವಾದ ಕಾರಣವೆಂದರೆ ಜೀವನದ ಅನುಭವ.

'ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ' ಎಂಬ ಉಕ್ತಿಯಂತೆ ನನ್ನ ಅಧ್ಯಯನದ ದೃಷ್ಟಿಯಿಂದ ಕೆಲವೊಂದು ಶ್ರೀನುಂಕೆಮಲೆ ಸಿದ್ದೇಶ್ವರ ಪುರಾಣ ಒಂದು ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಪೂರಕವಾದ ಈ ಕೆಳಗಿನ ಗಾದೆಗಳನ್ನು ಬಳಸಿಕೊಂಡಿದ್ದೇನೆ.

೧.ಶಕ್ತಿಗಿಂತ ಯುಕ್ತಿ ಮೇಲು

೨.ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವೇನು

೩.ಆಪತ್ಕಾಲಕ್ಕೆ ಆದವನೇ ಬಂಧು

೪.ಅಂಜಿಕೆಯಿಲ್ಲದ ಕುದುರೆ ಅಂಗುಲ ಹಾರಿತು

೫.ದೇಶ ಸೇವೆಯೇ ಈಶ ಸೇವೆ

೬.ಈಸಬೇಕು ಇದ್ದು ಜಯಿಸಬೇಕು

೭.ಅಂಬಲಿಯ ಊಟ ಕಂಬಳಿಯ ಹೊದಿಕೆ

೧.ಶಕ್ತಿಗಿಂತ ಯುಕ್ತಿ ಮೇಲು:-

ಈ ಗಾದೆಮಾತಿನ ಅರ್ಥ ಶಕ್ತಿಗಿಂತ ಬುದ್ಧಿಶಕ್ತಿ ಮಿಗಿಲಾದುದು ಇದರ ಒಳಾರ್ಥ. ಈ ಉಕ್ತಿಯಂತೆ ಕೇವಲ ಶಕ್ತಿಯಿಂದಲೇ ಎಲ್ಲವನ್ನು ಗೆಲ್ಲುವುದು ಅಸಾಧ್ಯ. ಬದಲಾಗಿ ಯುಕ್ತಿ ಜ್ಞಾನ ಉಪಾಯವು ಮುಖ್ಯವಾಗಿದೆ. ಏಕೆಂದರೆ ನನ್ನ ಅಧ್ಯಯನಕ್ಕೆ ಒಳಪಡಿಸಿದಾಗ ವಿಷ ತುಂಬಿದ ರಾಕ್ಷಸರನ್ನು ಸುಲಭವಾಗಿ ಕೊಲ್ಲುವುದು ಕಷ್ಟ ಸಾಧ್ಯ ಆದರೆ ಭೈರವನು ಪದೇ ಪದೇ ದೈತ್ಯ ರಾಕ್ಷಸರ ಮೇಲೆ ಯುದ್ಧ ಮಾಡಿ ಸೋಲುಣ್ಣುತ್ತಿದ್ದನು. ಒಂದುಬಾರಿ ವಿಷವನ್ನು ಕುಡಿದು ಸಾವು ನೋವಿನ ಮಧ್ಯೆ ಹೋರಾಡುವ ಸ್ಥಿತಿಯಲ್ಲಿದ್ದಾಗ ಕರ್ಪೂರದಮ್ಮ ತನ್ನ ಕೂದಲಿನಿಂದ ಹೊಟ್ಟೆಯಲ್ಲಿದ್ದ ವಿಷವನ್ನು ತೆಗೆದು ಬದುಕಿಸಿದಳು. ಆದರೆ ಇದನ್ನು ತಿಳಿಯದೆ ಮತ್ತೆ ರಾಕ್ಷಸರ ವಿರುದ್ಧ ಹೋರಾಡಲು ಮುಂದದಾಗ ಅಕ್ಕ ಚಿಂತಿಸಿ ತಮ್ಮನಿಗೊಂದು ಹಿತಬುದ್ಧಿವಾದವನ್ನು ಹೇಳುವಳು ಅದೆಂದರೆ ನೀನು ಆ ದೈತ್ಯ ರಾಕ್ಷಸರನ್ನು ಸಂಹಾರ ಮಾಡಬೇಕಾದರೆ ನೀನು ಮೊದಲು ಭಿಕ್ಷೆಯಾಗಿ ವಿಷವನ್ನು ಖಾಲಿ ಮಾಡಿದ ನಂತರ ಅವರನ್ನು ಸಂಹಾರ ಮಾಡು ಎಂಬ ಯುಕ್ತಿಯ ಮಾತನ್ನು ಹೇಳಿದಾಗ ಭೈರವ ದೇವನು ಅಕ್ಕನ ಮಾತಿನಂತೆ ಕೊಲ್ಲುವನು. ಅದಕ್ಕಾಗಿಯೆ ಶಕ್ತಿಯ ಜೊತೆಗೆ ಯುಕ್ತಿಯು ಕೂಡ ಇರಬೇಕಾದುದು ಮುಖ್ಯವಾಗಿದೆ.

೨.ಮಿಂಚಿಹೋದ ಕಾಲಕ್ಕೆ ಚಿಂತಸಿದರೆ ಫಲವೇನು?

ಈ ಗಾದೆಮಾತಿನ ತಾತ್ಪರ್ಯವೆಂದರೆ ಯಾವುದೇ ಕೆಲಸವನ್ನು ಸಕಾಲದಲ್ಲಿ ಮಾಡಿ ಮುಗಿಸಬೇಕೆಂಬುದು ಇದರ ಅರ್ಥ. ಈ ಹಿನ್ನೆಲೆಯಾಗಿ ಗಾದೆಮಾತನ್ನು ನನ್ನ ಅಧ್ಯಯನಕ್ಕೆ ಬಳಸಿಕೊಂಡಾಗ ಭೈರವದೇವ ರಸಸಿದ್ಧ ರಾಕ್ಷಸರೊಂದಿಗೆ ಯುದ್ಧ ಮಾಡುವ ಸಂದರ್ಭದಲ್ಲಿ ಮಾಯ ಕುದುರೆಯನ್ನು ಏರಿ ಯರೆಮಲೆ ಬೆಟ್ಟ ಅಥವಾ ನುಂಕಮಲೆ ಬೆಟ್ಟದಲ್ಲಿರುವ ಇಳಿಜಾರಾದ ಗುಡ್ಡದ ಮೇಲೆ ಧಾವಿಸುವಾಗ ರಾಕ್ಷಸರೊಂದಿಗೆ ಯುದ್ಧ ಮಾಡುವಾಗ ಕುದುರೆಯ ಲಾಗಮು ಹರಿದು ಹೋಗುತ್ತದೆ. ಆದರೆ ಭೈರವ ಯುದ್ಧದಿಂದ ದೂರ ಸರಿಯದೇ ಸೋತನೆಂದು ಶರಣಾಗದೆ ಅದಕ್ಕೆ ಉಪಾಯ ಎನ್ನುವಂತೆ ಸಕಾಲದಲ್ಲಿ ಹರಳಯ್ಯನ ಸಹಾಯವನ್ನು ಬೇಡುತ್ತಾನೆ. ಅವನು ತನ್ನ ಮೈಯ ಮೇಲಿನ ಬಲಗಾಲಿನ ಹೆಬ್ಬೆಟ್ಟಿನಿಂದ ದೇಹದಲ್ಲಿರುವ ನರಗಳನ್ನು ಕಿತ್ತುಕೊಟ್ಟನು. ಭೈರವ ಇದನ್ನು ಲಗಾಮಾಗಿ ಮಾಡಿಕೊಂಡು ಯುದ್ಧದ ಕಾರ್ಯವನ್ನು ಸಕಾಲದಲ್ಲಿ ಮಾಡಿ ಮುಗಿಸುತ್ತಾನೆ.

೩.ಆಪತ್ಕಾಲಕ್ಕೆ ಆದವನೇ ಬಂಧು

ಈ ಗಾದೆಮಾತಿನ ತಾತ್ಪರ್ಯ ಎಂದರೆ ಕಷ್ಟಕಾಲಕ್ಕೆ ಆದವನು ಅಥವಾ ಸಹಾಯ ಮಾಡುವವನೇ ದೇವರು ಎಂಬುವುದು ಇದರಂತೆಯೇ ಭೈರವ ಹಾಗೂ ಅಕ್ಕ ಕರ್ಪೂರದಮ್ಮ ತಂದೆಯಾದ ಪರಶಿವನ ಆಜ್ಞೆಯಂತೆ ಭೂಲೋಕದ ಕಷ್ಟಕ್ಕೆ ಸ್ಪಂದಿಸಿ ಪರಿಹಾರ ಹಾಗೂ ರಾಕ್ಷಸರ ಸಂಹಾರ ಮಾಡಲೆಂದು ಶೃಂಗರಿಸಿದ ರಥದ ಮೇಲೆ ಭೂಲೋಕಕ್ಕೆ ಬಂದಾಗ

೧.ಕೊಟ್ಟೂರಿನ ಮೋಪ್ಪರಿಗೆ ಎಂಬ ಗ್ರಾಮದಲ್ಲಿ ಯಜಮಾನನ ಮಗ ಸತ್ತಿದ್ದು ಅವರ ಗೋಳು ಮುಗಿಲ ಮುಟ್ಟಿತು. ಇದನ್ನು ವಿಚಾರಿಸಿದ ಭೈರವ ತನ್ನ ಕೈಯಗಳ ಪಾದ ಸ್ಪರ್ಶದಿಂದ ಆ ಮಗುವನ್ನು ಬದುಕಿಸುತ್ತಾನೆ.

೨.ಎರಡನೆಯದಾಗಿ ನಂಜೇರಿ ಗ್ರಾಮದವರು ಮಳೆಗಾಗಿ ಪ್ರಾರ್ಥನೆ ಮಾಡುವವರು ಬರಗಾಲ ಬಂದು ಪ್ರಾಣಿ, ಪಕ್ಷಿ, ದನ, ಕರು ಮಾನವ ಸಂಕುಲವೆಲ್ಲ ನೀರಿಲ್ಲದೆ ಪ್ರಾಣ ಬಿಡುವ ಸಮಯದಲ್ಲಿ ಅಲ್ಲಿಗೆ ಆಗಮಿಸಿದ ಭೈರವ ನಿಮ್ಮ ಈ ಆರೋಧನೆಗೆ ಕಾರಣವೇನು ಎಂದು ತಿಳಿದು ಧಾರಕಾರವಾಗಿ ಮಳೆ ಸುರಿಸಿದನು. ಆಪತ್ತು ಕಾಲಕ್ಕೆ ಆದವನೇ ಬಂಧು ಎಂದು ಜನರು ಅವರನ್ನು ಕೊಂಡಾಡಿದರು.

೪.ಅಂಜಿಕೆಯಿಲ್ಲದ ಕುದುರೆ ಅಂಗುಲ ಹಾರಿತು

ಯಾರ ಭಯ ಭೀತಿಯಿಲ್ಲದೆ ಸ್ವಾತಂತ್ರ್ಯವಾಗಿ ಹಾರಾಡುವುದು ಎಂಬುದಾಗಿದೆ ಈ ಗಾದೆಯ ತಾತ್ಪರ್ಯ. ಇದರಂತೆಯೇ ಭೈರವ ದೇವ ಮಾಯ ಕುದುರೆಯೆನ್ನೇರಿ 'ಕುಮತಿಯ' ಬೆಟ್ಟವಾದ ನುಂಕೆಮಲೆ ಸಿದ್ದೇಶ್ವರ ಬೆಟ್ಟಕ್ಕೆ ಬಂದಾಗ ಅಲ್ಲಿ ರಸಸಿದ್ಧ ಎಂಬ ರಾಕ್ಷಸರು ಬಹಳ ಆಹಂಕಾರದಿಂದ ಮತ್ತು ಸ್ವರ್ಗ ನಮ್ಮದೇ, ನರಕ ನಮ್ಮದೇ ಎಂಬ ಭಾವನೆಯಿಂದ ಇರುವಾಗ ಕರಿಬಂಡೆಯ ಮೇಲೆ ಕುದುರೆಯನ್ನು ಏರಿ ಯಾವುದೇ ಅಂಜಿಕೆ ಅಳಕಿಲ್ಲದೆ ಯುದ್ಧ ಮಾಡಲು ಪ್ರಾರಂಭಿಸಿದನು.

೫.ದೇಶ ಸೇವೆಯೇ ಈಶ ಸೇವೆ

ಈ ಗಾದೆಯ ತಾತ್ಪರ್ಯ ಜನರ ಯೋಗಕ್ಷೇಮವೆ ಜಗತ್ತಿನ ಯೋಗಕ್ಷೇಮ. ಈ ಗಾದೆಮಾತನ್ನು ನನ್ನ ಅಧ್ಯಯನಕ್ಕೆ ಅಳವಡಿಸಿಕೊಂಡಾಗ ದೇಶ ನಮಗೆ ಏನು ಮಾಡಿದೆ ಅನ್ನುವುದಕ್ಕಿಂತ ದೇಶಕ್ಕಾಗಿ ನಾವೇನು ಮಾಡಿದ್ದೇವೆ ಎಂಬುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಭೂಲೋಕದಲ್ಲಿ ಹಲವು ವರ್ಷಗಳ ಕಾಲ ನರ ರಾಕ್ಷಸರು ಭೂಲೋಕವನ್ನು ಆಳುತ್ತಿದ್ದರು. ಜನರನ್ನು ಹಿಂಸೆಗೆ ಒಳಪಡಿಸಿ ಸರ್ವಾಧಿಕಾರವನ್ನು ಸ್ಥಾಪಿಸಿ ಕ್ರೂರವಾಗಿ ನಡೆದುಕೊಳ್ಳುತ್ತಿದ್ದರು. ಈ ಸಮಯದಲ್ಲಿ ದೇವಲೋಕದ ಒಡೆಯನಾದ ಪರಶಿವನ ಅನುಗ್ರಹದಂತೆ ಭೂಮಿಗೆ ಬಂದ ಭೈರವ ಅಲ್ಲಿರುವ ಜನರ ದುಃಖದುಮ್ಮಾನಗಳಿಗೆ ಸ್ಪಂದಿಸಿ ಹಾಗೂ ಸತ್ತ ಮಗನನ್ನು ಬದುಕಿಸಿದ್ದು ಬರಗಾಲದಲ್ಲಿ ತತ್ತರಿಸಿದ ಜನರಿಗೆ ಧಾರಕಾರವಾಗಿ ಮಳೆ ಸುರಿಸಿದನು. ಹಾಗೂ ಜನರು ದೇವರಂತೆ ಬಂದು ನಮ್ಮನ್ನು ಕಾಪಾಡಿದ್ದಿಯಾ ನೀನು ಇಲ್ಲೆ ನೆಲಸಬೇಕು ಎಂದಾಗ ಜನರ ಇಚ್ಚೆಯಂತೆ, ಜನರ ಸೇವೆಯೇ ಜನಾರ್ಧನನ ಸೇವೆ ಮಾಡಲಿಕ್ಕಾಗಿ ಅಲ್ಲಿ ನೆಲೆಸಿದನು.

೬.ಈಸಬೇಕು ಇದ್ದು ಜೈಸಬೇಕು

ಈ ಗಾದೆಮಾತಿನ ತಾತ್ಪರ್ಯ ಜೀವನದಲ್ಲಿ ಸೋಲು ಅಪಮಾನಗಳಿಗೆ ಎದರದೇ ಜೀವನವನ್ನು ಮುನ್ನಡೆಸುವುದು ಈ ಹಿನ್ನೆಲೆಯಲ್ಲಿ ನನ್ನ ಅಧ್ಯಯನಕ್ಕೆ ಅನ್ವಯಿಸಿದಾಗ ಕಾಟಣ್ಣನಿಗೂ ಮತ್ತು ಬಲ್ಲಾಳನಿಗೂ ಇವರಿಬ್ಬರ ಮಧ್ಯೆ ಯುದ್ಧ ನಡೆಯುವಾಗ ಬಲ್ಲಾಳನ ಹತ್ತಿರವಿರುವ ಭಯಾನಕ ಗುಂಡು ಮದ್ದುಗಳನ್ನು ನೋಡಿ ಕಾಟಣ್ಣನು ಭಯಭೀತನಾಗಿ

ಓಡಿಹೋಗಲು ಸಿದ್ಧವಾಗುತ್ತಾನೆ. ಆಗ ಭೈರವ ಮತ್ತು ತುಪ್ಪದಮ್ಮರು ಕಾಟಣ್ಣನಿಗೆ ಧೈರ್ಯ ತುಂಬಿ ಯುದ್ಧ ಮಾಡುವಂತೆ ಪ್ರೇರೆಪಿಸುತ್ತಾರೆ. ಆದರೆ ಬಲ್ಲಾಳನು ಗುಂಡುಮದ್ದಿನಿಂದ ಯುದ್ಧ ಮಾಡಲು ಪ್ರಾರಂಭಿಸಿದಾಗ ಕರ್ಪೂರದಮ್ಮ ಭಾರಿ ಮಳೆಯನ್ನು ತರಿಸಿ ಗುಂಡುಮದ್ದುಗಳನ್ನು ಸರ್ವನಾಶಮಾಡುತ್ತಾಳೆ. ಆಗ ತುಪ್ಪದಮ್ಮ ಕಾಟಣ್ಣನಿಗೆ ಈಸಬೇಕು ಇದ್ದು ಜೈಸಬೇಕು ಎಂಬ ನುಡಿಯ ಧೈರ್ಯದ ಮಾತುಗಳನ್ನು ಹೇಳಿದಳು.

೭.ಅಂಬಲಿಯ ಊಟ ಕಂಬಳಿಯ ಹೊದಿಕೆ

ಈ ಒಂದು ಗಾದೆಯ ಅರ್ಥ ಬಡತನದಲ್ಲಿ ಇರುವ ಜನರ ಸಾಂಕೇತಿಕವಾದ ಜೀವನ ಕ್ರಮ ತಿಳಿಸುವುದು ಹಿಂದಿನ ಕಾಲದಲ್ಲಿ ಜನರು ಕೇವಲ ರಾಗಿಯ ಗಂಜಿ ಅಥವಾ ಅಂಬಲಿಯನ್ನು ಕುಡಿದು ಚಳಿಗೆ ಕಂಬಳಿಯನ್ನು ಉತ್ತಮ ಹೊದಿಕೆಯಾಗಿ ಬಳಸುತ್ತಿದ್ದರು. ಬರುಬರುತ್ತಾ ಕಾಲ ಉರುಳಿದಂತೆ ಆಧುನಿಕತೆಗೆ ಮೊರೆಹೋಗಿ ಜೀವನ ಕ್ರಮವನ್ನು ಅಳವಡಿಸಿಕೊಂಡರು. ಆದರೆ ಹಿಂದಿನ ಹಿರಿಯರು ಕೇವಲ ರಾಗಿ ಅಂಬಲಿಯನ್ನು ಕುಡಿದು ಹಲವು ವರ್ಷಗಳು ಬದುಕುತ್ತಿದ್ದರು. ಇದರಂತೆ ಭೈರವದೇವನು ಕಾಟಣ್ಣನ ಮನೆಗೆ ಭೋಜನಕ್ಕೆ ಹೋದಾಗ ಗುಬ್ಬಿಯ ಸಾರು ಊಟಕ್ಕೆಂದು ನೀಡಿದಾಗ ಅಲ್ಲೆ ತ್ರಿಶೂಲವನ್ನು ನೆಟ್ಟು ನಮಗೂ ನಿಮಗೂ ದೇವರು 'ಗೋರಕ್ಷನಾಥ' ಈ ಎಡೆ ಅವರಿಗೆ ಮೀಸಲು ಎಂದು ನುಡಿದು ಆಹಾರವನ್ನು ಪಾಯಸವಾಗಿ ಮತ್ತು ಅಂಬಲಿಯಾಗಿ ಪರಿವರ್ತಿಸಿ ಬಡವರ ಮನೆಯಲ್ಲಿ ಊಟ ಚೆಂದ ಎಂಬಂತೆ ಭೋಜನಗೈದನು.

೨.ನುಡಿಗಟ್ಟುಗಳು

ನುಡಿಗಟ್ಟುಗಳು ಎಂದರೆ ಮಾತಿನಲ್ಲಿ ಬಳಸುವ ಪದ ಅಥವಾ ವಾಕ್ಯ. ಒಂದು ಸಾಮಾನ್ಯ ಅರ್ಥ, ಒಳಾರ್ಥವು ಬಹಳ ಸೂಚ್ಯವಾದ ಅರ್ಥವನ್ನು ಹೊಂದಿದ್ದರೆ ಅಂತಹವುಗಳಿಗೆ 'ನುಡಿಗಟ್ಟು' ಎಂದು ಕರೆಯುತ್ತಾರೆ. ಇಂತಹ ಹಲವಾರು ನುಡಿಗಟ್ಟುಗಳನ್ನು ನನ್ನ ಅಧ್ಯಯನಕ್ಕೆ ಸಂಬಂಧಿಸಿದಂತೆ ನುಂಕೆಮಲೆ ಸಿದ್ದೇಶ್ವರ ಪುರಾಣ ಎಂಬ ಕಾವ್ಯದಲ್ಲಿ ರಚನೆಯಾದ ಸಾಕಷ್ಟು ನುಡಿಗಟ್ಟುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ಅವುಗಳನ್ನು ಗುರುತಿಸುವಂತಹ ಪ್ರಯತ್ನ ಮಾಡಿದ್ದೇನೆ ಅವುಗಳೆಂದರೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಒಂದು ವಿಶಿಷ್ಟ ಅರ್ಥ ನೀಡುವ ಸಂಕ್ಷಿಪ್ತ ಶಬ್ಧವೇ ನುಡಿಗಟ್ಟು ಎಂದು ಹೇಳಬಹುದು.

೧.ಅಳಿಲು ಸೇವೆ – ನಿಷ್ಠೆಯಿಂದ ಮಾಡುವ ಅಲ್ಪಸೇವೆ

೨.ಕಂತೆ ಪುರಾಣ – ಯಾರಿಗೂ ಬೇಡವಾದ ಹಳೆಯ ವಿಚಾರ

೩. ಧರಣಿಗೆ – ಭೂಲೋಕಕ್ಕೆ

೪.ಅಗ್ರತಾಂಬೂಲ – ಮೊದಲ ಮರ್ಯಾದೆ

೫.ಎಲ್ಲಾರ ಬಾಯಿಯಲ್ಲಿರು – ಪ್ರಸಿದ್ಧನಾಗು

೬.ಪಿತ್ತ ಹೆಚ್ಚಾಗುತ – ಕೋಪ ನೆತ್ತಿಗೆರುವುದು

೭. ನಿಮ್ಮ ಚರನವ – ದೇವರ ಪಾದಗಳು, ಗುರುಗಳ ಪಾದಗಳು

೮.ವಿಷಪಾನ – ವಿಷದಿಂದ ಮಾಡಿದ ಅಮೃತ, ಕೆಟ್ಟ ವಿಷದ ರಸ

೯.ದೈತ್ಯರಾಣಿ – ಬಲಾಢ್ಯ ರಾಕ್ಷಸಿ

೧೦.ಹೊಟ್ಟೆಗಿಲ್ಲದೆ – ಆಹಾರವಿಲ್ಲದೆ, ಜೀವನಾಧರವಿಲ್ಲದೆ

೧೧.ಸೇವಕರು – ದೇವರ ಆರಾಧಕರು

೧೨.ರಥವನ್ನು ಶೃಂಗರಿಸಿ – ಹೊರಡಲು ಸಿದ್ಧನಾಗು

೧೩.ದುರ್ಜನರ ಸಂಹಾರ – ಕೆಟ್ಟ ಪಾಪಿಗಳನ್ನು ಕೊಲ್ಲುವುದು.

೧೪.ಕರಿಯ ಕಂಬಳಿ – ಗದ್ದಿಗೆ ಹಾಕುವಾಗ ಬಳಸುವ ಹೊದಿಕೆ

೧೫.ಕಣ್ಣಿನಲ್ಲಿ ಕಿಡಿಕಾರು – ತುಂಬಾ ಸಿಟ್ಟಾಗು

೧೬.ದಂತಕಥೆ – ಒಬ್ಬರಿಂದ ಮತ್ತೊಬ್ಬರಿಗೆ ಹೋಗುವ ಹಳೆಯ ಕಥೆ

೧೭.ಆಹುತಿಯಾಗು – ಬಲಿಯಾಗು

೧೮.ಅಪ್ಪಣೆ – ಒಪ್ಪಿಗೆ ಸೂಚನೆ

೧೯.ನೆತ್ತಿಗೇರು – ಗರ್ವತುಂಬು

೨೧.ಬಲಿಯಾಗು – ನಾಶವಾಗು

೨೨.ದಿಕ್ಕುಕೆಟ್ಟನು – ದಾರಿ ಕಾಣದೆ, ಉತ್ತರವಿಲ್ಲದೆ, ಪರಿತಪಿಸಿದ

೨೩.ಜ್ಞಾನವಿಲ್ಲದೆ – ಬುದ್ಧಿಹೀನ, ಅಜ್ಞಾನ, ಅವಿವೇಕಿತನ

೨೪.ಪಟ್ಟಾಭಿಷೇಕ – ಸಿಂಹಾಸನರೂಢ

ಇಂತಹ ನುಡಿಗಟ್ಟುಗಳನ್ನು ನನ್ನ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ಹಲವು ಅರ್ಥಗರ್ಭಿತವಾದ ಒಳಾರ್ಥ ನೀಡುತ್ತವೆ. ಉದಾಹರಣೆಗಾಗಿ ಗುಡ್ಡಕ್ಕೆ ಕಲ್ಲು ಹೊರು ಎಂಬ ನುಡಿಗಟ್ಟು ಬಾಹ್ಯರ್ಥ ಗುಡ್ಡಕ್ಕೆ ತೆಗೆದುಕೊಂಡು ಹೋಗು ಒಳಾರ್ಥ ವ್ಯರ್ಥ ಕೆಲಸ ಮಾಡು ಎಂಬ ಅರ್ಥ ಹೊಂದಿದೆ. ಇದರಂತೆ ಸಾಹಿತ್ಯಿಕವಾಗಿ ಹಲವು ನುಡಿಗಟ್ಟುಗಳನ್ನು ಬಳಸಿಕೊಂಡಿದ್ದೇನೆ. ಮೇಲೆ ಹೇಳಿದ ನುಡಿಗಟ್ಟುಗಳು ಇಂತಿಷ್ಟೆ ಇರುವವು ಎನ್ನುವುದು ಭ್ರಮೆ. ನನ್ನ ಅಧ್ಯಯನದ ವ್ಯಾಪ್ತಿಗೆ ಸಂಬಂಧಿಸಿದಂತೆ ನುಡಿಗಟ್ಟುಗಳನ್ನು ಮಾತ್ರ ಬಳಸಿಕೊಂಡು ಅವುಗಳ ಅರ್ಥ ವಿವರಣೆಯನ್ನು ತಿಳಿಸುವ ಪ್ರಯತ್ನ ಮಾಡಿದ್ದೇನೆ.

೩.ಸಂಗೀತ

ನುಂಕೆಮಲೆ ಸಿದ್ದೇಶ್ವರ ಪುರಾಣವನ್ನು ಸಾಹಿತ್ಯಿಕವಾಗಿ ನೋಡುವ ಪರಿಪಾಠಿಯಿಂದ ಹಲವಾರು ಸಾಹಿತ್ಯಿಕ ಅಂಶಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ಡಾ.ಕೆ.ರವೀಂದ್ರನಾಥ ಸಂಗ್ರಹಿಸಿದ ಕೃತಿ ನುಂಕೆಮಲೆ ಸಿದ್ದೇಶ್ವರ ಪುರಾಣ ಕಾವ್ಯದಲ್ಲಿ ಬಳಸಿರುವ ಸಂಗೀತಕ್ಕೆ ಸಂಬಂಧಿಸಿದಂತೆ

೧ಏಕತಾಳ

೨.ಅಟತಾಳ

೩.ಯಾಲಪದ

೪.ಜಂಪೆ

೫.ಅಟತಾಳ–ಅರ್ಧರೆಖಿ

ಈ ಎಲ್ಲಾ ಅಂಶಗಳನ್ನು ಹೇಗೆ ಬಳಸಿದ್ದಾರೆ ಎಂಬುದನ್ನು ಗಮನಿಸಿ ನುಂಕೆಮಲೆ ಸಿದ್ದೇಶ್ವರ ಪುರಾಣ ಒಂದು ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಸಂಗೀತವಾಗಿ ಹಲವು ಪದ್ಯಗಳನ್ನು ಗುರುತಿಸಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದೇನೆ.

೧.ಏಕತಾಳ

"ಹುಡುಕಾಟ ತರವಲ್ಲ। ಕಡುದುಷ್ಟೆ ದೈತ್ಯಳಿಹುಳು।

ಬಿಡದೆ ಅವಳ ಶಿರವ ಕಡೆದು ಬಿಸಾಡು

ಮಾಯಾವಿ ರಕ್ಕಸಿಯರು। ಪಾಯವ ಕೆಡಿಪರು।

ಆಯಾವ ನೋಡಿ ನೀ ಸಾಯಿಸು ಬೇಗ

ಪರಮೇಶ ನಾಜ್ಞೆಯನು। ಪರಿಯನು ಮರೆಯದೆ

ವರದಂತೆ ಅವತಾರ ಧರಿಸುತಾ ಬೇಗ

ಕರದೋಳ ಶೂಲವ ಧರಿಸಿ ನೀಪೋಗುತ।

ಶಿರವನು ಹಾರಿಸು ಮರೆತಿರಬೇಡ"[೩೦]

ಭೈರವ ಮತ್ತು ರಾಕ್ಷಸರ ಮಧ್ಯೆ ಯುದ್ಧ ನಡೆಯುವಾಗ ಕರ್ಪೂರದಮ್ಮ ಈ ಸಾಲುಗಳನ್ನು ಹೇಳುವಳು. ಅಂದರೆ ಶಿವನ ಆಜ್ಞೆಯಂತೆ ಹುಡುಕಾಟವನ್ನು ನಿಲ್ಲಿಸಿ ಕಾಲಭೈರವ ಅವತಾರ ಪುರುಷನಾಗಿ ರಾಕ್ಷಸರ ತಲೆಯನ್ನು ಬೇಗನೆ ಕತ್ತರಿಸು ಎಂಬ ಸೂಚನೆ ನೀಡುವಳು. ಇದರಂತೆ ಭೈರವನು ಕಾಲಭೈರವನಾಗಿ ರಾಕ್ಷಸರ ತಲೆಗಳನ್ನು ಕತ್ತರಿಸಿ ಚೆಂಡಾಡುವನು.

ಏಕತಾಳ ಪದ್ಯವಾಗಿ ಮತ್ತೊಂದು ಉದಾಹರಣೆಯನ್ನು ನೋಡುವುದಾದರೆ

"ಚಿಂತೆಯನು ಬಿಡು ತಾಯಿ । ಅಂತರಂಗದಿ ಸ್ಮರಿಸು ।

ಕಂತು ಹರನ ನೀನು ಸಂತಸದಿ ಸ್ಮರಿಸು

ತಂದೆಯ ಬಿಡಿಸಲು । ಇಂದೀಗ ಹೊರಟೆವು ।

ಚಂದದಿಂದಾಶೀರ್ವಾಸ ಇಂದು ನೀ ಮಾಡು

ಒಡನೆ ತೆರಳುತೆ ನಾವು । ಕಡೆಯ ಹುಡಿಗೆ ಹೋಗಿ ।

ಪಡೆದ ತಮದೆಯ ಬಿಡಿಸಿ ಒಡನೆ ಬರುವೆನು

ತಂದೆಯ ಬಿಡಸದೆ ಇಂದು ಬಂದರೆ ನಾವು ।

ಹಂದಿಯ ನರಕವು ತಿಂದಂತೆ ತಾಯಿ"[೩೧]

೨.ಅಟತಾಳ

"ವೀರ ಮಕ್ಕಳು ಸೇರಿ ಹೊರಟರು ।

ಮಾರಹರನ ಧ್ಯಾನ ಮಾಡುವ

ಆರು ಕಾಣಿಸದಂತೆ ನಡೆದರು ।

ಚೋರ ಮಾರ್ಗಗಲಿ

ತಪ್ತಮಾನಸರಾಗಿ ಅವರು

ಗುಪ್ತಮಾರ್ಗಯೆ ಅಸ್ತ್ರ ಧರಿಸಿ ।

ಗುಪ್ತಮಾರ್ಗದಿ ಹೊರಟು ಬಂದರು ।

ತಪ್ತ ಲೋಚನರು

ಕಡೆಯ ಹುಡಿಯ ಮಾರಿಕಣಿವೆಗೆ ।

ತಡವು ಮಾಡದೆ ಭರಧಿ ಬಂದರು ।

ತಡೆದ ತಂದೆಯ ಬಿಡಸೆ ತವಕದಿ

ಹಿಡಿದು ಕತ್ತಿಯನು"[೩೨]

೩.ಯಾಲಪದ

ಬಂದು ಇದ್ದ ನಮ್ಮ ಮನೆಯಲ್ಲಿ

ಚಂದದಿಂದ ಭೈರವ ಜೋಗಿ

ಅಂದು ಪುಜೆಯ ಮಾಡಿ ಎಲ್ಲಾರು । ಅಣ್ಣ ಕೇಳು ।

ವಂದನೆಯ ಮಾಡಿಯಿರುತಿರೆ

ಜೋಗಿ ಕೇಳ್ದ ನಮ್ಮಗಳಿಗೆ

ಭೋಗ ಭಾಗ್ಯವು ನಶ್ವರವೆಂದು

ಜೋಗಿ ಅಲ್ಲಾ ಆತ ಶಿವಯೋಗಿ । ಅಣ್ಣಕೇಳು ।

ನೀಗಿ ಬಿಟ್ಟೇವು । ಎಲ್ಲ ನಿಮ್ಮ

ಕೆಡಕು ದ್ವೇಷ ಎಲ್ಲ ತಿಳಿದು

ಒಡನೆ ಕರೆಯಲು ನನ್ನ ಕಳುಹಿಸಿದ । ಆ ಶಿವಯೋಗಿ

ಹಿಡಿಯವಳಿಗೆ ನಿಂತು ಇರುವವು"[೩೩]

ಇನ್ನು ಈ ಪುರಾಣದ ಕಾವ್ಯದಲ್ಲಿ ಜಂಪೆ ಮತ್ತು ಆಟತಾಳವನ್ನು ಗಮನಿಸಿದಾಗ ಅವು ಕಾವ್ಯರೂಪದ ರಚನೆಗೆ ಮುಖ್ಯಪಾತ್ರವಹಿಸುತ್ತವೆ.

೩.ಜಂಪೆ

"ಪತಿದೇವ ನಿಮ್ಮಿಂದೆ । ಹಿತದಿ ಬರುವೆನು ನಾನು ।
ಹತಭಾಗ್ಯಳೆನ ಮೇಲೆ । ಖತಿಗೊಳ್ಳಬೇಡ
ಪೊಡವಿಪನ ಬಳಿಯಲ್ಲಿ । ನಡೆದುದೆಲ್ಲವ ತಿಳದು
ಒಡನೆ ಬರುವೆನು ಪರಿಯೆ ತಡ ಮಾಡದಂತೆ
ಚಿತ್ತಜಾರಿಯ ಕೃಪೆಯು । ಮತ್ತೆ ನಿಮಗಿರಲಿ ।
ಪುತ್ರರಿಗೆ ಈ ವಾರ್ತೆ ವಿಸ್ತರದಿ ಪೇಳ್ವೆ"[೩೪]

೪.ವಚನ

"ಹೆಂಡತಿಯು ಹೇಳಲು ಕೆಂಚಯ್ಯನ ಹೆಂಡತಿಯನ್ನು ಕರೆದುಕೊಂಡು ಅರಮನೆಗೆ ಹೋಗಿ ಮರೆಯಲ್ಲಿ ನಿಲ್ಲಿಸಿ, ತಾನು ದೊರೆಯ ಬಳಿಗೆ ಬಂದು ನಮಸ್ಕರಿಸಿ ಕೈಕಟ್ಟಿಕೊಂಡು ನಿಲ್ಲಲು ಅರಸನು ಮಹಾ ಕೋಪದಿಂದ ಇವನನ್ನು ಹೊರಕ್ಕೆದಬ್ಬಿಸಿದ"

"ಕರಿಯ ಕಂಬಳಿಯ ಹಾಸಿ ಹಿರಿಯ ಗದ್ದುಗೆ ಮಾಡಿ

ವರಯತಿಯೆ ಕೂಡೆಂದು । ವರದ ಕಾಟಣ್ಣ

ನಲವಿಂದ ಜೋಗಪ್ಪ । ಹುಲಿಯ ಚರ್ಮವ ಹಾಸಿ

ಒಲಿದು ಕುಳಿತಿರಲಾಗ । ನಲಿದು ಕಾಟಣ್ಣ

ಪಾದ ಪದ್ಮವ ತೊಳೆದು ಪಾದತೀರ್ಥವ ಕುಡಿದು ।

ಮೋದದಲ್ಲಿ ಹಾಕಿದನು । ಮೋದಕದ ಎಲೆಯ

ಇರಿಸಿದಾ ಎಲೆ ಮೇಲೆ । ಬುರುಡೆ ಪಾತ್ರಯನಿರಿಸಿ

ಸ್ಥಿರದಿ ಕುಳಿತರೆ । ಜೋಗಿನರ ಊಟ ತಂದು

ಬಿದರಕ್ಕಿ ಅನ್ನವನು । ಕುದಿದ ಮಾಂಸದ ಸಾರು

ಮುದದಿಂದ ಬಡಿಸಿದನು । ಚದುರ ಕಾಟಣ್ಣ

ರೂಢಿಯೊಳು ಕಾಟಣ್ಣ । ಮೂಢ ಭಕ್ತಿಯ ಮಾಡೆ

ಗೂಢದಿಂದಲಿ ಜೋಗಿ ನೇಡಿ ನಸುನಕ್ಕ"[೩೫]

ಕೊನೆ ಟಿಪ್ಪಣಿಗಳು

೧.ನುಂಕೆಮಲೆ ಸಿದ್ದೇಶ್ವರ ಪುರಾಣ : ಡಾ. ಕೆ ರವೀಂದ್ರನಾಥ ಪುಟ ೧೫.

೨. ಅದೇ, ಪುಟ ೧೫

೩.ಅದೇ, ಪುಟ ೧೫

೪.ಅದೇ, ಪುಟ ೧೬

೫.ಅದೇ, ಪುಟ ೧೬

೬. ಅದೇ, ಪುಟ ೧೬

೭. ಅದೇ, ಪುಟ ೧೬

೮. ಅದೇ, ಪುಟ ೧೬

೯. ಅದೇ, ಪುಟ ೫೩

೧೦. ಅದೇ, ಪುಟ ೪೩

೧೧. ಅದೇ, ಪುಟ ೫೭

೧೨. ಅದೇ, ಪುಟ ೬೮

೧೩. ಅದೇ, ಪುಟ ೯೯

೧೪. ಅದೇ, ಪುಟ ೮೧

೧೫. ಅದೇ, ಪುಟ ೧೦

೧೬. ಅದೇ, ಪುಟ ೨೩

೧೭. ಅದೇ, ಪುಟ ೨೩

೧೮. ಕನ್ನಡ ಸಾಹಿತ್ಯ ಕೋಶ ; ಡಾ ರಾಜಪ್ಪ ದಳವಾಯಿ, ಪುಟ ೧೮

೧೯. ನುಂಕೆಮಲೆ ಸಿದ್ದೇಶ್ವರ ಪುರಾಣ : ಡಾ .ಕೆ ರವೀಂದ್ರನಾಥ, ಪುಟ ೫೬

೨೦. ಕನ್ನಡ ಸಾಹಿತ್ಯ ಕೋಶ : ಡಾ. ರಾಜಪ್ಪ ದಳವಾಯಿ, ಪುಟ ೬೮೭

೨೧. ನುಂಕೆಮಲೆ ಸಿದ್ದೇಶ್ವರ ಪುರಾಣ : ಡಾ. ಕೆ ರವೀಂದ್ರನಾಥ, ಪುಟ ೭೬

೨೨. ಅದೇ, ಪುಟ ೭೬

೨೩. ಅದೇ, ಪುಟ ೫೩

೨೪. ಅದೇ, ಪುಟ ೭೬

೨೫. ಅದೇ, ಪೀಠಿಕಾ ಭಾಗ – ೧

೨೬.ಕನ್ನಡ ಶಬ್ದಕೋಶ ;ರಾಜಪ್ಪ ದಳವಾಯಿ, ಪುಟ ೫೧೭

೧೭.ಅದೇ, ಪುಟ ೫೧೭

೨೮.ಪದವಿ ಪೂರ್ವ ಕಾಲೇಜ್ ಉಪನ್ಯಾಸಕರ ನೇಮಕಾತಿ ಪರೀಕ್ಷೆ, ಪುಟ ೫೪೫

೨೯.ಅದೇ, ಪುಟ ೫೪೬

೩೦. ನುಂಕೆಮಲೆ ಸಿದ್ದೇಶ್ವರ ಪುರಾಣ : ಡಾ ಕೆ ರವೀಂದ್ರನಾಥ, ಪುಟ ೩೦

೩೧.ಅದೇ,ಪುಟ ೬೬

೩೨.ಅದೇ,ಪುಟ ೬೭

೩೩.ಅದೇ, ಪುಟ ೪೯

೩೪.ಅದೇ, ಪುಟ ೬೫

೩೫.ಅದೇ, ಪುಟ ೪೧

ಅಧ್ಯಾಯ-೬

ಸಮಾರೋಪ

ಪರಾಮರ್ಶನ ಗ್ರಂಥಗಳು

ವಕ್ತೃವಿವರ

ಸಮಾರೋಪ

ಶ್ರೀನುಂಕೆಮಲೆ ಸಿದ್ದೇಶ್ವರ ಬೆಟ್ಟವು ಇತಿಹಾಸದ ಪುಟದಲ್ಲಿ ತನ್ನದೇಯಾದಂತಹ ಮಹತ್ವವನ್ನು ಪಡೆದುಕೊಂಡಿದೆ. ಇದು ಕರ್ನಾಟಕ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನಲ್ಲಿ ಕಂಡು ಬರುವ ಒಂದು ಸುಂದರವಾದ ರಮಣಿಯ ಪರ್ವತ ಕಣಿವೆಯಾಗಿದೆ. ಕರ್ನಾಟಕದ ಅಥವಾ ದಕ್ಷಿಣ ಭಾರತದಲ್ಲಿ ಆಳ್ವಿಕೆ ಮಾಡಿದಂತಹ ಮೊಟ್ಟಮೊದಲ ರಾಜವಂಶವೆಂದರೆ ಕದಂಬ ಈ ಕದಂಬರ ಅರಸನಾದ ಮಯೂರವರ್ಮನು ಆಳ್ವಿಕೆ ಮಾಡಿದ ಪ್ರಸಿದ್ಧ ಸ್ಥಳವಾಗಿದೆ. ಭಾರತ ದೇಶದಿಂದ ಹಲವು ಪುಣ್ಯಕ್ಷೇತ್ರಗಳಲ್ಲಿ ಶ್ರೀನುಂಕೆಮಲೆ ಬೆಟ್ಟವು ಒಂದು ಐತಿಹಾಸಿಕ ತಾಣವಾಗಿದೆ. ಏಕೆಂದರೆ ಈ ಬೆಟ್ಟದಿಂದ ಸುಮಾರು ೧೫ಕಿ.ಮೀ ದೂರದಲ್ಲಿರುವ ಜಟಿಂಗ ರಾಮೇಶ್ವರ ಬೆಟ್ಟ, ಬ್ರಹ್ಮಗಿರಿ ಬೆಟ್ಟವು ಐತಿಹಾಸಿಕ ಮಹಿಮೆಯನ್ನು ಸಾರುವ ಅಶೋಕನ ಶಿಲಾಶಾಸನಗಳು ಈ ಬೆಟ್ಟದಲ್ಲಿ ದೊರೆಯುತ್ತವೆ. ಕನ್ನಡದ ಮೊಟ್ಟ ಮೊದಲ ಪದವಾದ 'ಇಸಿಲ' ಎಂಬ ಪದವು ದೊರೆತಿದ್ದು ಇದರ ಅರ್ಥ ಕೋಟೆಯಿಂದ ಆವೃತವಾದ ಪ್ರದೇಶ ಎಂಬುದಾಗಿದೆ. ಇಂತಹ ಕ್ಷೇತ್ರಗಳಲ್ಲಿ ಪುಣ್ಯಪುರುಷನಾದ, ಪುರಾಣ ಪುರುಷನಾದ, ದೈವಿಪುರುಷನಾದ ಶ್ರೀಭೈರವ ದೇವನು ಹೇಗೆ ಪರಶಿವನ ಒಡ್ಡೋಲಗದಲ್ಲಿ ಗಂಧರ್ವ ಕನ್ಯೆಯರು ಶಿವನ ಎದುರುಗಡೆ ಅನೈತಿಕವಾಗಿ ನಡೆದುಕೊಂಡಾಗ ಶಿವನು ಭೂಲೋಕದಲ್ಲಿ ರಾಕ್ಷಸರಾಗಿ ಜನಿಸಿ ಎಂದು ಶಾಪವಿತ್ತನು. ಇವರ ಶಾಪವಿಮೋಚನೆಗಾಗಿ ಪರಮಾತ್ಮನ ಮಕ್ಕಳಾದ ಶ್ರೀಭೈರವ ಹಾಗೂ ಕರ್ಪೂರದಮ್ಮ ರಾಕ್ಷಸರಾಗಿ ಹುಟ್ಟಿದ ಗಂಧರ್ವ ಕನ್ಯೆಯರನ್ನು ಸಂಹಾರ ಮಾಡುವುದಕ್ಕಾಗಿ ಧರೆಗೆ ಬಂದನು ಎಂಬುದನ್ನು ಗಮನದಲ್ಲಿಟ್ಟುಕೊಂಡು ಹಲವಾರು ಸ್ಥಳಗಳಿಗೆ ಹಾಗೂ ಸ್ಥಳಿಯರ ಮಾಹಿತಿಯೊಂದಿಗೆ ಮತ್ತು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಹಲವು ಮಾಹಿತಿಯನ್ನು ಜೊತೆಗೆ ನಾನು ಕೇಳಿ ಕಂಡಂತಹ ದೃಶ್ಯ ಸತ್ಯದ ಆಧಾರದ ಮೇಲೆ ನುಂಕೆಮಲೆ ಸಿದ್ದೇಶ್ವರ ಪುರಾಣ ಒಂದು ಅಧ್ಯಯನ ಎಂಬ ವಿಷಯವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ.

ಯಾವುದೇ ಒಂದು ಅಧ್ಯಯನದಲ್ಲಿ ತೊಡಗಿಕೊಂಡಾಗ ತೀವ್ರವಾದಂತಹ ಹೊಸ ಮುಖಗಳು, ಹೊಸ ದಾರಿಗಳು ನವೀನವಾದಂತಹ ಜಗತ್ತಿಗೆ ಕಾಲಿಡುತ್ತವೆ. ಅಂತಹ ಅಧ್ಯಯನದಿಂದ ಅನುಭವವು ನನಗೂ ಆದುದ್ದೇ ಕಾರಣ ಮೌಖಿಕ ಚರಿತ್ರೆಯನ್ನು ಈಗ ಕಾಣಿಸಿರುವ ಐತಿಹ್ಯಗಳೊಂದಿಗೆ ಹೋಲಿಸಿ ನೋಡಿದರೆ ಕೆಲವೊಂದು ಸತ್ಯಗಳು

ಗೋಚರವಾಗುತ್ತವೆ. ಸತ್ಯಕ್ಕೆ ದೂರವಾದಂತಹ ಎಷ್ಟೋ ಅಂಶಗಳು ನನಗೆ ಸೂಕ್ಷ್ಮತೆಯಿಂದ ಅಧ್ಯಯನ ಕೈಗೊಂಡ ಸಂದರ್ಭದಲ್ಲಿ ನಿಖರವಾಗಿ ಹಾಗೂ ನಿರ್ದಿಷ್ಟವಾಗಿ ಗುರುತಿಸಲು ಅಥವಾ ದಾಖಲಿಸಲು ಯಾವುದೇ ಆಧಾರವಿಲ್ಲವಾದರೂ ನಾನು ಶಿಷ್ಟ ಪರಂಪರೆಯ ದೃಷ್ಟಿಕೋನದಿಂದ ಮೌಖಿಕ ಪರಂಪರೆಯ ಎಷ್ಟೋ ಅಂಶಗಳನ್ನು ಕಥೆ, ನಾಟಕ, ಗಾದೆಮಾತು, ಒಗಟು, ಪುರಾಣ ಹೀಗೆ ಹತ್ತು ಹಲವು ಅಂಶಗಳನ್ನು ಇಟ್ಟುಕೊಂಡು ಕಾರ್ಯಕ್ಷೇತ್ರದ ಮೂಲಕ ಅಧ್ಯಯನಕ್ಕೆ ಪೂರಕವಾದ ಅಂಶಗಳನ್ನು ಅಳವಡಿಸಿಕೊಂಡು ಪ್ರಾಮಾಣಿಕವಾಗಿ ಪ್ರಯತ್ನಿಸಿ ಈ ಪ್ರಬಂಧವನ್ನು ಮಂಡಿಸಲು ಇಚ್ಛಿಸಿದ್ದೇನೆ.

ಹಲವಾರು ಸ್ಥಳಿಯರೊಂದಿಗೆ ಸಂಪರ್ಕ ಮಾಡಿದ ಸಂದರ್ಭದಲ್ಲಿ ನನ್ನ ಅಧ್ಯಯನಕ್ಕೆ ಆರೋಗ್ಯಕರವಾದ ವಾತಾವರಣದಲ್ಲಿ ಸತ್ಯಾಂಶದ ಹಿನ್ನೆಲೆಯಲ್ಲಿ ಹಲವು ಗಟ್ಟಿ ಅಂಶಗಳನ್ನು ಕಟ್ಟಿಕೊಟ್ಟಿದ್ದೇನೆ ಈ ಹಿಂದೆ ಚರ್ಚಿಸಿದ ಅಂಶಗಳು ಚಾರಿತ್ರಿಕತೆ ಹಾಗೂ ಭೌಗೋಳಿಕವಾದಂತಹ ಅಂಶಗಳು ಹಲವು ಮಾಹಿತಿಗಳು ಪೂರಕವಾಗಿ ನನ್ನ ಅಧ್ಯಯನಕ್ಕೆ ದೊರೆಯುತ್ತವೆ. ಈ ಅಧ್ಯಯನಗಳಲ್ಲಿ ನನಗೆ ದೊರೆತಂತಹ ಅನುಭವವೆಂದರೆ ಜಾತ್ರೆಯ ವಿಧಿವಿಧಾನಗಳನ್ನು ಚರ್ಚಿಸುವಾಗ ಸತ್ಯದ ನೆರಳಿನಲ್ಲಿ ವಿಷಯ ದೊರೆತಿದ್ದು ಈ ಜಾತ್ರೆಯು ಮೂರು ದಿನಗಳ ಕಾಲ ನಡೆಯುತ್ತದೆ. ಮೊದಲನೆಯ ದಿನ ರಥೋತ್ಸವ ಎರಡನೆಯ ದಿನ ಸಿಡಿಯಾಡುವುದು ಮೂರನೆಯ ದಿನ ಸಿದ್ಧಿಭುಕ್ತಿ ಹಾಗೂ ಭಂಗಿಸೇವೆನೆಯ ಆಚರಣೆ ಬಹಳ ವಿಶೇಷವಾಗಿ ಗಮನಿಸಿದ ಆಚರಣೆಯ ಬಗ್ಗೆ ಸ್ಥಳಿಯರಿಂದ ಖುದ್ದಾಗಿ ಸಂಗ್ರಹಿಸಿ ಪ್ರಾಮಾಣಿಕವಾದ ಕಾರ್ಯ ಮಾಡಿದ್ದೇನೆ. ಈ ಹಿಂದಿನ ಎಲ್ಲಾ ಅಂಶಗಳು ಹಾಗೂ ನನ್ನ ಅಧ್ಯಯನದ ಫಲಿತಗಳು ಇಲ್ಲಿ ಕೆಲವು ಮೌಖಿಕವಾದ ಅಂಶಗಳನ್ನು ಬಳಸಿಕೊಳ್ಳುವುದರ ಮೂಲಕ ಗತವನ್ನು ಬಳಸಿಕೊಂಡಿದ್ದೇನೆ ಕಾರಣ ದೈವಿ ಪುರುಷ ಹುಟ್ಟು ಬೆಳವಣಿಗೆಗಳು ಕಥೆಯ ರೂಪವಾಗಿ ಬೆಳೆದಿರುವವು ಎಂಬುದು ಮುಖ್ಯವಾಗಿದೆ. ಹಾಗೆಯೇ ಗತಾಂಶವನ್ನು ಕಟ್ಟಲು ಪ್ರಯತ್ನಿಸಿದ್ದೇನೆ ಈ ಎಲ್ಲಾ ಅಧ್ಯಯನಗಳು ಸತ್ಯದ ನಿಲುವು ನನದಲ್ಲ, ನನ್ನ ಅಧ್ಯಯನದ ವ್ಯಾಪ್ತಿ ಎಲ್ಲಿಯವರೆಗೂ ಇದೆಯೊ ಮತ್ತು ನನ್ನ ಅಧ್ಯಯನಕ್ಕ ಎಷ್ಟನ್ನು ಬಳಸಬೇಕೊ ಅಷ್ಟನ್ನೇ ಬಳಸಿಕೊಂಡು ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದೇನೆ. ಇಂತಹ ಚರ್ಚೆಗಳ ಮೂಲಕ ತನ್ನದೇಯಾದ ನಿಲವುಗಳನ್ನು ನಾನು ಸಮರ್ಥಿಸಿಕೊಂಡಿದ್ದೇನೆ. ಅಂತಹ ಸಮರ್ಥನೆಯ ಪ್ರಬಂಧವೆ ನುಂಕೆಮಲೆ ಸಿದ್ದೇಶ್ವರ ಪುರಾಣ: ಒಂದು ಅಧ್ಯಯನವಾಗಿದೆ.

ಪರಾಮರ್ಶನ ಗ್ರಂಥಗಳು

೧.ಗಿರಿಜಾ.ಟಿ, ಚಿತ್ರಿದುರ್ಗ ಜಿಲ್ಲಾದರ್ಶಿನಿ, ೧೯೯೧, ರೇಖಾ ಪ್ರಕಾಶನ, ದಾವಣಗೆರೆ

೨.ಜಯಣ್ಣ ಸಿ.ವಿ. ಪದವಿಪೂರ್ವ ಕಾಲೇಜ್ ಉಪನ್ಯಾಸಕರ ನೇಮಕಾತಿ ಪರೀಕ್ಷೆ, ೨೦೧೪, ಸ್ವಪ್ನ ಬುಕ್ ಹೌಸ್, ಬೆಂಗಳೂರು

೩.ಜೋಗಿಆನಂದನಾಥ, ನಾಥ ಪಂಥ ಕ್ಷೇತ್ರ ಜೋಗಿಮಠ, ಕದರಿ, ಮಂಗಳೂರು, ೨೦೦೨, ನಾಥ ಪಂಥ ಪ್ರಚಾರ ಸಮಿತಿ, ಕರ್ನಾಟಕ

೪.ತಾರಿಹಳ್ಳಿ ಹನುಮಂತಪ್ಪ, ಕರ್ನಾಟಕದ ಉಗ್ರ ಆಚರಣೆಗಳು, ೨೦೧೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೫.ತಿಪ್ಪೇಸ್ವಾಮಿ ಮರಿಕುಂಟೆ, ಮೊಳಕಾಲ್ಮೂರು ದರ್ಶನ, ೨೦೧೨, ಪ್ರಣತಿ ಪ್ರಕಾಶನ, ಮೊಳಕಾಲ್ಮೂರು

೬.ತೆಲಗಾವಿ ಲಕ್ಷ್ಮಣ, ಚಿತ್ರದುರ್ಗ ಜಿಲ್ಲೆ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆಗಳು, ೨೦೦೪, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

೭.ನರಸಿಂಹಮೂರ್ತಿ ಎಚ್.ಡಿ, ನಮ್ಮ ಹಬ್ಬಗಳು, ೨೦೦೨, ವಿಕಾಶನ ಪ್ರಕಾಶನ, ಹಂಪಿ

೮.ಭೀಮಾರೆಡ್ಡಿ ಕೆ.ಎನ್, ಮೊಳಕಾಲ್ಮೂರು ತಾಲೂಕು ದರ್ಶನ, ೧೯೮೭, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು

೯.ಮಂಜುನಾಥ ಬೇವಿನಕಟ್ಟಿ, ಜನಪದ ನಂಬಿಕೆಗಳು, ೧೯೯೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦.ಮಂಜುನಾಥ ಬೇವಿನಕಟ್ಟಿ, ಗ್ರಾಮಸಮುದಾಯ ಸಂಕಥನ, ೨೦೧೮, ಅರುಣ ಪ್ರಕಾಶನ, ಬೆಂಗಳೂರು

೧೧.ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ೨೦೦೯, ಗೀತಾ ಬುಕ್ ಹೌಸ್, ಮೈಸೂರು

೧೨.ರಹಮತ್ ತರೀಕೆರೆ, ಕರ್ನಾಟಕದ ನಾಥಪಂಥ, ೨೦೦೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩.ರಂಗಪ್ಪ ಎಂ, ಮೊಳಕಾಲ್ಮೂರು ನುಂಕೆಮಲೆಯ ಸ್ವಸ್ವರೂಪ ದರ್ಪಣ, ೧೯೩೮, ಪ್ರೆಸಿಡೆಂಟ್ ತತ್ವಜ್ಞಾನಿ ಮಂದಿರ, ಮೊಳಕಾಲ್ಮೂರು

೧೪.ರವೀಂದ್ರನಾಥ ಕೆ, ನುಂಕೆಮಲೆ ಸಿದ್ದೇಶ್ವರ ಪುರಾಣ, ೨೦೦೮, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು

೧೫.ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಕೋಶ, ೨೦೧೮, ಲಾವಣ್ಯ ಮುದ್ರಣ ವಿದ್ಯಾಪೇಟೆ, ಬೆಂಗಳೂರು

೧೬.ಶ್ರೀಧರ ಎಸ್.ಜಿ, ನಾಥಪಂಥದ ಅನುವಾದಿತ ಕೃತಿಗಳು, ೨೦೦೫, ರಾಜೇಶ್ ಪವರ್‌ಪ್ರೆಸ್ ದರ್ಬೆ ಪುತ್ತೂರು, ದಕ್ಷಿಣ ಕನ್ನಡ

೧೭.ಸುಬ್ರಮಣಿ ಎ, ಎಸ್.ಎಂ.ವಿ ಗೋಲ್ಡ್, ೨೦೧೫, ಎಸ್.ಎಂ.ವಿ ಪ್ರಕಾಶನ, ಕೋಲಾರ

೧೮.ಸುರೇಶ್ ಕೆ.ಎಂ, ಸ್ಪರ್ಧಾ ವಿಜೇತ ಸಾಮಾನ್ಯ ಕನ್ನಡ, ೨೦೧೫, ಸ್ಪರ್ಧಾ ಪ್ರಕಾಶನ, ಬೆಂಗಳೂರು

೧೯.ಸೋಮಶೇಖರ್ ಎಸ್.ವೈ, ಜಟಂಗ ರಾಮೇಶ್ವರ ಸಾಂಸ್ಕೃತಿಕ ದರ್ಶನ, ೨೦೦೪, ಸುಮೇಧ ಪ್ರಕಾಶನ, ಚಿತ್ರದುರ್ಗ

೨೦.ಸೋಮಶೇಖರ್ ಎಸ್.ವೈ, ಕರ್ನಾಟಕ ದೇವಾಲಯಗಳ ಕೋಶ ಚಿತ್ರದುರ್ಗ ಜಿಲ್ಲೆ, ೨೦೧೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಪ್ರಕಟಿತ ಪ್ರಬಂಧಗಳು


೧.ಸಿದ್ಧಣ್ಣ ಎ, ನುಂಕೆಮಲೆ ಭೈರವಾರಾಧನೆ ಹೊಳಹು, ೨೦೦೩-೦೪, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨.ಮಂಜುನಾಥ ಟಿ, ಮೊಳಕಾಲ್ಮೂರು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ೨೦೧೫, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩.ಮೈಲಾರಪ್ಪ ಬಿ, ಮೊಳಕಾಲ್ಮೂರು ಸ್ಥಳನಾಮಗಳು, ೨೦೧೫, ಎಂ.ಫಿಲ್ ಅಪ್ರಕಟಿತ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಕ್ತೃವಿವರ

ಕ್ರಸಂ.	ಹೆಸರುಗಳು	ವಯಸ್ಸು	ವಿದ್ಯಾಭ್ಯಾಸ	ವೃತ್ತಿ	ಜಾತಿ	ಸ್ಥಳ/ಊರು
೧	ಬೋರಣ್ಣ	೪೬	ಎಸ್.ಎಸ್.ಎಲ್.ಸಿ	ವ್ಯವಸಾಯ	ನಾಯಕ	ಹಾನಗಲ್
೨	ಸಿದ್ದಣ್ಣ	೩೦	ಬಿ.ಎ., ಎಂ.ಎ	ವ್ಯಾಸಂಗ	ಎಸ್.ಸಿ	ಪೂಜಾರಿಹಟ್ಟಿ
೩	ಈರಮ್ಮ	೮೫	ಇಲ್ಲ	ಕೂಲಿ	ನಾಯಕ	ಹಾನಗಲ್
೪	ರಾಜಣ್ಣ	೨೮	ಎಂ.ಎ ಬಿ.ಇಡಿ	ಶಿಕ್ಷಕರು	ಎಸ್.ಸಿ	ಕೊಮ್ಮನಪಟ್ಟಿ
೫	ಕುಮಾರ ಸ್ವಾಮಿ	೩೫	ಪಿ.ಯು.ಸಿ	ಟೈಲರಿಂಗ್	ಲಿಂಗಾಯತ	ಕಾಟನಹಳ್ಳಿ
೬	ತಿಪ್ಪೇಸ್ವಾಮಿ	೬೦	ಇಲ್ಲ	ಕೂಲಿ	ನಾಯಕ	ನಾಗಸಮುದ್ರ
೭	ವೀರ ನಾರಾಯಣ	೪೮	ಎಸ್.ಎಸ್.ಎಲ್.ಸಿ	ಪೂಜಾರಿಕೆ	ಲಿಂಗಾಯತ	ಪೂಜಾರಿಹಟ್ಟಿ
೮	ಗೌರಮ್ಮಜ್ಜಿ	೭೫	ಇಲ್ಲ	ಕೂಲಿ	ನಾಯಕ	ಪೂಜಾರಿಹಟ್ಟಿ
೯	ನಾಗರಾಜ	೩೨	ಎಲ್.ಎಲ್.ಬಿ	ವಕೀಲರು	ನಾಯಕ	ಹಾನಗಲ್
೧೦	ಮುತ್ತುರಾಜ ಗೌಡ	೬೦	೭ನೇ ತರಗತಿ	ಶಾಸ್ತ್ರ	ಬ್ರಾಹ್ಮಣ	ಕೊಮ್ಮನಪಟ್ಟಿ
೧೧	ಪಾಪಣ್ಣ	೩೮	ಬಿ.ಎ.ಬಿ.ಇಡಿ	ಶಿಕ್ಷಕ	ನಾಯಕ	ಹಾನಗಲ್
೧೨	ಎಂ.ಗೋವಿಂದ	೩೮	ಇಲ್ಲ	ಕೂಲಿ	ನಾಯಕ	ನಾಗಸಮುದ್ರ
೧೩.	ಮಾರಣ್ಣ	೭೫	ಇಲ್ಲ	ವ್ಯವಸಾಯ	ನಾಯಕ	ಕೆಳಗಳಹಟ್ಟಿ
೧೪	ಶಾಂತವೀರಯ್ಯ	೬೯	ಇಲ್ಲ	ಕೂಲಿ	ಲಿಂಗಾಯತ	ನಾಗಸಮುದ್ರ



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ